
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಅಕ್ಟೋಬರ್ 7, 2009 ರೂ. 12/-



ಜಂಭ ಸವಾರಿ







ಸತ್ತ ಪತ್ನಿಯ ಮೇಲೆ ಭಟ್ಟನ ಅತ್ಯಾಚಾರ



ಅರಣ್ಯಚೋರ ಆನಂದ್ ಸಿಂಗ್



ಮಂಡ್ಯ: ಡೇಂಜರ್ ಶಿವ ಬಂಧನ ನಾಟಕ




ಟಿವಿ ನಟ ಉಮೇಶ್ ಹೆಗಡೆಯ ದೇವರ ಚಿತ್ರ

'ಸುಂದರ'ವಾಗಿ ವಿಕಾರವಾಗುತ್ತಿರುವ ಬೆಂಗಳೂರ

ಈ "ಸುಂದರ" ರಾಜಧಾನಿಗೆ ರಾಜ್ಯದ ಇತರೆಡೆಗಳಿಂದ ಪ್ರತಿಭಟನೆಯ ಹೆಸರಲ್ಲಿ ಲಗ್ಗೆ ಇಡುತ್ತಿದ್ದ ಎಲೆಯಡಿಕೆ ತಿನ್ನುವ, "ಸುಂದರ"ವಾದ ಧಿರಿಸು ಮತ್ತು ಮ್ಯಾನರ್ಸ್‌ಗಳ ಅರಿಯದ ರೈತ-ದಲಿತ-ಮತು ಕಾರ್ಮಿಕರು ಟ್ರಾಫಿಕ್ ಜಾಮ್ ಮಾಡಿ ಮಾಡಿ ನಗರ "ಸೌಂದರ್ಯ"ವನ್ನು ಹಾಳು ಮಾಡಲು ಸಾಧ್ಯವಿಲ್ಲ. ಇನ್ನುಮುಂದೆ ಬೆಂಗಳೂರ ನಗರದಲ್ಲಿ ಧಿಕ್ಕಾರಗಳ ಧ್ವನಿ ಇರುವುದಿಲ್ಲ. ಸರ್ಕಾರವನ್ನು ಹೀಯಾಳಿಸುವ ಭಿತ್ತಿಪತ್ರ ಗೋಡೆ ಬರಹಗಳಿರುವುದಿಲ್ಲ. ಹೀಗಾಗಿ ಬೆಂಗಳೂರು "ಜನರಿಂದ ಮುಕ್ತವಾಗಿ-ಜನ ಅಭಿವ್ಯಕ್ತಿಗಳಿಂದ ಮುಕ್ತವಾಗಿ" ಅತ್ಯಂತ ಸುಂದರವಾಗಿರುತ್ತದೆ. ಬೇಕಿದ್ದರೆ ಜನ ಕಾಸುಕೊಟ್ಟು ಕ್ಯೂಹಚ್ಚಿ ಈ ಸೌಂದರ್ಯವನ್ನು ನೋಡಬಹುದಷ್ಟೇ!!

ಪ್ರಾಯಶಃ ಇನ್ನೈದು ವರ್ಷ ಬೆಂದಕಾಳೂರಿನ ನೆನಪನ್ನೂ ಉಳಿಸದಂತೆ ಬೆಂಗಳೂರು ಬದಲಾಗಿರುತ್ತದೆ. ಮೆಟ್ರೊ ರೈಲು, ಏರಿಯಾಗಳಿಗೊಂದು ಫ್ಲೈ ಓವರ್, ಬಡಾವಣೆಗೊಂದು ನಳನಳಿಸುವ ಪಾರ್ಕುಗಳು, ಸರಾಗ ಓಡಾಟಕ್ಕೆ ಅನುಕೂಲವಾಗುವಂಥ



ಸಿಗ್ನಲ್ ಸಿಸ್ಟಮ್..! ಪ್ರಾಯಶಃ ಬೆಂಗಳೂರು ಇಂಡಿಯಾದಲ್ಲೇ 'ಅತ್ಯುತ್ತಮ'ವಾದ ನಗರವಾಗಲಿದೆ.

ಈ ಸಿಂಗಪೂರಿನಂಥ ಬೆಂಗಳೂರಿನ ಬೀದಿಗಳಲ್ಲಿ ಇನ್ನುಮುಂದೆ ಬೀದಿ ವ್ಯಾಪಾರಿಗಳ ಕಾಟವಿರುವುದಿಲ್ಲ. ಬೆಂಗಳೂರಿನ ಸಿಟಿ ಮಧ್ಯದಲ್ಲೂ ಗಂಟೆಗೆ 60 ಕಿಮೀ ವೇಗದಲ್ಲಿ ಹೋಗುವಂತೆ ರಸ್ತೆಗಳು ನಿರ್ಮಾಣವಾಗುತ್ತವಾದ್ದರಿಂದ ಅದರಲ್ಲಿ ನಿಧಾನಗತಿಯಲ್ಲಿ ಸಾಗುವ ಸೈಕಲ್ ಮತ್ತು ಆಟೋಗಳಿಗೆ ಅವಕಾಶವಿರುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇನ್ನು ಮುಂದೆ ರಾಜಧಾನಿಯ ಬೀದಿಗಳಲ್ಲಿ ಮೆರವಣಿಗೆ, ಮುಷ್ಕರ, ಧರಣಿ ನಡೆಸಿ ನಗರದ "ಸೌಂದರ್ಯವನ್ನು ಕೆಡಿಸುವುದಕ್ಕೆ" ಅವಕಾಶವಿರುವುದಿಲ್ಲ.

ಇನ್ನು ಮುಂದೆ ಈ "ಸುಂದರ" ರಾಜಧಾನಿಗೆ ರಾಜ್ಯದ ಇತರೆಡೆಗಳಿಂದ ಪ್ರತಿಭಟನೆಯ ಹೆಸರಲ್ಲಿ ಲಗ್ಗೆ ಇಡುತ್ತಿದ್ದ ಎಲೆಯಡಿಕೆ ತಿನ್ನುವ, "ಸುಂದರ"ವಾದ ಧಿರಿಸು ಮತ್ತು ಮ್ಯಾನರ್ಸ್‌ಗಳನ್ನು ಅರಿಯದ ರೈತ-ದಲಿತ-ಮತು ಕಾರ್ಮಿಕರು ಟ್ರಾಫಿಕ್ ಜಾಮ್ ಮಾಡಿ ಮಾಡಿ ನಗರ "ಸೌಂದರ್ಯ"ವನ್ನು ಹಾಳು ಮಾಡಲು ಸಾಧ್ಯವಿಲ್ಲ. ಏಕೆಂದರೆ ಇಂಥಾ ಸೌಂದರ್ಯ ವಿರೋಧಿ ಕ್ರಮವನ್ನು ತಡೆಗಟ್ಟಲು ಬೆಂಗಳೂರು ನಗರದ ಕಾನೂನು ಪಾಲಕರು-ಅಲ್ಲಲ್ಲ-ಸೌಂದರ್ಯ ಪಾಲಕರು ಹೊಸ ಕಾನೂನನ್ನೇ ಮಾಡಿದ್ದಾರೆ. ಅದರ ಪ್ರಕಾರ ಇನ್ನು ಮುಂದೆ ಬೆಂಗಳೂರಿನಲ್ಲಿ ಮೆರವಣಿಗೆ, ಪ್ರತಿಭಟನೆ ಮಾಡಬೇಕೆಂದರೆ ಕನಿಷ್ಠ ಒಂದು ವಾರಕ್ಕೆ ಮುಂಚಿತವಾಗಿ ಬೆಂಗಳೂರು ನಗರ ಪೊಲೀಸರ ಅನುಮತಿ ಪಡೆದಿರಬೇಕು. ಅನುಮತಿ ಕೊಡುವ ಮುನ್ನ ಪೊಲೀಸರು ಇಂಥಾ ಪ್ರತಿಭಟನೆಗಳನ್ನು ಮಾಡುವವರ ಹಿನ್ನೆಲೆ-ಮುನ್ನೆಲೆಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸುತ್ತಾರೆ. ನಗರದ "ಸೌಂದರ್ಯ" ಮತ್ತು ಸರಾಗ ಸಾರಿಗೆಗೆ ಧಕ್ಕೆ ಒದಗುತ್ತದೆ ಎಂದಾದರೆ ಅದೆಷ್ಟೇ ಮುಖ್ಯವಾಗಿದ್ದರೂ, ಜನರ ಬದುಕಿನ ದೃಷ್ಟಿಯಿಂದ ಎಷ್ಟೇ ಅತ್ಯಗತ್ಯವಾಗಿದ್ದರೂ ಅಂಥಾ ಪ್ರತಿಭಟನೆಗೆ ಅವಕಾಶವನ್ನೇ ನಿರಾಕರಿಸಿ ನಗರದ "ಸೌಂದರ್ಯ"ವನ್ನು ಕಾಪಾಡುತ್ತಾರೆ!



ಅದಕ್ಕೆ ಪೂರಕವಾಗಿ ಬೆಂಗಳೂರು ಮಹಾನಗರ ಪಾಲಿಕೆ ಸಹ ಬೆಂಗಳೂರಿನಲ್ಲಿ ಹೊಸ ಯೋಜನೆಯೊಂದನ್ನು ಜಾರಿಗೊಳಿಸುತ್ತಿದೆ. ಜನಸಂಘಟನೆಗಳು ಇಂಥಾ ಮುಷ್ಕರ, ಮೆರವಣಿಗೆಗಳಿಗೆ ಕರೆ ನೀಡಲು ಭಿತ್ತಿಪತ್ರ ಅಂಟಿಸಲು ಮತ್ತು ಗೋಡೆ ಬರಹಗಳನ್ನು ಮಾಡಲು ಬೆಂಗಳೂರಿನ ರಾಜಬೀದಿಗಳ ಇಕ್ಕೆಲಗಳಲ್ಲಿದ್ದ ಗೋಡೆಗಳನ್ನು ಬಳಸಿ ನಗರದ "ಸೌಂದರ್ಯ"ವನ್ನು "ಹಾಳು ಮಾಡುತ್ತಿದ್ದವು". ಅದನ್ನು ತಡೆಗಟ್ಟಲು ಬೆಂಗಳೂರು ಪೊಲೀಸ್ ಆಕ್ಟ್‌ನಲ್ಲಿ "ನಗರ ಸೌಂದರ್ಯ ವಿರೂಪಿಕರಣ (ತಡೆ)" ಕಾಯಿದೆಯಿತ್ತು. ಆದರೆ ಅದರಿಂದ ನಗರದಲ್ಲಿ ಭಿತ್ತಿಪತ್ರಗಳನ್ನು ಅಂಟಿಸುವುದಾಗಲೀ ಗೋಡೆ ಬರಹಗಳನ್ನು ತಡೆಯುವುದಾಗಲೀ ಸಾಧ್ಯವಾಗಿರಲಿಲ್ಲ. ಚುನಾವಣಾ ನೀತಿ ಸಂಹಿತೆಯಿಂದಾಗಿ ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಭಿತ್ತಿಪತ್ರ ಮತ್ತು ಗೋಡೆ ಬರಹಗಳನ್ನು ಕಡಿಮೆ ಮಾಡಿದ್ದು ನಿಜ. ಆದರೆ ಅದಕ್ಕೆ ಪರ್ಯಾಯವಾಗಿ ಅವರ ಬಳಿ ಜನರನ್ನು ತಲುಪುವ ಇನ್ನು ಹಲವು "ದುಬಾರಿ" ಮಾರ್ಗಗಳಿದ್ದವಾದ್ದರಿಂದ ಈ ಕಾಯಿದೆಯ ಬಗ್ಗೆ ಅವರು ಚಕಾರವೆತ್ತಲಿಲ್ಲ. ಗೋಡೆ ಬರಹಗಳ ಮತ್ತು ಭಿತ್ತಿಪತ್ರಗಳ ಮೂಲಕ ಮಾತ್ರ ಜನರನ್ನು ತಲುಪುವ ವಿಧಾನವನ್ನು ಬಳಸುತ್ತಿದ್ದದ್ದು ಸಂಪನ್ಮೂಲ ಬಲವಿಲ್ಲದ ಜನಪರ ಮತ್ತು ದುರ್ಬಲ ವರ್ಗಗಳ ಸಂಘಟನೆಗಳೇ. ಆದರೆ ಈ ವಿಧಾನಗಳಿಂದ ನಗರ ಸೌಂದರ್ಯ ಹಾಳಾಗುತ್ತ ಎಂದು ಎಷ್ಟೇ ಹೇಳಿದರೂ ರಾತ್ರೋರಾತ್ರಿ ಗೋಡೆ ಬರಹ ಮತ್ತು ಭಿತ್ತಿಪತ್ರಗಳನ್ನು ಅಂಟಿ ನಗರ ಸೌಂದರ್ಯವನ್ನು ಹಾಳುಮಾಡುತ್ತಿದ್ದರು ಸೌಂದರ್ಯ ಪ್ರಜ್ಞೆಯಿಲ್ಲದ ಜನಸಾಮಾನ್ಯರು.



ಅದನ್ನು ತಡೆಗಟ್ಟಲು ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರಿನ ರಾಜಬೀದಿಗಳಲ್ಲಿರುವ ಎಲ್ಲಾ ಗೋಡೆಗಳ ಮೇಲೂ ಈಗ ಮೂರಾಳೆತ್ತರದ ಶಾಶ್ವತ ವರ್ಣಚಿತ್ರಗಳನ್ನು ಬಿಡಿಸುತ್ತಿವೆ. ಈ ವರ್ಣಚಿತ್ರಗ ಸೌಂದರ್ಯಗಳನ್ನು ಎಷ್ಟು ಬಣ್ಣಿಸಿದರೂ ಸಾಲದ ಹೀಗಾಗಿ ಇನ್ನುಮುಂದೆ ಜನಸಂಘಟನೆಗಳಿಗೆ ಬೆಂಗಳೂರಿನಲ್ಲಿ ಜನರನ್ನು ತಲುಪುವ ಏಕೈಕ ವಿಧಾನವಾಗಿದ್ದ ಗೋಡೆಬರಹ ಮತ್ತು ಭಿತ್ತಿಪತ್ರಗಳು ಶಾಶ್ವತವಾಗಿ ನಿರಾಕರಿಸಲ್ಪಟ್ಟಿವೆ.

ಹೀಗಾಗಿ ಇನ್ನುಮುಂದೆ ಬೆಂಗಳೂರಿನ ನಗರದಲ್ಲಿ ಧಿಕ್ಕಾರಗಳ ಧ್ವನಿ ಇರುವುದಿಲ್ಲ. ಸರ್ಕಾರವನ್ನು ಹೀಯಾಳಿಸುವ ಭಿತ್ತಿಪತ್ರ ಗೋಡೆ ಬರಹಗಳಿರುವುದಿಲ್ಲ. ಹೀಗಾಗಿ ಬೆಂಗಳೂರು "ಜನರಿಂದ ಮುಕ್ತವಾಗಿ-ಜನರ ಅಭಿವ್ಯಕ್ತಿಗಳಿಂದ ಮುಕ್ತವಾಗಿ" ಅತ್ಯಂತ ಸುಂದರವಾಗಿರುತ್ತದೆ. ಬೇಕಿದ್ದರೆ ಜನ ಕಾಸುಕೊಟ್ಟು ಕ್ಯೂಹಚ್ಚಿ ಈ ಸೌಂದರ್ಯವನ್ನು ನೋಡಬಹುದಷ್ಟೇ!!

▶▶▶1



ಚಾರ್ವಾಕ

» ಶಿವಸುಂದರ್

ನೋ ಕಾಮೆಂಟ್ಸ್

"ವಿರೋಧ ಪಕ್ಷಗಳ ಗಲಿಬಿಲಿಯಿಂದಾಗಿ ಕಾಂಗ್ರೆಸ್‌ಗೆ ಖುಷಿಯಾಗಿರಬಹುದು. ಆದರೆ ಅದಕ್ಕೆ There Is No Alternative- TINA- ಬೇರೆ ಪರ್ಯಾಯವಿಲ್ಲವೆಂಬ ಏಕೈಕ ಕಾರಣದಿಂದ ಕಾಂಗ್ರೆಸ್ ಸುಸ್ಥಿತಿಯಲ್ಲಿದೆ. ಆದರೆ ದುರ್ಬಲ ವಿರೋಧ ಪಕ್ಷವಿರುವುದು ಒಂದು ಪ್ರಜಾತಂತ್ರಕ್ಕೆ ಒಳ್ಳೆಯದಲ್ಲ."

- ಅಮರ್ ಸಿಂಗ್, ಎಸ್‌ಪಿ ನಾಯಕ

"ಇಶ್ರತ್ ಜಹಾನರವರ ಎನ್‌ಕೌಂಟರ್ ಸುಳ್ಳು ಎಂಬ ಬಗ್ಗೆ ಮ್ಯಾಜಿಸ್ಟ್ರೇಟ್ ತಮಾಂಗ್ ಅವರ ವರದಿ ಬರದೇ ಇದ್ದಿದ್ದಲ್ಲಿ ಎಸ್‌ಐಟಿ (ಮೋದಿಯ ಅತಿರೇಕಗಳನ್ನು ತನಿಖೆ ಮಾಡಲು ರಚಿಸಲಾದ ತನಿಖಾ ತಂಡ) ಸಹ ಈ ಎನ್‌ಕೌಂಟರ್ ನಿಜವಾದದ್ದು ಎಂದೇ ನಂಬಬಹುದುತ್ತಿತ್ತು."

- ಗುಜರಾತಿನ ವಕೀಲರು

"ಇಂದು ಭಾರತದ ಶೇ.80ರಷ್ಟು ವೈದ್ಯಕೀಯ ಸೇವೆ ಖಾಸಗಿ ಕ್ಷೇತ್ರದ ಒಡೆತನದಲ್ಲಿದೆ ಮತ್ತು ಅದು ಜನತೆಯ ಆರೋಗ್ಯವನ್ನು ನೋಡಿಕೊಳ್ಳಲು ಸಮರ್ಥವಿಲ್ಲ ಎಂಬುದು ಇತ್ತೀಚಿನ ಹಂದಿಜ್ವರದ ಸಂದರ್ಭದಲ್ಲಿ ಸ್ಪಷ್ಟವಾಗಿ ರುಜುವಾತುಗೊಂಡಿದೆ."

- 'ಡೌನ್ ಟು ಅರ್ಥ್' ಪತ್ರಿಕೆಯ ವರದಿ

"ಭಾರತ ಸರ್ಕಾರ ಇನ್ನಾದರೂ ಡ್ಯಾಂಗಳು ಮತ್ತು ಕಾಲುವೆಗಳ ಮೇಲೆ ಹಣ ಹೂಡುವುದನ್ನು ಕಡಿಮೆ ಮಾಡಿ ಅಂತರ್ಜಲವನ್ನು ಹೆಚ್ಚಿಸುವ ಕಡೆ ಮತ್ತು ಪ್ರವಾಹದ ನೀರನ್ನು ಸಂಗ್ರಹಿಸುವ ಜಲತಾಣಗಳನ್ನು ನಿರ್ಮಿಸುವ ಕಡೆ ಗಮನ ಕೊಟ್ಟರೆ ಬರಡಾಮರುಗಳು ಜನರ ಜೀವನದ ಮೇಲೆ ಪ್ರಭಾವ ಬೀರದಂತೆ ತಡೆಗಟ್ಟಬಹುದು.

- ತುಷಾರ್ ಷಾ, ಚಿಂತಕ

"ನನ್ನನ್ನು ಬಿಜೆಪಿಗೆ ಸೇರಿಸಿಕೊಳ್ಳುವಾಗ ಎಂಎಲ್‌ಸಿ ಮಾಡ್ತೀನಿ ಅಂತ ಭರವಸೆ ಕೊಟ್ಟಿದ್ದರು. ಈಗ ಆ ಮಾತನ್ನೇ ಮರೆತಿದ್ದಾರೆ. ಆದ್ದರಿಂದಲೇ ನಾನು ಮತ್ತೆ ಕಾಂಗ್ರೆಸ್‌ಗೆ ಸೇರುವ ಯೋಚನೆ ಮಾಡುತ್ತಿದ್ದೀನಿ."

- ಎಚ್.ಸಿ. ಶ್ರೀಕಂಠಯ್ಯ

ನಂಬಿದ್ರೆನಂಬಿ ಬಿಟ್ರೆಬಿಡಿ



"ಅನಿಲ್ ಅಂಬಾನಿ ದೊಡ್ಡ ಹುಡುಗನಾಗಿದ್ದಾನೆ. ಅವನೀಗ ತನ್ನ ಸಮಸ್ಯೆಗಳನ್ನು ತಾನೇ ನಿಭಾಯಿಸಿಕೊಳ್ಳಬಲ್ಲ. ಅವನಿಗೆ ನನ್ನ ಸಹಾಯ ಬೇಕಿಲ್ಲ."

- ಅಮರ್ ಸಿಂಗ್

"ಒಬ್ಬ ಭ್ರಷ್ಟ ಹಾಗೂ ಅಸಮರ್ಥ ನ್ಯಾಯಾಧೀಶರನ್ನು ನೇಮಕ ಮಾಡುವುದರಿಂದ ಆಗುವ ಹಾನಿಯು ಯಾವುದೇ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳದೇ ಇರುವುದರಿಂದ ಆಗುವ ಹಾನಿಗಿಂತ ನೂರುಪಟ್ಟು ಹೆಚ್ಚಿನದು."

- ಅನಿಲ್ ದಿವಾನ್, ಸುಪ್ರೀಂ ಕೋರ್ಟಿನ ಹಿರಿಯ ವಕೀಲ

"2050ರೊಳಗೆ ಪರಿಸರ ತಾಪಮಾನವನ್ನು ನಿಯಂತ್ರಣಕ್ಕೆ ತರಬೇಕೆಂಬ ಗುರಿಯಿಟ್ಟುಕೊಳ್ಳುವುದು ಅಪ್ರಾಮಾಣಿಕತೆಯ ಅತಿರೇಕ. ಏಕೆಂದರೆ ಆ ವೇಳೆಗೆ ಅದಕ್ಕೆ ಹೊಣೆಗಾರರಾದ ನಾವು ಯಾರು ಇರುವುದೇ ಇಲ್ಲ."

- ಜೈರಾಂ ರಮೇಶ್, ಪರಿಸರ ಮಂತ್ರಿ

"ಅಡ್ವಾನಿ ಬಿಜೆಪಿಯಲ್ಲಿ ಕೊಳೆತ ಉಪ್ಪಿನಕಾಯಿ ಇದ್ದಂತೆ."

- ಮನೋಹರ್ ಪರಿಕ್ಕರ್, ಗೋವಾದ ಬಿಜೆಪಿಯ ನಾಯಕ

ಸತ್ತವರ ಆತ್ಮ-ಹತ್ಯೆ ಮಾಡಿದ YSR

"YSR ಸತ್ತ ನಂತರ ಆಂಧ್ರದಾದ್ಯಂತ 462 ಜನ ಸತ್ತರು. ವೈ.ಎಸ್.ಆರ್ ನಿಧನದಿಂದಾದ ದುಃಖವನ್ನು ತಡೆಯಲಾರದೆ 402 ಜನ ಹೃದಯಾಘಾತದಿಂದಲೂ 60 ಜನ ಆತ್ಮಹತ್ಯೆ ಮಾಡಿಕೊಂಡೂ ಸತ್ತರು ಎಂದು ವೈಎಸ್‌ಆರ್ ಮಗನ ಒಡೆತನದಲ್ಲಿರುವ ಸಾಕ್ಷಿ ಟಿವಿ ಚಾನೆಲ್ ವರದಿ ಮಾಡಿತು. ಆದರೆ 'ಮೇಲ್ ಟುಡೇ' ಎಂಬ ಮತ್ತೊಂದು ಮಾಧ್ಯಮ ಸಂಸ್ಥೆ ನಡೆಸಿದ ತನಿಖೆಯ ಪ್ರಕಾರ ಅದರಲ್ಲಿ ಬಹುಪಾಲು ಸಾವುಗಳಿಗೂ ವೈಎಸ್‌ಆರ್ ಸಾವಿಗೂ ಏನೇನೂ ಸಂಬಂಧವಿರಲಿಲ್ಲ. ಆದರೆ ಆ ಎಲ್ಲಾ ಕುಟುಂಬಗಳವರಿಗೆ ತಲಾ 5,000 ರೂ. ಕೊಟ್ಟು ವೈಎಸ್‌ಆರ್ ನಿಧನದಿಂದಾಗಿಯೇ ಸಾವು ಸಂಭವಿಸಿತೆಂದು ಹೇಳುವಂತೆ ತಾಕೀತು ಮಾಡಲಾಗಿತ್ತು."


-ತೆಹೆಲ್ಕಾ ವರದಿ

ಚೀನಾ ಮಾದರಿ ನೀತಿ-ಭಾರತೀಯ ಮಾದರಿ ಶಿಕ್ಷೆ!

"ಚೀನಾ ಮಾದರಿಯಲ್ಲಿ ಭಾರತದಲ್ಲಿ ಸಹ ಎರಡು ಮಕ್ಕಳ ನೀತಿಯನ್ನು ಕಡ್ಡಾಯ ಮಾಡುವುದರ ಬಗ್ಗೆ ಚಿಂತಿಸುತ್ತಿರುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಇದೊಂದು ಅತ್ಯಂತ ಜನವಿರೋಧಿ ನೀತಿಯಾಗಿದ್ದು ಮಾನವ ಅಭಿವೃದ್ಧಿಯ ಬಗೆಗಿನ ಇತರ ಮುಖ್ಯ ವಿಷಯಗಳಿಂದ ಈ ನೀತಿ ದಾರಿ ತಪ್ಪಿಸುತ್ತಿದೆ. ವಾಸ್ತವವಾಗಿ ಎರಡು ಮಕ್ಕಳ ಕಡ್ಡಾಯ ನೀತಿಯನ್ನು ಜಾರಿಗೆ ತಂದ ರಾಜಸ್ಥಾನದಲ್ಲಿ ಇದರ ಪರಿಣಾಮದ ಬಗ್ಗೆ ಒಂದು ಅಧ್ಯಯನ ನಡೆದಿದೆ. ಅದರ ಪ್ರಕಾರ ಈ ನೀತಿಯಿಂದಾಗಿ ಬಲವಂತದ ಗರ್ಭಪಾತಗಳು ಹೆಚ್ಚಾಗಿವೆ. ಹುಟ್ಟಿದ ಹೆಣ್ಣುಮಕ್ಕಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಅಲ್ಲದೆ ಹೆಣ್ಣುಮಕ್ಕಳನ್ನು ಹೆತ್ತ ತಾಯಂದಿರನ್ನು ಗಂಡ ಮತ್ತು ಅತ್ತೆ ಮಾವಂದಿರು ಉದಾಸೀನ ಮಾಡುವ ಅಥವಾ ಮನೆಯಿಂದ ಹೊರಗಟ್ಟುವ ಪ್ರಕರಣಗಳು ಹೆಚ್ಚಾಗುತ್ತಿವೆ."

- ಜನಾರೋಗ್ಯ ಆಂದೋಲನ-ಕರ್ನಾಟಕ

ಬಾಲಿವುಡ್ಡಿನಲ್ಲಿ ದುಷ್ಟರಾಗದ ಕಾರ್ಪೊರೇಟ್ ಧಣಿಗಳು



"ಬಾಲಿವುಡ್ ಸಿನಿಮಾಗಳು ಭಾರತದ ಸಮಕಾಲೀನ ಕಾರ್ಪೊರೇಟ್ ಲೋಕವನ್ನು ಸರಿಯಾಗಿ ಚಿತ್ರಿಸುತ್ತಿಲ್ಲ. 1950ರ ದಶಕದಲ್ಲಿ ಬಾಲಿವುಡ್ ಚಿತ್ರದಲ್ಲಿ ಶ್ರೀಮಂತನಾಗಬೇಕೆಂದರೆ ಅಡ್ಡದಾರಿ ಹಿಡಿಯಲೇ ಬೇಕೆನ್ನುವ ಯಥಾರ್ಥ ಚಿತ್ರಣವಿರುತ್ತಿತ್ತು. ಆದರೆ ಜಾಗತೀಕರಣದ ಪ್ರಸ್ತುತ ಕಾಲಘಟ್ಟದಲ್ಲಿ ಯಾವುದೇ ರೀತಿ ಹಣ ಮಾಡಿ ಶ್ರೀಮಂತರಾಗುವುದು ಯಶಸ್ಸಿನ ಸಂಕೇತವೆಂದೇ ಚಿತ್ರಿತವಾಗುತ್ತದೆ. ಇತ್ತೀಚಿನ 'ಗುರು', 'ಕಾರ್ಪೊರೇಟ್' ಇದಕ್ಕೆ ಒಂದೆರಡು ಉದಾಹರಣೆಗಳು."

- ಶ್ಯಾಂ ಬೆನೆಗಲ್

5 ಮಕ್ಕಳು, 8 ಮೊಮ್ಮಕ್ಕಳ ಯಡ್ಡಿಯ '2' ಜಪ



ಕಂಡಹಾಗೆ

■ ಗೌರಿ ಲಂಕೇಶ್

ಮುಖ್ಯಮಂತ್ರಿ ಯಡಿಯೂರಪ್ಪ ಎಂತಹ
ಷ್ಟು ಎಂದರೆ ಚೀನಾ ದೇಶದ ಪ್ರವಾಸದಿಂದ
ಗುತ್ತಿದ್ದಂತೆ "ಇನ್ನು ಮುಂದೆ ಎರಡಕ್ಕಿಂತ
ಮಕ್ಕಳನ್ನು ಹೊಂದುವ ಬಡವರಿಗೆ ಸರ್ಕಾರಿ
ಗಳು ಸಿಗದಂತೆ ಕಾನೂನು ತರಬೇಕಿದೆ.
ಇದರ ಬಗ್ಗೆ 100% ಸೀರಿಯಸ್
ನೆ. ಜನಸಂಖ್ಯೆಯನ್ನು ನಿಯಂತ್ರಿಸುವ
ಕು ಸಿದ್ಧಪಡಿಸಬೇಕು" ಎಂದೆಲ್ಲ ಬಡ
ಸಿದ್ದಾರೆಯೇ ಹೊರತು, ಇಂತಹದ್ದೇ
ನಿಂದಾಗಿ ಇವತ್ತು ಚೀನಾ ಎಂತೆಂತಹ
ಗಳನ್ನು ಎದುರಿಸುತ್ತಿದೆ, ಆ ಸಮಸ್ಯೆಗಳನ್ನು
ಸಲು ಏನೇನು ಮಾಡಬಹುದೆಂಬ
ಳ ಮುಖ್ಯಾಂಶಗಳೇನು ಎಂದು
ಕೊಳ್ಳುವ ಗೋಜಿಗೇ ಹೋಗಿಲ್ಲ. ಇಂತಹ
ಖಾಮಣಿಯನ್ನು ರಾಜ್ಯದ ನಾಯಕನಾಗಿ
ವ ಕನ್ನಡಿಗರು ಬರುವ ಮೂರೂವರೆ
ಳ ಕಾಲ ಇನ್ನು ಏನೇನು
ಸಬೇಕಿದೆಯೋ?

ನಾದಲ್ಲಿ "ಜ್ಞಾನೋದಯ" ಪಡೆದ
ಯೂರಪ್ಪನಿಗೆ ಅಲ್ಲಿನ ಸಂಶೋಧಕರೇ
ೆ ಬಹಿರಂಗಪಡಿಸಿರುವ "ಜ್ಞಾನ" ಗೊತ್ತಿಲ್ಲ.
ಇಲ್ಲಿ ಸಂಕ್ಷಿಪ್ತವಾಗಿ ಹೇಳಿ
ವರೆಯಬಹುದು. ಚೀನಾದ ಜನಸಂಖ್ಯೆ
ತ್ರಣ ಕಾರ್ಯಕ್ರಮಗಳನ್ನು ಕುರಿತು ಸರ್ಕಾರಕ್ಕೆ
ನೀಡುವ ಲೀ ವೈಕ್ಸಿಯೊಂಗ್ ಎಂಬುವವರು
ಮಾರ್ಚ್ ತಿಂಗಳಲ್ಲಿ ಅಲ್ಲಿನ
ಕ್ಕೆ ಎಚ್ಚರಿಕೆಯೊಂದನ್ನು
ರೆ. ಅದರಂತೆ ಇನ್ನು ಹತ್ತು
ಳಲ್ಲಿ (2020) ಚೀನಾದಲ್ಲಿ
ಪ್ರಾಯದ
ಯರಿಗಿಂತ ಕನಿಷ್ಠ 40
ಯನ್ ಹೆಚ್ಚು ಯುವಕರಿರುತ್ತಾರೆ.
ಅಸಮತೋಲನ ಯಾವುದೇ
ದ ಆರೋಗ್ಯಕ್ಕೆ
ಕಾಗಿರುವುದಿಲ್ಲ. ಯಾಕೆಂದರೆ
ಯರ ಅಭಾವದಿಂದಾಗಿ
ಾಟಕೆ ಮತ್ತು ಮಹಿಳೆಯರ
ಾಣಿಕೆ ಹೆಚ್ಚಾಗುತ್ತದೆ. ವಿಧಿ
ಶಾಶ್ವತವಾಗಿ ಅವಿವಾಹಿತರಾಗಿ
ವ ಯುವಕರಿಂದಾಗಿ ಕ್ರೈಮ್
ತ್ತದಲ್ಲದೆ ಸಲಿಂಗಕಾಮವೂ
ಸುತ್ತದೆ. ಇದೆಲ್ಲದರ ಜೊತೆಗೆ
ಯರ ಶೋಷಣೆ
ರುತ್ತದೆ" ಎಂದು ಲೀ
ರೆ. ಹೀಗಿದ್ದರೂ ಯಡ್ಡಿ
ಮಂತ್ರ" ಜಪಿಸುತ್ತಿರುವುದು
ದವಾಗಿ ಕಾಣಿಸುತ್ತಿಲ್ಲವೇ?

ಡಿಯೂರಪ್ಪನಷ್ಟೇ 'ಭಂಡರಾದ ಚೀನಾದ
ರು 1979 ರಲ್ಲಿ ಜಾರಿಗೆ ಬಂದ 'ಒಂದೇ
ಕಾನೂನಿನಿಂದಾಗಿ 300 ಮಿಲಿಯನ್
ನ್ನು ತಡೆದಿದ್ದೇವೆ; ಈ ಕಾರಣಕ್ಕಾಗಿ ಇಂದು
ಪ್ರಗತಿಪಥದಲ್ಲಿದೆ ಎಂದು ವಾದಿಸುತ್ತಿದ್ದಾರೆ.
ಅವರ ಸರ್ಕಾರದ ವಿವಿಧ ಇಲಾಖೆಗಳು,
ವರದಿಗಳು ಮತ್ತು ಸಮೀಕ್ಷೆಗಳು
ದೇನೆಂದರೆ ಜನಸಂಖ್ಯಾ ನಿಯಂತ್ರಣ
ಂದಾಗಿ ಅಲ್ಲಿಯ ಮಹಿಳೆಯರ ಮೇಲಿನ
, ಗರ್ಭದಲ್ಲೇ ಹೆಣ್ಣುಸುಗುವಿನ
ತ್ಯೆ, ಪುಟ್ಟ ಹೆಣ್ಣುಮಕ್ಕಳ ಕಗ್ಗೊಲೆ,
ವಾಗಿ ಗರ್ಭಿಣಿಯರ ಗರ್ಭಪಾತ...
ಎಲ್ಲಾ ದುಷ್ಕೃತ್ಯಗಳೂ ಹೆಚ್ಚಾಗಿವೆ.
ಕೃತ್ಯಗಳನ್ನು ಈಗಾಗಲೇ ಎದುರಿಸುತ್ತಿರುವ
ದಲ್ಲಿ ಹೆಚ್ಚಿಸಲು ಯಡ್ಡಿ
ಿದೆ.
ಂತ ಕಾನೂನನ್ನು ಇಲ್ಲಿ ಜಾರಿ ಮಾಡಿದರೆ
ಅನಾಹುತಗಳಾಗುತ್ತವೆಂದು
ಳ್ಳಬೇಕಿದ್ದರೆ ಇವತ್ತಿನ ಚೀನಾ

ಸಮಾಜವನ್ನು ನೋಡಬೇಕು. ಹೇಳಿಕೇಳಿ, ಚೀನಾ ಮತ್ತು ಭಾರತದ ನಡುವೆ ಹಲವು ಸಾಮಾಜಿಕ ಸಾಮ್ಯತೆಗಳಿವೆ. ಅವುಗಳಲ್ಲಿ ಪ್ರಮುಖವಾದದ್ದು 'ವಂಶೋದ್ಧಾರಕ' ಗಂಡು ಮಗುವಿಗಾಗಿ ದಂಪತಿಗಳು ಹಂಬಲಿಸುವುದು. ಈ ಒಂದೇ ಒಂದು ಕಾರಣಕ್ಕಾಗಿ ಚೀನಾದಲ್ಲಿ ಕಳೆದ ಮೂರುದಶಕಗಳಿಂದ ಗರ್ಭದಲ್ಲೇ ಅಥವಾ ಜನಿಸುತ್ತಲೇ ಕೊಲ್ಲಲ್ಪಟ್ಟ ಹೆಣ್ಣುಮಕ್ಕಳ ಸಂಖ್ಯೆಯೇ ಮಿಲಿಯನ್‌ಗಟ್ಟಲೆ ಆಗುತ್ತದೆ. ಅದು ಹೇಗೋ ಜನ್ಮ ತಾಳಿದ ಹೆಣ್ಣು ಕಂದಮ್ಮಗಳೂ ನಿರ್ಲಕ್ಷ್ಯಕ್ಕೊಳಗಾಗಿ ಮಣ್ಣು ಸೇರಿದ್ದೂ ಮಿಲಿಯನ್ ಲೆಕ್ಕದಲ್ಲೇ. ಹಾಗೆಯೇ ಗಂಡು ಮಕ್ಕಳಿಗಾಗಿ ಹಪಹಪಿಸಿ ಬೇಡವಾದ ಹೆಣ್ಣುಮಕ್ಕಳನ್ನು ಅನಾಥಾಶ್ರಮಗಳಿಗೆ ದೂಡಿದ್ದೂ ಲಕ್ಷಾಂತರ ಸಂಖ್ಯೆಯಲ್ಲೇ. ಅದೆಲ್ಲದರಷ್ಟೇ ಮುಖ್ಯವಾದ ಇನ್ನೊಂದು ಅಂಶ ಯಾವುದೆಂದರೆ ಗಂಡುಮಕ್ಕಳನ್ನು ಹಡೆಯದ ಹೆಂಡತಿಯರನ್ನೂ ದೌರ್ಜನ್ಯಕ್ಕೆ ಗುರಿ ಮಾಡಿದ್ದು, ಬೀದಿಪಾಲು ಮಾಡಿದ್ದೂ ಲಕ್ಷಾಂತರ ಸಂಖ್ಯೆಯಲ್ಲೇ. ಇನ್ನು ಜನಸಂಖ್ಯಾ ನಿಯಂತ್ರಣ ಇಲಾಖೆಯ ಅಧಿಕಾರಿಗಳು ಕೇವಲ ಎರಡು ವರ್ಷಗಳ ಹಿಂದೆ ಗುವಾನ್ಸ್‌ಗ್ಸಿ ಎಂಬ ಪ್ರಾಂತ್ಯದಲ್ಲಿ ಎಂತಹ ದುರಾಡಳಿತ ನಡೆಸಿದರೆಂದರೆ ಗರ್ಭಿಣಿಯರನ್ನು ಬಲವಂತವಾಗಿ ಆಸ್ಪತ್ರೆಗಳಿಗೆ ಎಳೆದೊಯ್ದು ಅವರ ಗರ್ಭಗಳಿಗೆ ಸಲೈನ್ ಇಂಜೆಕ್ಷನ್‌ಗಳನ್ನು ಚುಚ್ಚಿ ಸತ್ತ ಮಕ್ಕಳಿಗೆ ಜನ್ಮ ನೀಡುವಂತೆ ಮಾಡಿದ್ದರು. ಇದು ಕೊನೆಗೆ ಯಾವ ಹಂತ ತಲುಪಿತೆಂದರೆ ಗುವಾನ್‌ಗ್ಸಿಯಲ್ಲಿ ದಂಗೆಗಳು ನಡೆದು ಹತ್ತಾರು ಅಮಾಯಕರೂ, ಹಲವು ಅಧಿಕಾರಿಗಳೂ ಸಾವನ್ನಪ್ಪಿದರು. ಇದೆಲ್ಲವೂ ಇಲ್ಲಿಯೂ ನಡೆಯಲಿ ಎಂಬುದು ಕಿಡಿಗೇಡಿ ಯಡ್ಡಿಯ ಆಶಯವೇ?

ಚೀನಾಗೆ ಹೋಗಿದ್ದಾಗ ಯಡಿಯೂರಪ್ಪ ಶಾಂಘಾಯ್ ಎಂಬ ನಗರಕ್ಕೂ ಭೇಟಿ ನೀಡಿದರು. ಚೀನಾದ ಇತರೆ ನಗರಗಳಿಗಿಂತ ಹೆಚ್ಚು ಅಭಿವೃದ್ಧಿ ಹೊಂದಿರುವ ಶಾಂಘಾಯ್ ಒಂದು ರೀತಿಯಲ್ಲಿ ಚೀನಾ ಯಾವ ದಿಕ್ಕಿನತ್ತ ಸಾಗುತ್ತಿದೆ ಎಂಬುದಕ್ಕೆ ದಿಕ್ಸೂಚಿಯಾಗಿರುವ ನಗರ. ಆದ್ದರಿಂದ ಶಾಂಘಾಯ್‌ನ ಜನಸಂಖ್ಯಾ ವಿವರಗಳನ್ನು ಯಡ್ಡಿ ಪಡೆದಿದ್ದರೆ ಅವರಿಗೆ ಜ್ಞಾನೋದಯವಿರಲಿ, ಬುದ್ಧಿಯಾದರೂ ಕೊಂಚ ಬೆಳೆಯುತ್ತಿತ್ತು. ಯಾಕೆಂದರೆ ಇವತ್ತು ಶಾಂಘಾಯ್‌ನಲ್ಲಿ ಒಂದೆಡೆ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದ್ದು ಇನ್ನೊಂದೆಡೆ ಯುವಕರ ಸಂಖ್ಯೆ ಎಷ್ಟು ವೇಗವಾಗಿ ಕುಸಿಯುತ್ತಿದೆ ಎಂದರೆ ಒಂದು ಸಮೀಕ್ಷೆಯ ಪ್ರಕಾರ ಇನ್ನು ಎರಡು ದಶಕಗಳಲ್ಲಿ ಅದು ಮುದುಕರ ನಗರವಾಗುತ್ತದೆ ಮತ್ತು ಕೆಲಸ ಮಾಡಲು ದೈಹಿಕ ಶಕ್ತಿ ಹೊಂದಿರುವವರೇ ಇಲ್ಲವಾಗುತ್ತದೆ. ಈ ಕಾರಣಕ್ಕಾಗಿಯೇ ಕಳೆದ ವರ್ಷದಿಂದ ಶಾಂಘಾಯ್‌ನಲ್ಲಿ ಹೆಚ್ಚು ಮಕ್ಕಳನ್ನು ಹಡೆಯಲು ಅಲ್ಲಿನ ಸರ್ಕಾರವೇ ಪ್ರೋತ್ಸಾಹಿಸುತ್ತಿದೆ.

ಆದರೆ ತಲೆ ಖಾಲಿಯಾಗಿರುವ ಯಡಿಯೂರಪ್ಪನವರಿಗೆ ಇದ್ಯಾವುದೂ ಕಂಡಿಲ್ಲ ಅಥವಾ ಅರ್ಥವಾಗಿಲ್ಲ, ಆದ್ದರಿಂದಲೇ ಅವರು "ಶಾಂಘಾಯ್ ಬೆಂಗಳೂರಿನಂತಿದೆ. ಅಲ್ಲಿನ ಗ್ರಾಮೀಣ ಪ್ರದೇಶಗಳು ಅಚ್ಚುಕಟ್ಟಾಗಿವೆ" ಎಂದೆಲ್ಲ ಹೇಳಿಕೆ ನೀಡಿದ್ದಾರೆ.

ಇತ್ತೀಚೆಗೆ ಬಡವರ ಮಕ್ಕಳಿಗೆಂದು ಹಲವಾರು ಕಾರ್ಯಕ್ರಮಗಳನ್ನು ಘೋಷಿಸಿ ಆ ಮಕ್ಕಳೊಂದಿಗೆ ಹಲ್ಲು ಕಿರಿಯುತ್ತಾ ಫೋಟೋ ತೆಗೆಸಿಕೊಂಡಿದ್ದ ಯಡಿಯೂರಪ್ಪ ಈಗ ಅದೇ ಬಡ ಜನತೆಗೆ ಸರ್ಕಾರಿ ಸೌಲಭ್ಯಗಳನ್ನು ನಿರಾಕರಿಸುತ್ತೇನೆ ಎಂದಿರುವುದೂ ಸೋಜಿಗವಾಗಿದೆ.

ಜನಸಂಖ್ಯೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಕಾನ್ಫರೆನ್ಸ್ ಎಷ್ಟು ಮಕ್ಕಳನ್ನು ಹಡೆಯಬೇಕೆಂಬುದು ವೈಯಕ್ತಿಕ ನಿರ್ಧಾರವಾಗಬೇಕೆ ಹೊರತು ಅದನ್ನು ಸರ್ಕಾರ ನಿರ್ಧರಿಸುವಂತಿಲ್ಲ ಎಂದಿದೆ ಮತ್ತು ಅದಕ್ಕೆ ಭಾರತ ಸರ್ಕಾರ ತನ್ನ ಸಮ್ಮತಿ ಸೂಚಿಸಿದೆ ಎಂಬುದು ಯಡ್ಡಿಗೆ ಗೊತ್ತಿರುವಂತಿಲ್ಲ. ಹಾಗೆಯೇ, ಇತ್ತೀಚೆಗೆ ಲಂಡನ್ನಿನ ಕಾರ್ಯಕ್ರಮವೊಂದರಲ್ಲಿ ಕೇಂದ್ರ ಸರ್ಕಾರದ ವಾಣಿಜ್ಯ ಸಚಿವ ಆನಂದ ಶರ್ಮಾ ಅವರು "ಭಾರತದಲ್ಲಿ ಜಗತ್ತಿನ ಶೇ. 20 ಮಕ್ಕಳಿದ್ದಾರೆ" ಎಂದು ನೆನಪಿಸಿದ್ದೂ, ಆ ಮೂಲಕ ಇನ್ನೆರಡು ದಶಕಗಳಲ್ಲಿ ವಿಶ್ವದ ಇತರೆ ದೇಶಗಳಲ್ಲಿ ಮುದುಕರೆ ಹೆಚ್ಚಾಗಿರುವಾಗ, ಭಾರತವೇ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುವ ಕೈಗಳನ್ನು ಹೊಂದಿರುತ್ತದೆ ಎಂದು ಹೇಳಿದ್ದೂ ಯಡ್ಡಿಗೆ ಗೊತ್ತಿಲ್ಲ. ಅಷ್ಟೇ ಅಲ್ಲ, ಚೀನಾದ ಕಾನೂನುಗಳಿಂದಾಗಿ ಅಲ್ಲಿ ಪುರುಷ-ಮಹಿಳೆಯರ ಅನುಪಾತದಲ್ಲಿ ಅಪಾರ ವ್ಯತ್ಯಾಸ ಉಂಟಾಗಿದ್ದರೆ, ಅದೇ ಅವಧಿಯಲ್ಲಿ ಯಾವ ಜನಸಂಖ್ಯಾ ನಿಯಂತ್ರಣ ಕಾನೂನು ಇಲ್ಲದೆಯೂ ಭಾರತದ ಕೇರಳ ರಾಜ್ಯದಲ್ಲಿ ಚೀನಾಗಿಂತ ಕಡಿಮೆ ಶೇಕಡಾವಾರು ಜನನಗಳಾಗಿದ್ದವು ಎಂಬುದರ ಬಗ್ಗೆ ಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ವಿಶ್ಲೇಷಿಸಿರುವುದರ ಬಗ್ಗೆಯೂ ಯಡ್ಡಿಗೆ ಅರಿವೇ ಇಲ್ಲ.

ವಾಸ್ತವವಾಗಿ ಇವತ್ತು ಜಗತ್ತಿನಾದ್ಯಂತ ಫಲವತ್ತತೆಯ ದರ ಕುಗ್ಗುತ್ತಿದೆ. ಚೀನಾದಲ್ಲಿ ಬಲವಂತವಾಗಿ ಕಾನೂನನ್ನು ಹೇರಿದ್ದರಿಂದ ಅಲ್ಲಿ ಪ್ರಸ್ತುತ ಫಲವತ್ತತೆಯ ದರ 1.7 (ಅದು ಮಿಲಿಯನ್‌ಗಟ್ಟಲೆ ಅಮಾಯಕ ಭ್ರೂಣಗಳನ್ನು ಹತ್ಯೆ ಮಾಡಿದ ಮತ್ತು ಹೆಣ್ಣುಮಕ್ಕಳನ್ನು ಬಾಲ್ಯದಲ್ಲೇ ಕೊಂದ ನಂತರ ಎಂಬುದನ್ನು ಮತ್ತೊಮ್ಮೆ ನೆನಪಿಸುತ್ತಾ). ಆದರೆ ಅಂತಹ ಯಾವ ಕಾನೂನು ಇಲ್ಲದ ಕರ್ನಾಟಕದಲ್ಲಿ ಫಲವತ್ತತೆಯ ದರ ಕಳೆದ ಹಲವಾರು ವರ್ಷಗಳಿಂದ 2.1 ಕ್ಕೆ ಸ್ಥಿರಗೊಂಡಿದೆ. ಮಾತ್ರವಲ್ಲ, ನಿರೋಧ್ ಬಳಕೆಯೂ ಶೇ. 58 ರಿಂದ ಶೇ. 64 ಕ್ಕೆ ಏರಿದೆ. ಹೀಗೆ ಜನಸಂಖ್ಯೆ ನಿಯಂತ್ರಣವಾಗುತ್ತಿರುವಾಗ ಮತ್ತೊಂದು ಕಾನೂನಿನ ಅಗತ್ಯವೇನು ಯಡಿಯೂರಪ್ಪನವರಿಗೆ?

ಜನಸಂಖ್ಯಾ ನಿಯಂತ್ರಣ ಕುರಿತಂತೆ ಚೀನಾದ ಅಂಕಿಅಂಶಗಳು, ವಿಶ್ವಸಂಸ್ಥೆಯ ಸಮೀಕ್ಷೆಗಳು, ಅಮರ್ತ್ಯ ಸೇನ್ ಅವರ ಲೇಖನಗಳು, ಇದ್ಯಾವುದನ್ನೂ ಯಡಿಯೂರಪ್ಪ ಓದದಿದ್ದರೂ ಪರವಾಗಿಲ್ಲ, ಜನ ಆರೋಗ್ಯ ಆಂದೋಲನ ಕರ್ನಾಟಕ ಎಂಬ ಬೆಂಗಳೂರಿನ ಎನ್‌ಜಿಓ ಇತ್ತೀಚೆಗೆ ಬಿಡುಗಡೆ ಮಾಡಿರುವ ಎರಡು ಪುಟಗಳ ಪತ್ರಿಕಾ ಹೇಳಿಕೆಯನ್ನಾದರೂ ಅವರು ಒಮ್ಮೆ ಓದಲಿ.


ಅದರ ಆಯ್ದ ಭಾಗಗಳು ಹೀಗಿದೆ:

"ಕರ್ನಾಟಕದಲ್ಲಿ ಇವತ್ತು ಫಲವತ್ತತೆ ದರಕ್ಕಿಂತ ಹೆಚ್ಚು ಮುಖ್ಯವಾಗಿರುವುದು ನಮ್ಮ ಸಮಾಜದ ಆರೋಗ್ಯ. ಈ ರಾಜ್ಯದಲ್ಲಿ ರಕ್ತಹೀನ ಗರ್ಭಿಣಿಯರ ಸಂಖ್ಯೆ ಶೇ. 59.5 ಕ್ಕೆ ಏರಿದೆ. ಹಾಗೆಯೇ ರಕ್ತಹೀನ ಹಸುಗೂಸುಗಳ ಪ್ರಮಾಣವೂ ಗಾಬರಿ ಹುಟ್ಟಿಸುವ ಶೇ. 82.78 ಕ್ಕೆ ಏರಿದೆ. ಇದೇ ವೇಳೆ ಲಸಿಕೆ ಪಡೆಯುವ ಮಕ್ಕಳ ಸಂಖ್ಯೆ 60 ರಿಂದ ಶೇ. 50 ಕ್ಕೆ ಕುಗ್ಗಿದೆ. ಭೇದಿಯಿಂದ ಬಳಲುತ್ತಿರುವವರಲ್ಲಿ ಶೇ. 31.9 ಮಕ್ಕಳಿಗೆ ಮಾತ್ರ ಔಷಧ ಲಭ್ಯವಾಗುತ್ತಿದೆ. ಮೂರು ವರ್ಷಕ್ಕಿಂತ ಚಿಕ್ಕವರಾದ ಮಕ್ಕಳಲ್ಲಿ ಶೇ. 37.6 ರಷ್ಟು ಮಕ್ಕಳ ದೇಹ ತೂಕ ಕಡಿಮೆ ಇದೆ. ಪಕ್ಕದ ಕೇರಳ ರಾಜ್ಯದಲ್ಲಿ ಪ್ರತಿ 1000 ಕ್ಕೆ ಕೇವಲ 15.3 ಮಕ್ಕಳು ಅಕಾಲಿಕವಾಗಿ ಸಾವನಪ್ಪುತ್ತಿದ್ದರೆ ಕರ್ನಾಟಕದಲ್ಲಿ ಪ್ರತಿ 1000 ಮಕ್ಕಳಲ್ಲಿ ಬರೋಬ್ಬರಿ 43.2 ಮಕ್ಕಳು ಕೊನೆಯುಸಿರೆಳೆಯುತ್ತಿದ್ದಾರೆ."

"ಅಭಿವೃದ್ಧಿಗೂ, ಜನಸಂಖ್ಯಾ ನಿಯಂತ್ರಣಕ್ಕೂ ನೇರ ಸಂಬಂಧವಿರುವುದರಿಂದ ಹೊಸ ಕಾನೂನಿನ ಬದಲಾಗಿ ಅಭಿವೃದ್ಧಿಯನ್ನು ಹೆಚ್ಚಿಸಿದರೆ ಜನಸಂಖ್ಯೆ ತಂತಾನಾಗೇ ಕುಗ್ಗುತ್ತದೆ. ನಮ್ಮ ರಾಜಕೀಯ ನಾಯಕರಿಗೆ ಇದು ಆದಷ್ಟು ಬೇಗ ಅರ್ಥವಾಗಬೇಕಿದೆ."

ವಿಶ್ವಸಂಸ್ಥೆ ಆದಿಯಾಗಿ ಎಲ್ಲಾ ಪ್ರಜ್ಞಾವಂತರೂ ಹೇಳುವುದೇನೆಂದರೆ 'ಎರಡು ಮಕ್ಕಳು ಮಾತ್ರ' ಎಂಬಂತಹ ಕಾನೂನುಗಳು ಮಾನವಹಕ್ಕುಗಳ ವಿರೋಧಿ ಮಾತ್ರವಲ್ಲ, ಭಾರತದಂತಹ ದೇಶದ ಅಮಾಯಕ ಮಕ್ಕಳ, ಮಹಿಳೆಯರ, ಬಡವರ, ದೀನದಲಿತರ, ಅಲ್ಪಸಂಖ್ಯಾತರ ವಿರೋಧಿ ಕಾನೂನೂ ಆಗುತ್ತದೆ.

ಚೀನಾ ಮಂತ್ರ ಜಪಿಸುತ್ತಿರುವ ಯಡಿಯೂರಪ್ಪನವರಿಗೆ ಯಾರಾದರೂ ಒಬ್ಬರು ಆದಷ್ಟು ಬೇಗ ಬುದ್ಧಿ ಹೇಳಬೇಕಿದೆಯಲ್ಲಾ? ●






ಇದು ದುಂದುವೆಚ್ಚ ಉಳಿಸುವ ವಿಧಾನ!

ಕೇಂದ್ರದ ಯುಪಿಎ ಸರ್ಕಾರ ತನ್ನ ಮಂತ್ರಿಗಳಿಗೆ, ಎಂಪಿಗಳಿಗೆ ಖರ್ಚು ಕಡಿಮೆ ಮಾಡಿ ಎಂಬ ಸೂಚನೆ ಕೊಟ್ಟಿದೆ. ಈ ದೇಶದ ಜನರು ಬೆವರು ಹರಿಸಿ ಕಟ್ಟಿರುವ ಟ್ಯಾಕ್ಸ್ ಹಣವನ್ನು ತಾವು ದುಂದುವೆಚ್ಚ ಮಾಡುತ್ತಿಲ್ಲ ಎಂಬುದನ್ನು ತೋರಿಸುವುದಕ್ಕಾಗಿ ಸೋನಿಯಾ ಗಾಂಧಿಯಾದಿಯಾಗಿ ಸರ್ಕಾರದ ಬಹುತೇಕ ಮಂತ್ರಿ ಮಹೋದಯರು ವಿಮಾನದ ದುಬಾರಿ ಬಿಸಿನೆಸ್ ಕ್ಲಾಸ್‌ನಲ್ಲಿ ಪ್ರಯಾಣಿಸದೇ ಸಾಮಾನ್ಯ ದರ್ಜೆಯಾಗಿರುವ ಎಕಾನಮಿ ಕ್ಲಾಸ್‌ನಲ್ಲಿ ಪ್ರಯಾಣಿಸುತ್ತಿದ್ದಾರೆ. ಇವೆಲ್ಲಾ ಸ್ವಾಗತಾರ್ಹ ಕ್ರಮಗಳೆ. ಆದರೆ ಒಂದಿಷ್ಟು ಆಳಕ್ಕೆ ಇಳಿದು ನೋಡಿದರೆ ಸರ್ಕಾರಕ್ಕಾಗಲೀ, ಸೋನಿಯಾಗಾಗಲೀ ನಿಜಕ್ಕೂ ಖರ್ಚು ಕಡಿಮೆ ಮಾಡಬೇಕೆಂಬ ಇರಾದೆ ಇದೆಯಾ ಎಂಬ ಪ್ರಶ್ನೆ ಏಳುವಂಥ ಸತ್ಯಗಳು ಗೋಚರಿಸುತ್ತವೆ. 'ನಾವು ನಿಮ್ಮ ಹಣವನ್ನು ದುಂದುವೆಚ್ಚ ಮಾಡುತ್ತಿಲ್ಲ' ಎಂದು ತೋರಿಸುವುದಕ್ಕಷ್ಟೇ ಇಕಾನಮಿ ಕ್ಲಾಸ್‌ನಲ್ಲಿ ಪ್ರಯಾಣ ಮಾಡುವ ನಾಟಕವಾಡುತ್ತಿದ್ದಾರೆಯೇ ಎಂದೆನಿಸುತ್ತದೆ. ಏಕೆಂದರೆ, ಪ್ರಯಾಣವೊಂದನ್ನು ಬಿಟ್ಟು ಉಳಿದೆಲ್ಲಾ ವೆಚ್ಚಗಳು ಯಾವ ಅಡೆತಡೆಯೂ ಇಲ್ಲದೇ ಸಾಗಿವೆ. ಒಂದು ಉದಾಹರಣೆಯನ್ನೇ ನೋಡಿ.

ಚೇತನ್ ಕೊಠಾರಿ ಎಂಬ ಮುಂಬೈನ ನಿವಾಸಿಯೊಬ್ಬರು ಎಂಪಿಗಳ ಬಂಗಲೆ ರಿಪೇರಿಗೆ ಎಷ್ಟು ಖರ್ಚಾಗುತ್ತಿದೆ ಎಂಬ ಮಾಹಿತಿ ಕೋರಿ ಮಾಹಿತಿ ಹಕ್ಕು ಕಾಯ್ದೆಯನ್ವಯ ಅರ್ಜಿ ಸಲ್ಲಿಸಿದ್ದರು. ಕಾನೂನಿನ ಪ್ರಕಾರ ಅವರು ಕೇಳಿದ ಮಾಹಿತಿಯನ್ನು ಕೊಡಲೇಬೇಕಾಗಿತ್ತಾದ್ದರಿಂದ ಸರ್ಕಾರ ಎಲ್ಲಾ ಮಾಹಿತಿಯನ್ನು ಒದಗಿಸಿತು. ಆ ಮಾಹಿತಿ ನಿಜಕ್ಕೂ ನಮ್ಮ ಎಂಪಿಗಳು, ಮಂತ್ರಿಮಹೋದಯರು ನಮ್ಮ ಹಣವನ್ನು ಹೇಗೆ ದುಂದುವೆಚ್ಚ ಮಾಡುತ್ತಿದ್ದಾರೆ ಎಂಬುದನ್ನು ಎತ್ತಿ ತೋರಿಸುತ್ತದೆ. ಕಳೆದ ಐದು ವರ್ಷದಲ್ಲಿ ನಮ್ಮ ಎಂಪಿಗಳ ಬಂಗಲೆಗಳಲ್ಲಿ ಚಿಕ್ಕಪುಟ್ಟ ರಿಪೇರಿ ಮಾಡುವುದಕ್ಕಾಗಿಯೇ ಬರೊಬ್ಬರಿ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ! ನೆನಪಿರಲಿ, ಇಷ್ಟು ಖರ್ಚಾಗಿರುವುದು ಹೊಸ ಬಂಗಲೆ ಕಟ್ಟುವುದಕ್ಕೂ ಅಲ್ಲ, ಇರುವ ಬಂಗಲೆಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರ್ಪಡಿಸುವುದಕ್ಕೂ ಅಲ್ಲ, ದೊಡ್ಡ ಪ್ರಮಾಣದಲ್ಲಿ ರಿಪೇರಿ ಮಾಡುವುದಕ್ಕೂ ಅಲ್ಲ, ಒಂದೆರಡು ಸಾವಿರ ರೂಪಾಯಿಗಳಲ್ಲಿ ಮುಗಿದುಹೋಗಬಹುದಾದ ಚಿಕ್ಕಪುಟ್ಟ ರಿಪೇರಿ ಕೆಲಸಗಳನ್ನು ಮಾಡುವುದಕ್ಕೆ.

ಇನ್ನೂ ನಾಚಿಗೇಡಿನ ಸಂಗತಿ ಎಂದರೆ ಸುಮಾರು ೧೦೦ ಎಂಪಿಗಳು ಈಗ ತಮಗೆ ಒದಗಿಸಲಾಗಿರುವ ಬಂಗಲೆಗಳು ಚಿಕ್ಕವಾಗಿವೆ, ದೊಡ್ಡ ಬಂಗಲೆಗಳನ್ನು ಕೊಡಿ ಎಂದು ಕೈಚಾಚಿ ನಿಂತಿದ್ದಾರೆ. ಇನ್ನು ಕೆಲವರಂತೂ ಸರ್ಕಾರ ಒದಗಿಸಿರುವ ಬಂಗಲೆಗಳು ಚಿಕ್ಕದಾಗಿವೆ ಎಂದು ದೂರಿ ಅವುಗಳೊಳಕ್ಕೆ ಹೋಗುವುದಕ್ಕೇ ನಿರಾಕರಿಸಿದ್ದಾರೆ.

ಇದು ಕೇವಲ ಬಂಗಲೆಗಳ ಕತೆ. ಇನ್ನು ಅವರ ಪಂಚತಾರಾ ಹೋಟೆಲ್ ಖರ್ಚುಗಳನ್ನೂ ಒಳಗೊಂಡಂತೆ ಎಲ್ಲಾ ರೀತಿಯ ಬಿಲ್‌ಗಳನ್ನು ಸರ್ಕಾರದಿಂದಲೇ ತುಂಬಿಸಿಕೊಳ್ಳುತ್ತಾರೆ. ಇಂಥ ಬಿಲ್‌ಗಾರಿಕೆಯಲ್ಲಿ ಪ್ರವೀಣರಾದ ಎಂಪಿ, ಮಿನಿಸ್ಟರ್‌ಗಳು ನಿಜವಾಗಿಯೂ ನಮ್ಮ ತೆರಿಗೆ ಹಣವನ್ನು ದುಂದುವೆಚ್ಚ ಮಾಡುವುದಿಲ್ಲ ಎಂದು ನಿರೀಕ್ಷಿಸುವುದಾದರೂ ಹೇಗೆ?



ತರೂರ್

ಇದು ನಮ್ಮ ನ್ಯಾಯ ವ್ಯವಸ್ಥೆ!




25 ರೂಪಾಯಿ ಲಂಚ ಪಡೆದ ಸುಳ್ಳು ಕೇಸೊಂದು ನಿಮ್ಮ ಮೇಲೆ ಹಾಕಲಾಗಿದ್ದರೆ ನೀವು ನಿರಪರಾಧಿ ಎಂದು ಸಾಬೀತಾಗಲು ಎಷ್ಟು ಸಮಯ ಬೇಕಾಗಬಹುದು? ಮೂರು ತಿಂಗಳು? ಆರು ತಿಂಗಳು? ಹೆಚ್ಚೆಂದರೆ ಒಂದು ವರ್ಷ? ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಅಪಾರ ನಂಬಿಕೆ ಇಟ್ಟುಕೊಂಡಿರುವ ಅನೇಕ ವ್ಯಕ್ತಿಗಳು ಈ ರೀತಿ ಉತ್ತರಗಳನ್ನು ಕೊಡಬಹುದೇನೋ? ಆದರೆ ಕೇರಳದ ಅಬ್ದುಲ್ ಖಾದರ್ ಸುಬೇರ್ ಎಂಬ ವ್ಯಕ್ತಿಗೆ ಇದೇ ಪ್ರಶ್ನೆಯನ್ನು ಕೇಳಿ. ಆತನಿಂದ ಬರುವ ಉತ್ತರ ನಿಮ್ಮನ್ನು ದಿಗ್ಭ್ರಮೆಗೊಳಿಸುತ್ತದೆ.

ಅದು 1989ರ ಏಪ್ರಿಲ್ 25ನೇ ತಾರೀಖು. ಅಬ್ದುಲ್ ಖಾದರ್ ಸುಬೇರ್ ಕೇರಳದ ತಿರುವನಂತಪುರ ಬಳಿಯ ಅಟ್ಟಿಂಗಾಲ್ ಎಂಬ ಊರಿನಲ್ಲಿದ್ದ ಜಂಟಿ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆ ಹೊತ್ತು ಮಧ್ಯಾಹ್ನದ ಊಟ ಮುಗಿಸಿ ತನ್ನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ತನ್ನನ್ನು ಮುನಾಫ್ ಎಂದು ಪರಿಚಯಿಸಿಕೊಂಡ ವ್ಯಕ್ತಿಯೊಬ್ಬ ಸುಬೇರ್ ಕುಳಿತುಕೊಂಡಿದ್ದಲ್ಲಿಗೆ ಬಂದ. "ನನ್ನ ಡ್ರೈವಿಂಗ್ ಲೈಸೆನ್ಸ್ ಕಾಗದದ ರೂಪದಲ್ಲಿದೆ. ಅದನ್ನು ಒಂದು ಪುಸ್ತಕದ ರೂಪಕ್ಕೆ ಪರಿವರ್ತಿಸಿಕೊಳ್ಳುವುದಕ್ಕಾಗಿ ಅರ್ಜಿ ಹಾಕಿದ್ದೇನೆ, ಅದನ್ನು ಮಾಡಿಕೊಡಿ" ಎಂದು ಆತ ಸುಬೇರ್‌ನನ್ನು ಕೇಳಿಕೊಂಡ. ಅದಕ್ಕೆ ಸುಬೇರ್ ಅರ್ಜಿ ಹಾಕಿರುವ ಬಗ್ಗೆ ಸ್ವೀಕೃತಿಯೇನಾದರೂ ಇದೆಯೇ ಎಂದು ಆತನನ್ನು ವಿಚಾರಿಸಿದ. "ನಾನು ಡ್ರೈವಿಂಗ್ ಸ್ಕೂಲ್ ಮೂಲಕ ಅರ್ಜಿ ಹಾಕಿರುವುದರಿಂದ ಸ್ವೀಕೃತಿ ನನ್ನ ಹತ್ತಿರ ಇಲ್ಲ" ಎಂದು ಆತ ಉತ್ತರಿಸಿದ. ಹೀಗೆ ಮಾತುಕತೆ ನಡೆಯುತ್ತಿರುವಾಗಲೇ ಆತ ತನ್ನ ಜೇಬಿನಿಂದ ಒಂದು ಇಪ್ಪತ್ತು ರೂಪಾಯಿ ನೋಟು ಹಾಗೂ ಇನ್ನೊಂದು ಐದು ರೂಪಾಯಿ ನೋಟನ್ನು ತೆಗೆದು ಸುಬೇರ್‌ನ ಜೇಬಿನಲ್ಲಿಟ್ಟ. ಕ್ಷಣಾರ್ಧದಲ್ಲಿ ಗುಪ್ತಚರ ಪೊಲೀಸ್ ವಿಭಾಗದ ಒಂದು ತಂಡ ದಾಳಿಯಿಟ್ಟು ಲಂಚ ಸ್ವೀಕರಿಸುತ್ತಿದ್ದ ಆರೋಪದ ಮೇಲೆ ಸುಬೇರ್‌ನನ್ನು ಅರೆಸ್ಟ್ ಮಾಡಿಕೊಂಡು ಹೋಯಿತು.




ಅದೇ ವರ್ಷ ಮೇ 6ರಂದು ಸುಬೇರ್‌ನನ್ನು ಕೆಲಸದಿಂದ ಸಸ್ಪೆಂಡ್ ಮಾಡಲಾಯಿತು. ನಂತರ 1991ರ ನವೆಂಬರ್ 23ರಂದು ಕೇರಳದ ಮುಖ್ಯಮಂತ್ರಿಯಾಗಿದ್ದ ಕರುಣಾಕರನ್ ಅವರು ಸುಬೇರ್‌ನನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಂಡರು. ತನಗೆದುರಾಗಿದ್ದ ಕೇಡುಗಾಲ ಕೊನೆಯಾಯಿತು ಎಂದುಕೊಂಡು ಆತ ಮರುವರ್ಷ ಮದುವೆಯಾದ. ಒಂದು ಹೆಣ್ಣುಮಗುವೂ ಜನಿಸಿತು. ಇನ್ನೊಂದೆಡೆ ಗುಪ್ತಚರ ನ್ಯಾಯಾಲಯ ಸುಬೇರ್‌ನನ್ನು ಅಪರಾಧಿ ಎಂದು ಘೋಷಿಸಿ 18 ತಿಂಗಳ ಸೆರೆವಾಸ ಮತ್ತು 350 ದಂಡ ವಿಧಿಸಿ ತೀರ್ಪು ಕೊಟ್ಟಿತು. 1996ರ ಫೆಬ್ರವರಿ 19ರಂದು ಆತನನ್ನು ಮತ್ತೆ ಸಸ್ಪೆಂಡ್ ಮಾಡಿ ಅದೇ ವರ್ಷ ಆಗಸ್ಟ್ 30ರಂದು ಕೆಲಸದಿಂದಲೇ ವಜಾಮಾಡಲಾಯಿತು. ತನಗಾಗಿದ್ದ ಅನ್ಯಾಯವನ್ನು ವಿರೋಧಿಸಿ ಆತ ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದ. ಹೈಕೋರ್ಟು ಕೂಡ ಕೆಳ ನ್ಯಾಯಾಲಯದ ಆದೇಶವನ್ನೇ ಎತ್ತಿ ಹಿಡಿಯಿತು. ಆತನನ್ನು ಜೈಲಿಗೆ ಅಟ್ಟಲಾಯಿತು. ನಂತರ ಆತ ಸುಪ್ರೀಂಕೋರ್ಟಿಗೆ ಹೋಗಿ ಜಾಮೀನು ಪಡೆದುಕೊಂಡು ಬಂದ. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆದು ಕೊನೆಗೆ ಮೊನ್ನೆ ಮೇ 26ರಂದು ಸುಬೇರ್ ನಿರಪರಾಧಿ ಎಂದು ತೀರ್ಪು ಹೊರಬಿತ್ತು. ಅಲ್ಲಿಗೆ 25 ರೂಪಾಯಿ ಲಂಚ ಪಡೆದ ಆರೋಪದಲ್ಲಿ ನಿರಪರಾಧಿ ಎಂದು ಸಾಬೀತುಪಡಿಸುವುದಕ್ಕೆ ಸುಬೇರ್‌ಗೆ ಬರೊಬ್ಬರಿ 25 ವರ್ಷ ಬೇಕಾದವು! ದುರಂತ ಎಂದರೆ, ಈತನ ಜೇಬಿನಲ್ಲಿ 25 ರೂಪಾಯಿ ಲಂಚ ಇಟ್ಟ ಮುನಾಫ್‌ನನ್ನು ಪೊಲೀಸರಾಗಲೀ, ಕೆಳ ನ್ಯಾಯಾಲಯಗಳಾಗಲೀ ವಿಚಾರಣೆಗೆ ಒಳಪಡಿಸದೇ ತೀರ್ಪು ಕೊಟ್ಟಿದ್ದವು! ಇದು ನಮ್ಮ ನ್ಯಾಯಾಂಗ ವ್ಯವಸ್ಥೆ!


ಸುಬೇರ್


ಯಾವುದಕ್ಕೂ ಹೇಸದವರು

ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ್ ರೆಡ್ಡಿ ಹೆಲಿಕಾಪ್ಟರ್ ದುರಂತದಲ್ಲಿ ಸಾಯುತ್ತಿದ್ದಂತೆ ... ಅವರ ಪುತ್ರರತ್ನ ಜಗನ್ ಮೋಹನ ರೆಡ್ಡಿಯೆ ಮುಂದಿನ ಮುಖ್ಯಮಂತ್ರಿಯಾಗಬೇಕೆಂಬ ದೊಡ್ಡ ಕೂ... ಕೇಳಿಬಂದಿದ್ದು ನಮಗೆಲ್ಲಾ ಗೊತ್ತೇ ಇದೆ. ತಂದೆಯ ಶವವಿನ್ನೂ ದಫನ್ ಆಗುವ ಮೊದಲೇ ಹಿ... ಅಧಿಕಾರಕ್ಕಾಗಿ ಜಗನ್ ಹಾತೊರೆಯುತ್ತಿದ್ದುದು ಎಂಥವರಿಗೂ ಹೇವರಿಕೆ ಹುಟ್ಟಿಸದಿರದು.

ಇದೇ ಸಂದರ್ಭದಲ್ಲಿ ರಾಜಶೇಖರ ರೆಡ್ಡಿಯ ದುರ್ಮರಣದ ಸುದ್ದಿ ತಿಳಿಯುತ್ತಿದ್ದಂತೆಯೇ ಆಂಧ್ರಪ್ರದೇಶದಾದ್ಯ... ಆಘಾತಗೊಂಡ ನೂರಾರು ಜನ ಹೃದಯಾಘಾತಕ್ಕೆ ಬಲಿಯಾಗುತ್ತಿದ್ದಾರೆಂದೂ, ಕೆಲವರು ಆತ್ಮಹ... ಮಾಡಿಕೊಳ್ಳುತ್ತಿದ್ದಾರೆಂದೂ ಜಗನ್ ಮೋಹನ ರೆಡ್ಡಿ ಒಡೆತನದ ಸಾಕ್ಷಿ ದಿನಪತ್ರಿಕೆ ಮತ್ತು ಅದೇ ಹೆಸರಿನ ಟಿ.ವಿ. ಚಾನೆಲ್ ಭಾರಿ ಪ್ರಚಾರ ಮಾಡಿತು. "ಯಾರೂ ಭಾವಾವೇಶಕ್ಕೆ ಒಳಗಾಗಬಾರದು, ಆತ್ಮಹತ್ಯೆಯಂತ ಕೃತ್ಯಗಳಲ್ಲಿ ತೊಡಗಬಾರದು, ಅದು ನನ್ನ ತಂದೆಯ ಆತ್ಮಕ್ಕೆ ಶಾಂತಿ ತಂದುಕೊಡುವುದಿಲ್ಲ'' ಎಂಬ ಜಗನ್ ಮೋಹನ ರೆಡ್ಡಿ ಭಾವಪೂರ್ಣವಾಗಿ ಜನರಲ್ಲಿ ಮನವಿ ಮಾಡಿಕೊಳ್ಳುತ್ತಿರುವುದನ್ನೂ ಟಿ.ವಿ.ಯಲ್ಲಿ ತೋರಿಸಲಾಯಿತು. ಅಂತಿಮವಾಗಿ ಒಟ್ಟು ೪೬೨ ಜನ ವೈ.ಎಸ್.ಆರ್. ದುರ್ಮರಣದ ಆಘಾತದಿಂದ ಸತ್ತುಹೋದರೆಂದು ವರದಿ ಮಾಡಲಾಯಿತು. ಅವರಲ್ಲಿ ೪೦೨ ಜನರು ಹೃದಯಾಘಾತದಿಂದ ಹಾಗೂ ಉಳಿದವರು ಆತ್ಮಹತ್ಯೆಯ ಮೂಲಕ ಪ್ರಾಣಕಳೆದುಕೊಂಡರೆಂಬ ಅಂಕಿಅಂಶಗಳನ್ನು ಕೊಡಲಾಯಿತು.



ಜಗನ್‌ರೆಡ್ಡಿ

ಈ ಸಾವುಗಳ ಹಿಂದಿನ ಸತ್ಯಾಸತ್ಯತೆಯನ್ನು ಅರಿಯುವುದಕ್ಕಾಗಿ 'ಮೇ... ಟುಡೆ' ಎಂಬ ಪತ್ರಿಕೆಯ ವರದಿಗಾರ ಅಧ್ಯಯನ ಮಾಡಿ ಸೆಪ್ಟೆಂಬರ್ 16ರಂ... ವಿವರವಾದ ವರದಿಯನ್ನು ಪ್ರಕಟಿಸಿದ. ಆತ ಸತ್ತವರ ಕುಟುಂಬಗಳನ್ನು ಭೇ... ಮಾಡಿ ಅವರ ಹತ್ತಿರದ ಸಂಬಂಧಿಕರನ್ನು ಮಾತನಾಡಿಸಿ ಈ ವರದಿಯ... ಬರೆದಿದ್ದ. ಅದು ಈ ಸಾವುಗಳ ಹಿಂದಿನ ಅಸಲೀಯತ್ತನ್ನು ಹೊರಜಗತ್ತಿಗೆ ತೋರಿಸಿಕೊಟ್ಟಿತು. ವಿಚ... ಏನೆಂದರೆ, ವೈಎಸ್ಆರ್ ದುರ್ಮರಣಕ್ಕೂ, ಈ ಸಾವುಗಳಿಗೂ ಯಾವುದೇ ಸಂಬಂಧವಿರಲಿಲ್ಲ, ಅವೆ... ಸಹಜ ಸಾವುಗಳೇ ಆಗಿದ್ದವು. ಕೆಲವು ಆತ್ಮಹತ್ಯೆಗಳಿದ್ದರೂ ಅದು ಬೇರೆ ಯಾವುದೋ ಕಾರಣಕ್ಕೆ ಆದ ಆತ್ಮಹತ್ಯೆಗಳಾಗಿದ್ದವು. ಆದರೆ ಜಗನ್ ಮೋಹನ ರೆಡ್ಡಿಯ ಬೆಂಬಲಿಗ... ಎಷ್ಟೊಂದು ಚುರುಕಾಗಿ ಕೆಲಸ ಮಾಡಿದ್ದರೆಂದರೆ ಈ ಅವಧಿಯಲ್ಲಿ ಎಲ್ಲೇ ಸಾ... ಸಂಭವಿಸಿದರೂ ಕೂಡಲೇ ಅಲ್ಲಿಗೆ ಧಾವಿಸಿ ಮನೆಯವರಿಗೆ ಐದರಿಂದ ಹ... ಸಾವಿರ ದುಡ್ಡು ಕೊಟ್ಟು 'ವೈ.ಎಸ್.ರಾಜಶೇಖರ ರೆಡ್ಡಿಯ ಮರಣದ ಸುದ್ದಿಯಿಂ... ಆಘಾತಗೊಂಡು ಹೃದಯಾಘಾತಕ್ಕೆ ಬಲಿಯಾಗಿದ್ದಾರೆ ಅಥವ ಆತ್ಮಹ... ಮಾಡಿಕೊಂಡಿದ್ದಾರೆ' ಎಂದು ಮಾಧ್ಯಮದೆದುರು ಹೇಳುವಂತೆ ಮಾಡಿದ್ದರು... ಇದರಿಂದ ರಾಜಶೇಖರ್ ರೆಡ್ಡಿಯ ಇಮೇಜನ್ನು ಇಮ್ಮಡಿಗೊಳಿಸಿ, ಅವರ ಪುತ್ರ... ಜಗನ್ ಮೋಹನ ರೆಡ್ಡಿಯೇ ಮುಂದಿನ ಮುಖ್ಯಮಂತ್ರಿಯಾಗುವಂತೆ ಜ... ಬಯಸುತ್ತಿದ್ದಾರೆ ಎಂದು ಬಿಂಬಿಸುವುದು ಅವರ ಉದ್ದೇಶವಾಗಿತ್ತು, ಇದರ... ಅವರು ಒಂದಿಷ್ಟು ಯಶಸ್ವಿಯೂ ಆದರು.


ವೈಎಸ್ಆರ್

ಜನ ಅಧಿಕಾರಕ್ಕಾಗಿ ಎಂಥ ಹೇಯ ಕೃತ್ಯಕ್ಕೂ ಇಳಿಯುತ್ತಾರಲ್ಲವೆ?

ಸೆಕ್ಸ್ ಮಾಡಿ, ಸಿಕ್ಸ್ ಎತ್ತಿ!



"ಒಳಾಂಗಣ ಕ್ರೀಡೆಯಲ್ಲಿಯ ಉತ್ತಮ ಸಾಧನೆ ಹೊರಾಂಗಣ ಕ್ರೀಡೆಯಲ್ಲಿ ಸಾಧನೆ ಮಾಡಲು ಪೂರಕ" ಹೀಗೆಂದು ಭಾರತದ ಖ್ಯಾತ ಲೈಂಗಿಕ ತಜ್ಞ ಡಾ. ಪ್ರಕಾಶ್ ಕೊಠಾರಿ ಹೇಳಿದ್ದಾರೆ. ಭಾರತ ತಂಡದ ಕೋಚ್ ಗ್ಯಾರಿ ಕ್ರಿರ್ಸ್ಟನ್ ಮತ್ತು ಮಾನಸಿಕ ತಜ್ಞ ಪ್ಯಾಡಿ ಅಪ್ಟನ್ ನಮ್ಮ ಕ್ರಿಕೆಟಿಗರು ಟೂರ್ನಮೆಂಟ್ ವೇಳೆ ಎಷ್ಟು ಸೆಕ್ಸ್ ಮಾಡಬೇಕು ಎಂಬ ಕುರಿತು ತಿಂಗಳುಗಳ ಕಾಲ ಅಧ್ಯಯನ ಮಾಡಿ ಒಂದು ವಿಜನ್ ಡಾಕ್ಯುಮೆಂಟ್ ತಯಾರಿಸಿ ಲೈಂಗಿಕ ತಜ್ಞ ಕೊಠಾರಿಗೆ ತೋರಿಸಿದರಂತೆ. ಆಟದ ಹಿಂದಿನ ದಿನ ಅಥವಾ ಆಟಕ್ಕೂ ಸ್ವಲ್ಪ ಮೊದಲು ರತಿಕ್ರೀಡೆಯಲ್ಲಿ ಪಾಲ್ಗೊಂಡರೆ ಅತ್ಯುತ್ತಮವಾಗಿ ಆಡಬಹುದು ಎಂದು ಕೊಠಾರಿ ಹೇಳಿದ್ದಾರೆ. ಈ ವಿಷಯ ಕೇಳಿದ ಯುವರಾಜ್, ಶ್ರೀಶಾಂತ್‌ಗಳು 'ಹುರ್ರಾ' ಎಂದು ಸಂಭ್ರಮಗೊಂಡಿವೆಯಂತೆ.

ಭಾರತದ ತಂಡದಲ್ಲಿ ಅವಿವಾಹಿತರೇ ಹೆಚ್ಚಿದ್ದಾರಲ್ಲ ಎಂಬ ಪ್ರಶ್ನೆಗೂ ಕೊಠಾರಿ ಬಳಿ 'ಸಲ್ಯುಷನ್' ಇದೆ. 'ಯಾರೋ ಅಪರಿಚಿತರೊಂದಿಗೆ ಮಜಾ ಮಾಡುವುದಕ್ಕಿಂತ ಹಸ್ತಮೈಥುನದಲ್ಲಿ ಸುಖ ಅನುಭವಿಸಿ. ಇದರಿಂದ ನಿಮ್ಮಲ್ಲಿ ಹುರುಪು ಉಂಟಾಗಿ ಜೀವದ್ರವ್ಯ ಉಕ್ಕಿ ಹರಿದು ಒಳ್ಳೆ ಪರ್‌ಫಾರ್ಮನ್ಸ್ ಮಾಡಬಹುದು' ಎಂದು ಉಚಿತ ಸಲಹೆ ನೀಡಿದ್ದಾರೆ ಕೊಠಾರಿ ಸಾಹೇಬರು.

ಅಂತೂ ಇನ್ನುಂದೆ 24x7 ಕ್ರಿಕೆಟ್. ರಾತ್ರಿ ಮಂಚವೇ ಮೈದಾನ. ಅಲ್ಲಿ ಹೊನಲು ಬೆಳಕಿನ ಆಟ. ಒಟ್ಟಿನಲ್ಲಿ ಡೇ ಅಂಡ್ ನೈಟ್ ಮ್ಯಾಚ್.

ಸದ್ಯಕ್ಕೆ ಭಾರತ ಕ್ರಿಕೆಟ್ ತಂಡದ ಸ್ಲೋಗನ್: ಸೆಕ್ಸ್ ಮಾಡಿ, ಸಿಕ್ಸ್ ಎತ್ತಿ!

ವಾಯ್-ಕುಗಳು

ಚೀನಿಯರಂತೆ ಮಕ್ಕಳಿರದೇ
ಇರಲಿ ದೊರೆಯೆ, ಆದರೆ
ಮದುವೆಯೊಂದೇ ಇರ್‍ಲಿ ಮಾರಾಯ
******
ಫಲವತ್ತು ನೆಲದಲಿ
ಎದ್ದಿತು, SEZ ಸ್ಮಶಾನ
ದಲಿ ಮೊಳಕೆಯೊಡೆದವು ಗೋರಿಗಳು
******
ಜಾಣ ನಿಲೇಕಣಿಗಳ ತಲೇಲಿ
ಇಲ್ವಂತೆ ಮೆದುಳು ಅಲ್ಲಿ
ಐತಂತೆ CPU! -ಮುನ್ನಿ



ಶೋಭಕ್ಕ ಮೈಸೂರಿನ ಚಾಮುಂಡಕ್ಕನಂತಲ್ಲಾ

ಥೂತ್ತೇರಿ

▸ ಯಾಹೂ

ಮೈಸೂರು ದಸರಾ ನಡೆಸುತ್ತಿರುವ ಶೋಭಾ ಕರಂದ್ಲಾಜೆ ಎಂಬ ಕನ್ಯಾಮಣಿ ಸ್ಥಳೀಯ ರಾಜಕಾರಣಿಗಳ ಪಾಲಿಗೆ ಸಾಕ್ಷಾತ್ ಚಾಮುಂಡೇಶ್ವರಿಯಾಗಿದ್ದಾಳಂತಲ್ಲಾ, ಪುರಾಣದ ಚಾಮುಂಡಿ ದಶಬಾಹುಗಳಲ್ಲಿ ತರತರದ ಆಯುಧಗಳನ್ನಿಡಿದು ಮೈಸೂರು ಸೀಮೆ ಮಹಿಷಾಸುರನನ್ನು ಎದುರಿಸಿದಂತೆ, ಈಕೆ ತನ್ನ ದ್ವಿಭುಜಗಳಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ಉದ್ಘಾಟಿಸುತ್ತಾ ಪೆಡಲ್ ತುಳಿಯದೇ ಮೈಸೂರಲ್ಲಿ ಸೈಕಲ್ ಓಡಿಸುತ್ತಿದ್ದಾಳಂತಲ್ಲಾ, ಈ ಸುದ್ದಿ ಕೇಳಿದ ಎಡ್ಡೂರಿಗೆ ಸೈಕಲ್ ಹಿಂದಿನ ಸೀಟನಲ್ಲಿ ಕುಳಿತುಕೊಳ್ಳುವ ಮನಸ್ಸಾಯಿತಂತಲ್ಲಾ, ಇತ್ತ ಮೈಸೂರಿನ ಮೇಯರ್‌ನಿಂದ ಹಿಡಿದು ನಗರಪಾಲಿಕೆ ಸದಸ್ಯರೆಲ್ಲಾ ಶೋಭಕ್ಕನ ಬಗ್ಗೆ ಶಾನೆ ಸಿಟ್ಟಾಗಿ ಕಿವಿಮುಚ್ಚಿಕೊಳ್ಳುವಂತಹ ಎಲೆತೋಟದ ಬೈಗುಳವನ್ನೇ ಬೈಯ್ಯುತ್ತಿದ್ದಾರಂತಲ್ಲಾ, ಕಾರಣ ಕೇಳಿದರೆ "ನಾವು ಈ ಬಾರಿ ದಸರ ಹಬ್ಬ ಹ್ಯಂಗ್ರಿ ಮಾಡದು" ಎಂದು ಕೂಗಿದರಂತಲ್ಲಾ, ಥೂತ್ತೇರಿ!


* * * * *

ಅಶೋಕಪುರಂ ಚಾಮುಂಡಿ ಬೆಟ್ಟದ ಕಡೆ ಸದಸ್ಯರನ್ನು ಶೋಭಾಕರಂದ್ಲಾಜೆ ಬಗ್ಗೆ ಮಾತನಾಡಿಸಿದಾಗ "ಅಯ್ಯಾ ಅದ್ಯಾವ ಸೀಮೆ ಹೆಣ್ಣಯ್ಯಾ ಅದಕ ಮಾನಮರಿಯಾದಿ ಇದ್ದತೇನಯ್ಯಾ, ಥೂತರಕ್ಕಿ, ಮದುವಾಗಿ ಸಂಸಾರ ಮಾಡದು ಬುಟ್ಟು ಎಡೂರಪ್ಪನ ಹಿಂದಬಿದ್ದದಲ್ಲಯಾ ಅವೆಣ್ಣು. ಅದಕ್ಯೇನು ಬುದ್ಧಿ ಹೇಳಕಾದ್ದು. ನಾಚಿಗೆನೆ ಇಲವಲ್ಲಯ್ಯಾ ಅದಕೆ. ಅಲ್ಲಾ ದಸರ ನಡಿವಾಗ ವಾರ್ಡಿಗಿಷ್ಟು ಅಂತ ಕಾಮಗಾರಿ ಹಣ ಬಿಡುಗಡೆ ಮಾಡಿದ್ರ ನಾವು ನಾಕ್ಕಾಸು ಮಾಡಿಕಂಡು ಬರಹೋಗ ನಂಟ್ರಗೆ ಬಾಡಾಕಿ ದಸರಾ ತೋರಿಸಿ ಕಳಸುಸಿತಿದ್ವೊ. ಆ ಹೆಣ್ಣು ಹಣ ಬಿಡುಗಡೆ ಮಾಡದು ಬ್ಯಾಡವೇನಯ್ಯ ಸಾಲಮಾಡಿ ಹಬ್ಬ ಮಾಡಾಗೆ ಮಾಡಿದಲ್ಲಯ್ಯಾ. ಥೂ ಇದರವ್ವುತಾರಕಪ್ಪು ಬೆಂಕಿಹಾಕ" ಎಂದು ನೆಲಕ್ಕೆ ತುಪ್ಪಿ ಬಾಯಿ ಒರೆಸಿಕೊಂಡರಂತಲ್ಲಾ, ಥೂತ್ತೇರಿ!

* * * * *

ಇತ್ತ ಅನಂತಕುಮಾರ್ ಹೆಗಡೆ ಎಂಬ ಪುರುಷೋತ್ತಮ ತನ್ನ ಪತ್ತೇದಾರಿ ಕೆಲಸದಿಂದ ಪರಾಜಯಗೊಂಡು ಪಡಕಾನೆಯಲ್ಲಿ ಕೂತವನು ಈಚೆ ಬಂದಿಲ್ಲವಂತಲ್ಲಾ, ಬಂದರೆ ಉಗಿಯುವುದು ಗ್ಯಾರಂಟಿ ಎಂದು ತಿಳಿದು ಅಲ್ಲೇ ಇರುವ ಆತನನ್ನು ಚಡ್ಡಿಗಳೇ ಸಮಾಧಾನ ಮಾಡಿ "ಅಯ್ಯೋ, ನಾವಿಂತ ಸುಳ್ಳುಗಳನ್ನು ನೂರಾರು ಹೇಳಿದ್ದೇವೆ. ಈಗಲೂ ಹೇಳಿ ನಿಜ ಮಾಡಲು ಹೋರಾಡುತ್ತಿದ್ದೇವೆ. ಈಚೆ ಬಾ" ಎಂದು ಕರೆದವಂತಲ್ಲಾ, ಕೆಲಸಿಲ್ಲದ ಬಡಗಿ ಮರ್ಮಾಂಗದ ಬದ್ನೆಗೆ ಅರ್ಚಿ ಹೊಡೆದ ಎನ್ನುವಂತೆ ಸಂಸದನಾಗಿ ಮಾಡುವ ಕೆಲಸ ಬಿಟ್ಟು ಸುಭಾಷ್‌ಚಂದ್ರಬೋಸ್ ಕುಟುಂಬದ ಕುರುಹನ್ನ ಹುಡುಕುತ್ತ ಹೋಗಿ ಕೊನೆಗೆ "ಸಿಕ್ಕರು, ಸಿಕ್ಕೇಬಿಟ್ಟರು, ಅದೂ ಆಸ್ಟ್ರಿಯಾದಲ್ಲಿ ಹುಡುಕಿ ಹಿಡಿದೆ" ಎಂದು ಕೂಗಿಕೊಂಡನಂತಲ್ಲಾ, ಇದಕ್ಕೆ ಪ್ರತಿಧ್ವನಿಯಾಗಿ ನೇತಾಜಿ ಅಭಿವೃದ್ಧಿ ಟ್ರಸ್ಟ್‌ನ ಸದಸ್ಯರು ಬಿದ್ದು ಬಿದ್ದು ನಗುತ್ತಾ "ಅಯ್ಯೋ ದಡ್ಡಮುಂಡೇದೆ, ನೇತಾಜಿ ಮಗಳು ಅನಿತಾ ಪಾಪ ಬೆಂಗಳೂರಿಗೆ ಬಂದು ಗಾಂಧಿಬಜಾರಲ್ಲಿ ತಿರುಗಾಡಿ ಹೋಗಿ ಭಾಳ ವರ್ಷಾಯ್ತು ಬಾರಲೆ" ಎಂದು ಕರೆದರಂತಲ್ಲಾ, ಥೂತ್ತೇರಿ!

* * * * *



ಸಂಸದ ಅನಂತಕುಮಾರ್ ಮಾಡಿಕೊಂಡ ಅನಾಹುತವನ್ನು ಗಮನಿಸಿದ ಬುದ್ಧಿಜೀವಿ ವಲಯ "ಈ ಚಡ್ಡಿಗಳಿಗೆ ಏನಾಗಿದೆ? ಇತಿಹಾಸವನ್ನು ಕೆದಕುತ್ತ ಹೋಗಿ ಅದಕ್ಕೆ ಬಲಿಯಾಗುತ್ತವಲ್ಲ? ಆ ಅಧ್ವಾನಿ ಜಿನ್ನಾ ತಂಟೆಗೆ ಹೋಗಿ ಇನ್ನೂ ಚೇತರಿಸಿಕೊಂಡಿಲ್ಲ, ಇನ್ನು ಜಸವಂತಸಿಂಗ್ ಎಂಬ ಅನ್‌ಫಿಟ್ ಸೈನಿಕ ದೇಶದ ನಾಯಕರನ್ನು ಹೀಗಳೆದು ಜಿನ್ನಾ ಹೊಗಳಿದ್ದಕ್ಕೆ ಚಡ್ಡಿ ಬಿಚ್ಚಿಸಿ ಕಳುಹಿಸಲಾಯ್ತು. ಇತ್ತ ಅನಂತಕುಮಾರ ಎಂಬ ಅಬ್ಬೇಪಾರಿ ದೇಶವೇ ಬೆಚ್ಚಿ ಬೀಳುವ ಸಂಗತಿ ಸ್ಫೋಟಿಸಿದವನಂತೆ ಮಾಡಿ ತಲೆಮರೆಸಿಕೊಂಡ. ಇವಕ್ಕೆಲ್ಲಾ ಏನಾಗಿದೆ? ನಮ್ಮ ಇತಿಹಾಸ ಕೆದಕಿದರೆ ಜಗಳವೇ ಹೊರತು ಸತ್ಯದ ಸಾಕ್ಷಾತ್ಕಾರವಾಗುವುದಿಲ್ಲ. ಆದ್ದರಿಂದ ವರ್ತಮಾನವನ್ನಷ್ಟೇ ನೋಡಿ ಎಂದು ಚಡ್ಡಿಗಳಿಗೆ ಹೇಳುವವರಾರು" ಎಂದು ಗಡ್ಡ ಕೆರೆದುಕೊಂಡು ಗಾಢವಾಗಿ ಚಿಂತಿಸಿದರಂತಲ್ಲಾ, ಥೂತ್ತೇರಿ!

* * * * *

ಇತ್ತ ನಮ್ಮ ರಾಜಕಾರಣದ ಗಾರ್ಧಬರ ಗರ್ಜನೆಗಳು ಶಾನೆ ಮನರಂಜನೆಯೊದಗಿಸುತ್ತಿವೆಯಂತಲ್ಲಾ, ಬಿಜೆಪಿಗಳನ್ನು ಕುರಿತು ಟೀಕಿಸಿದ ನಮ್ಮ ಮಾಜಿ ಪ್ರಧಾನಿಗಳಾದ ದೇವೇಗೌಡರು "ಬಿಜೆಪಿಯಲ್ಲಿ ಮುಖ್ಯಮಂತ್ರಿ ನಾಯಕತ್ವಕ್ಕೆ ಸಮರ್ಥ ವ್ಯಕ್ತಿಗಳಿದ್ದರು" ಎಂದು ಹೇಳುತ್ತಾ, ಪರೋಕ್ಷವಾಗಿ ಬಿಜೆಪಿ ಜನ ತಮ್ಮನ್ನೇ ತಾವು ಅಳೆದು ನೋಡಿಕೊಳ್ಳುವಂತೆ ಮಾಡಿದ್ದಾರಂತಲ್ಲಾ, ಅಲ್ಲದೆ ದೇವೇಗೌಡರು ಹೇಳಿರುವುದು ತಮಾಷೆಗೋ, ಕುಚೋದ್ಯಕ್ಕೋ ಎಂಬುದೂ ಚರ್ಚಿತವಾಗುತ್ತಿದೆಯಂತಲ್ಲಾ, ಏಕೆಂದರೆ ಜೆಡಿಎಸ್‌ನಲ್ಲಿ ಸಿದ್ಧರಾಮಯ್ಯ, ಸಿಂಧ್ಯಾ, ಪ್ರಕಾಶ್ ಇವರೆಲ್ಲ ಇದ್ದರೂ ಕೂಡ ಮಗನನ್ನ ಮುಖ್ಯಮಂತ್ರಿ ಮಾಡಿದ ದೇವೇಗೌಡರು, ಆ ಮಾನದಂಡದಲ್ಲೇ ಬಿಜೆಪಿಯವರನ್ನು ಅಳೆದು ಅಲ್ಲೂ ಸಮರ್ಥರಿದ್ದಾರೆ ಎನ್ನುವುದಾದರೆ ಬಿಜೆಪಿಯ ಅಷ್ಟು ಎಮ್ಮೆಲ್ಲೆಗಳಿಗೆ ಮುಖ್ಯಮಂತ್ರಿಯಾಗುವ ಯೋಗ್ಯತೆಯಿದೆ. ಆ ಲೆಕ್ಕದಲ್ಲಿ ಕುಮಾರಸ್ವಾಮಿಯನ್ನು ಸರಿದೂಗುವ ಒಂದು ಡಜನ್ ಶಾಸಕರೂ, ರೇವಣ್ಣನನ್ನು ಸರಿಗಟ್ಟುವ ಮೂರು ಡಜನ್ ಶಾಸಕರು ಬಿಜೆಪಿಯಲ್ಲಿದ್ದಾರೆ. ಆದರೆ ದೇವೇಗೌಡರಂತೆಯೇ ಯಡ್ಡಿಯನ್ನು ಇತಿಹಾಸಕ್ಕೆ ಸರಿಗಟ್ಟುವವರು ಮಾತ್ರ ಯಡ್ಡಿಯೇ ಆದ್ದರಿಂದ ಯಡ್ಡಿಯನ್ನು ಯಾವ ಮುಡ್ಡಿನಾಯಕರೂ ಅಲ್ಲಾಡಿಸಲಾಗುವುದಿಲ್ಲ ಎಂದು ಚಡ್ಡಿಗಳೇ ಶಾನೆ ಬೇಜಾರಿನಿಂದ ಹೇಳುತ್ತಿವೆಯಂತಲ್ಲಾ, ಥೂತ್ತೇರಿ!

* * * * *

ಕರ್ನಾಟಕದಲ್ಲಿರುವುದು ಒಂದು ಆಡಳಿತ ಪಕ್ಷ. ಆದರೆ ಎರಡು ವಿರೋಧ ಪಕ್ಷಗಳಿವೆ. ಅದ್ದರಿಂದ ಎರಡೂ ವಿರೋಧಪಕ್ಷ ಮಾತನಾಡಿಕೊಂಡು ಮೇಲೆ ಬೀಳುವಷ್ಟರಲ್ಲಿ ಸದನವನ್ನೆ ಮುಗಿಸಿ ಅಧ್ಯಾಡುತ್ತಿರುವ ಎಡ್ಯೂರಪ್ಪ "ಈ ವಿರೋಧಪಕ್ಷಗಳು ನಮ್ಮ ಯಾವ ಹಗರಣಗಳನ್ನು ಬಯಲಿಗೆಳೆಯಲಿಲ್ಲಾ" ಎಂದು ಅಟ್ಟಹಾಸದಿಂದ ನಕ್ಕರಂತಲ್ಲಾ, ಅಂತೂ ಹಗರಣಗಳಿವೆ ಎಂಬುದನ್ನು ಒಪ್ಪಿಕೊಂಡಿರುವ ಯಡ್ಡಿಗೆ ಉತ್ತರವಾಗಿ ರೇವಣ್ಣ "ದಸರಾ ಮುಗಿದ ಮ್ಯಾಲೆ ಏನೇನು ಮಾಡ್ತವುರೆ ಯಲ್ಲಾನು ಹೇಳ್ತೀನಿ. ಈಗೇಳಕುಲ್ಲ" ಎಂದನಂತಲ್ಲಾ, "ಈಗಲೇ ಹೇಳಲು ತೊಂದರೆಯೇನು" ಎಂದು ಕೇಳಲಾಗಿ "ನಮ್ಮ ತಂದೆ ಏನೇನು ಹೇಳಬೇಕು, ಬಿಡಬೇಕು ಅನ್ನದ ಹೇಳಿಕೊಟ್ಟರೆ. ಅಮ್ಯಾಲೆ ಹಾನೇಳ್ತಿನಿ" ಎಂದನಂತಲ್ಲಾ, ಥೂತ್ತೇರಿ!


ಓಡೂ...ಓಟ..ಓಡು....

ಮೈಸೂರು ದಸರಾ: ಸರ್ವವೂ 'ಶೋಭಾ'ಯಮಾ

ಅಲ್ಲಿ ನೋಡು ಶೋಭಕ್ಕ ಇಲ್ಲಿ ನೋಡು ಶೋಭಕ್ಕ... ಎಲ್ಲಿ ನೋಡಿದ್ರು ಶೋಭಕ್ಕ. ಮೈಸೂರಿನ ಚಾಮುಂಡೇಶ್ವರಿಯೇ ಮಂಕಾಗಿದ್ದಾಳೆ ಶೋಭಾ ಕರಂದ್ಲಾಜೆಯ ಬಹುರೂಪಿ ಅವತಾರವನ್ನು ನೋಡಿ. ಒಂದೇ ದಿನ ಹದಿನಾಲ್ಕು ಕಾರ್ಯಕ್ರಮಗಳನ್ನು ಉದ್ಘಾಟಿಸಿದ ದಾಖಲೆಯನ್ನು ಬರೆದುಬಿಟ್ಟಿದ್ದಾರೆ ಜಿಲ್ಲಾ ಉಸ್ತುವಾರಿ ಸಚಿವೆ ಶೋಭಾಜಿ! ತಮ್ಮ ಇಲಾಖೆಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಸೂಚ್ಯವಾಗಿ ಪ್ರತಿಭಟಿಸಲು ನಿರ್ಧರಿಸಿದ ಮಂತ್ರಿಗಳನೇಕರು ಮೈಸೂರು ದಸರಾ ಕಡೆ ಮುಖ ಮಾಡುತ್ತಿಲ್ಲ. ಶೋಭಕ್ಕನ ಚೇಲಾಗಳು ಎ. ರಾಮದಾಸ್, ಶಂಕರಲಿಂಗೇಗೌಡರನ್ನು ಅವಮಾನಿಸುತ್ತಲೇ ಇರುವುದರಿಂದ ಅವರ್‍ಯಾರೂ ದಸರಾ ಬಗ್ಗೆ ಆಸಕ್ತಿ ತೋರುತ್ತಿಲ್ಲ. ವಿರೋಧ ಪಕ್ಷದ ನಾಯಕ ಮೈಸೂರಿನ ಸಿದ್ದರಾಮಯ್ಯರಿಗೂ ಇಲ್ಲಿ ಬೆಲೆ ಇಲ್ಲ, ಎಲ್ಲ ಶೋಭಾ ಮತ್ತು ಚೇಲಾಗಳದ್ದೇ ಕಾರುಬಾರು.



ಮಣಿವಣ್ಣನ್

ಹೊರಗಡೆ ನೋಡಲು ಎಲ್ಲ ವ್ಯವಸ್ಥೆ ಚೆನ್ನಾಗಿದೆಯಾದರೂ ಒಳಗೆ ಭ್ರಷ್ಟಾಚಾರದ ಗಬ್ಬುವಾಸನೆ ಹೊಡೆಯುತ್ತಲೇ ಇದೆ. ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹಾಗೂ ನಗರ ಬಿಜೆಪಿ ಅಧ್ಯಕ್ಷ ಮಂಜುನಾಥ್ ಅಲಿಯಾಸ್ ಆರ್ಕೆಸ್ಟ್ರಾ ಮಂಜು ಎಲ್ಲ ಉಪಸಮಿತಿಗಳಲ್ಲಿ ತನ್ನ ಬಂಟರನ್ನು ತೂರಿಸಿ ಕಮಿಷನ್ ನೆಂಜುತ್ತಲೇ ಇದ್ದಾನೆ. ಅಂದಂತೆ ಈತ ವಸ್ತು ಪ್ರದರ್ಶನ ಉಪಸಮಿತಿಯನ್ನು ರಚಿಸಿದ್ದು ದಸರಾ ಶುರುವಾಗಿ ನಾಲ್ಕು ದಿನಗಳ ಬಳಿಕ! ಅಂದರೆ ತರಾತುರಿಯಲ್ಲಿ ಎಲ್ಲ ಗುತ್ತಿಗೆ ನೀಡಿ ಸಿಕ್ಕಷ್ಟು ಕಬಳಿಸುವುದು ಈತನ ಪರಮೋದ್ದೇಶ. ಕಾರ್ಯಕ್ರಮವೊಂದಕ್ಕೆ ಈತ ಶಾಸಕ ರಾಮದಾಸರನ್ನು ಅಧ್ಯಕ್ಷರಾಗುವಂತೆ ಕೇಳಿಕೊಂಡ. ಕಾರ್ಯಕ್ರಮಕ್ಕೆ ಬಂದ ರಾಮದಾಸ್, 'ಅಧ್ಯಕ್ಷಗಿರಿ ಬೇಡ. ಸಾಮಾನ್ಯ ಕಾರ್ಯಕರ್ತನಂತೆ ಇರ್ತೀನಿ' ಎಂದರು. ಆದರೆ ಉಡಾಫೆ ಮಂಜ 'ಹಾಗಾದ್ರೆ ನೀವು ಇಲ್ಲಿರೋದೇ ಬೇಡ' ಎಂದು ಅವಮಾನಿಸಿ ಕಳಿಸಿದ. ಅನಾರೋಗ್ಯದ ಕಾರಣಕ್ಕಾಗಿ ವಿಶ್ವನಾಥ್ ಆಸ್ಪತ್ರೆಯಲ್ಲಿದ್ದಾರೆ. ಈ ವಿಷಯವನ್ನು ಪತ್ರಕರ್ತರು ಶೋಭಾರ ಗಮನಕ್ಕೆ ತಂದಾಗ, 'ಇನ್ನು ಸ್ವಲ್ಪ ದಿನ ಅಲ್ಲೇ ಇರ್‍ಲಿ ಬಿಡಿ. ದಸರಾ ಚೆನ್ನಾಗಿ ನಡೆಯುತ್ತೆ' ಎಂದು ಜಂಭದ ಮಾತಾಡಿದ್ದಾರೆ ಶೋಭಾ. ತಾನು ಡಿಫ್ಯಾಕ್ಟೋ ಸಿಎಂ ಎಂದು ಭಾವಿಸಿರುವ ಅವರು ತಮ್ಮ ಚೇಲಾಗಳ ಉದ್ಧಾರಕ್ಕೆಂದೇ ದಸರಾ ನಡೆಸುತ್ತಿರುವಂತಿದೆ. ಇದೆಲ್ಲದರಿಂದ ರೋಸಿ ಹೋಗಿರುವ ರಾಮದಾಸ್ ಕೆಂಪು ಶರ್ಟು ಹಾಕಿಕೊಂಡು ಪ್ರತಿಭಟಿಸುತ್ತಿದ್ದಾರೆ ಹೊರತು ಬಹಿರಂಗವಾಗಿ ಶೋಭಾರನ್ನು ಎದುರಿಸುವ ಛಾತಿ ತೋರಿಸುತ್ತಿಲ್ಲ.


ಮಂಜುನಾಥ್

ತಾನು ಪ್ರಾಮಾಣಿಕ ಎಂದು ಪೋಸ್ ಕೊಡುವುದರಲ್ಲೇ ಕಾಲ ಕಳೆಯುತ್ತಿರುವ ಜಿಲ್ಲಾಧಿಕಾರಿ ಮಣಿವಣ್ಣನ್ ಎಲ್ಲ ಅವ್ಯವಹಾರಗಳನ್ನು ನೋಡಿಯೂ ನೋಡದಂತೆ ವರ್ತಿಸುತ್ತಾ ಪರೋಕ್ಷವಾಗಿ ಭ್ರಷ್ಟರ ಪರ ನಿಂತಿದ್ದಾರೆ. ಮಣಿವಣ್ಣನ್, ಮೈಸೂರು ಪಾಲಿಗೆ ಆಯುಕ್ತ ಎ.ಎಸ್. ರಾಯ್ಕರ್, ಅಪರ ಜಿಲ್ಲಾಧಿಕಾರಿ ಡಾ. ಸಿ.ಜಿ. ಬೆಟಸೂರಮಠ, ಮುಡಾದ ಜಯಣ್ಣ ಮೈಸೂರು ವಿ.ವಿ.ಯ ರಾಮು, ಕಾಡಾದ ಪಾಲಯ್ಯ, ವಸ್ತು ಪ್ರಾಧಿಕಾರದ ಮಂಜುನಾಥ್, ಬಿಜೆಪಿಯ ಮಲ್ಲನಗೌಡ, ಶೋಭಾ ಪಿ.ಎ.ಗಳಾದ ಕೆಂಪೇಗೌಡ, ರವಿಕುಮಾರ್ ಇವರೆಲ್ಲ ಶೋಭಾಕ್ಕನ ಕಾಲಾಳುಗಳಂತೆ ವರ್ತಿಸುತ್ತಾ ಇಡೀ ದಸರಾವನ್ನು ಕಳ್ಳರ ಸಂತೆಯನ್ನಾಗಿ ಮಾಡಿಬಿಟ್ಟಿದ್ದಾರೆ.

ಸೆಪ್ಟೆಂಬರ್ 3 ರಂದು ಸಹಪ್ರಾಯೋಜಕರನ್ನು ಆಹ್ವಾನಿಸುವ ಜಾಹೀರಾತು ಪ್ರಕಟಿಸಲಾಯ್ತು. ಆದರೆ ಅದಕ್ಕೆ ಮೊದಲೇ ಆಗಸ್ಟ್ 25 ರಂದೇ ಎಫ್.ಎಮ್. ರೇಡಿಯೊ 93.5 ಗೆ ಸಹಪ್ರಾಯೋಜಕತ್ವ ನೀಡಲಾಗಿತ್ತು, ಇನ್ನು ಪ್ರತಿ ಉಪಸಮಿತಿಯಲ್ಲಿ ಮೂವತ್ತು ಸದಸ್ಯರನ್ನು ತುರುಕಲಾಗಿದೆ. ಇವರೆಲ್ಲ ಶೋಭಾರ ಭಟ್ಟಂಗಿಗಳೇ. ಇವರೆಲ್ಲ ದಸರಾ ಹೆಸರಲ್ಲಿ ರೋಲ್‌ಕಾಲ್‌ಗೆ ಇಳಿದಿದ್ದಾರೆ. ಆಹಾರ ಉಪಸಮಿತಿಯ ಅಧ್ಯಕ್ಷ ಕಾಶಿ ವಿಶ್ವನಾಥ್ ಎಂಬ


MYSORE DASARA - 2009

CORPORATE SPONSORSHIPS FOR MYSORE DASARA 2009

Mysore Dasara is a State Festival of the Government of Karnataka. This year is the 400th year of Dasara Celebrations, which has started in the year 1610. Last year, the celebrations were witnessed by 25 lakh people over a period of ten days.

The Dasara Organisation Committee invites corporate and individual sponsorships for Dasara events for which opportunities are available in following three categories:

...

The finalization of the sponsorships will be done on the same day itself and hence your representative may be authorized to take a decision on the spot in this regard.

For any clarifications in this regard, the undersigned may be contacted.

Sd/- (Dr. C.G.Betsurmath), Addl. Deputy Commissioner & Dy. Special Officer (Genl.), Dasara 2009. Mob: 94481 89787, Fax: 0821 2439012. Website: www.mysoredasara2009.com

ಮೈಸೂರು ದಸರಾ ಮಹೋತ್ಸವ 2009

[redacted]

WORK ORDER

ದಿನಾಂಕ: 25-8-09

Working President, Publicity Sub-committee, Dasara Festival- 2009 and Deputy Conservator of Forests, Mysore Division, Mysore.

To, Sri. Shivaram Kumar, Station Head, Super Hits 93.5 Red F.M. Mysore.

ಸೆ.3ರಂದು ಜಾಹೀರಾತು | ಆಗಸ್ಟ್ 25ರಂದೇ ಕಂಟ್ರಾಕ್ಟು!

ಚೆಡ್ಡಿ ಮೈಸೂರಿನ ಪ್ರತಿ ನ್ಯಾಯಬೆಲೆ ಅಂಗಡಿಯಿಂದ 500 ರೂ. ಕಿತ್ತಿರುವ ಆರೋಪಗಳಿವೆ. ಈ ಕುರಿತು ಮಣಿವಣ್ಣನ್‌ಗೆ ಕೇಳಿದರೆ, 'ಯಾರಾದರೂ ರೋಲ್‌ಕಾಲ್ ಮಾಡಿದರೆ ದೂರು ಕೊಡಿ' ಎಂದು ಜನರಲ್ಲಿ ಮನವಿ ಮಾಡಿ ಕೈತೊಳೆದುಕೊಂಡಿದ್ದಾರೆ. ಫೋನ್-ಇನ್ ಕಾರ್ಯಕ್ರಮವೊಂದರಲ್ಲಿ, ಕಲಾವಿದನೊಬ್ಬ ತನಗೆ ದಸರಾದಲ್ಲಿ ಭಾಗವಹಿಸುವ ಆಸೆ ಇತ್ತು, ಆದರೆ ಅಲ್ಲಿನ ವ್ಯವಸ್ಥೆ ಅದಕ್ಕೆ ಅಡ್ಡಿ ಮಾಡಿತು ಎಂದು ಹೇಳಿದ. ಅದನ್ನು ಒಪ್ಪಿಕೊಂಡ ಮಣಿವಣ್ಣನ್ ಪಕ್ಕದಲ್ಲೇ ಇದ್ದ ಶೋಭಾ 'ಹೌದು ಮೇಡಮ್, ಬಹುತೇಕ ಕಾರ್ಯಕ್ರಮ ವ್ಯವಸ್ಥೆಯಲ್ಲಿ ಹೀಗಾಗುತ್ತಿದೆ' ಎಂದು ತಪ್ಪು ಒಪ್ಪಿಕೊಂಡ ವಿನಃ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಉಪಸಮಿತಿಯ ಅಧ್ಯಕ್ಷರೂ ಸದಸ್ಯರು ಹಣ ನುಂಗುವುದಲ್ಲದೇ, ಸರ್ಕಾರಿ ಹಣದಲ್ಲಿ ಭರ್ತಿ ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ. ಮೈಸೂರು ತುಂಬಾ ಈ ಪುಡಿ ಪುಢಾರಿ ಫ್ಲೆಕ್ಸ್‌ಗಳೇ ರಾರಾಜಿಸುತ್ತಿವೆ. ಯುವ ದಸರಾಕ್ಕೆ ನೀಡ... ಪಾಸ್‌ಗಳ ಮೇಲೂ ಚೆಡ್ಡಿ ಯಶಸ್ವಿನಿ ಸೋಮಶೇಖ... ಎನ್ನುವಾತ ತನ್ನ ಫೋಟೋ ಹಾಕಿಕೊಂಡಿದ್ದಾ... ಮಂಜುನಾಥನ ಅಳಿಯ ಶರತ್, ಹೇಮಂತ್‌ಗ... ಪೈಪೋಟಿಗೆ ಬಿದ್ದವರಂತೆ ಫ್ಲೆಕ್ಸ್‌ಗಳನ್ನು ಹಾಕಿಕೊಂಡಿದ... ಸರ್ಕಾರದ ದುಡ್ಡು ನುಂಗಿದ್ದಲ್ಲದೇ, ಸರ್ಕಾರದ ದುಡ್ಡ... ಪ್ರಚಾರ ಪಡೆಯುತ್ತಿರುವುದು ಮೈಸೂರಿಗರಲ್ಲಿ ಹೇ... ಮೂಡಿಸಿದೆ.

ಕಳೆದ ವರ್ಷ ಪೆಂಡಾಲ್, ವೇದಿಕೆ ವ್ಯವಸ್ಥೆಗೆ ... ಲಕ್ಷ ಖರ್ಚಾಗಿದ್ದರೆ, ಈ ಸಲ ಗುತ್ತಿಗೆಯನ್ನು 46ಲ... ನೀಡಿದ್ದಾರೆ. ಎಲ್ಲ ಗುತ್ತಿಗೆಗಳಲ್ಲೂ 10 ರಿಂದ ... ಪರ್ಸೆಂಟ್ ಕಮಿಷನ್ ಕಾಮನ್ ಆಗಿದೆ. ಹಾಸನದ ಕಾರ್ಮಿಕ ಅಧಿಕಾರಿ ಆಗಿರುವ ಮೈಸೂರಿನ ... ಕಲ್ಲಪ್ಪ ಪ್ರತಿ ದಸರಾಕ್ಕೂ ಹಾಜರ್ ಆಗುತ್ತಾ... ಲೈಟಿಂಗ್, ಆರ್ಕೆಸ್ಟ್ರಾಗಳ ವ್ಯವಸ್ಥೆ ಮಾಡುವ ಈ... ಹತ್ತು ಪರ್ಸೆಂಟು ಕಮಿಷನ್ ಜೇಬಿಗಿಳಿಸಿ ಹಾಸನ... ವಾಪಸಾಗುತ್ತಾನೆ.

ಹೀಗೆ ಇಡೀ ದಸರಾ ಶೋಭಾರ ಚೇಲಾಗಳಿಂ... ಗಬ್ಬು ವಾಸನೆ ಹೊಡೆಯುತ್ತಿದೆ. ಹಿಂದೆ ವಿಶ್ವನಾ... ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಕೇವ... ಒಂದೂವರೆ ಕೋಟಿ ರೂ.ಗಳಲ್ಲಿ ವ್ಯವಸ್ಥಿತವಾಗಿ ದಸ... ನಡೆಸಿದ್ದರು. ಈಗ 6 ಕೋಟಿ ನೀರುಪಾಲಾಗುತ್ತಿದೆ ಅಲ್ಲಲ್ಲ ಶೋಭಾರ ಚೇಲಾಗಳ ಪಾಲಾಗುತ್ತಿದೆ. ಸೈಕ... ಮೇಲೂ ಶೋಭಾ, ಎತ್ತಿನಗಾಡಿಯಲ್ಲೂ ಶೋಭಾ. ಅವ... ಜಂಬೂ ಸವಾರಿ ಮಾಡುವುದೊಂದು ಮಾತ್ರ ಬಾಕಿಯಿ... ಕೊನೆದಿನ ಆ ಕಾರ್ಯಕ್ರಮವೂ ಇದೆಯಂತೆ ಎಂ... ಸುದ್ದಿ ಮೈಸೂರಿಗರಲ್ಲಿ ಥ್ರಿಲ್ ಮೂಡಿಸಿಬಿಟ್ಟಿದೆ.

● ವರದಿಗಾ...

ಮಂಡ್ಯ: ಡೇಂಜರ್ ಶಿವ: ಬಂಧನವೋ, ಪೊಲೀಸರ ನಾಟಕವೋ?


ಪಾತಕಿ ಡೇಂಜರ್ ಶಿವನ ಬಂಧನವಾಗಿದೆ....!

ಮಂಡ್ಯದ ಪೇಟೆಬೀದಿಯ ದಿವಂಗತ ರೌಡಿ ಸುಂದ್ರನ ಮಗ, ಮತ್ತೊಬ್ಬ ನಟೋರಿಯಸ್ ರೌಡಿ ಜಡೇಜಾ ರವಿಯ ಖಾಸಾ ಬಾಮೈದನೇ ಶಿವಕುಮಾರ್ ಅಲಿಯಾಸ್ ಡೇಂಜರ್ ಶಿವ. ಈತ ಪೊಲೀಸರಿಂದ ಮೊನ್ನೆಮೊನ್ನೆ ಬಂಧನಕ್ಕೊಳಗಾಗಿದ್ದಾನೆ. ಇದು ಪೊಲೀಸರು ಕಷ್ಟಪಟ್ಟು ಹಿಡಿದು ಮಾಡಿದ ಬಂಧನವಾ? ಅಥವಾ ಪೊಲೀಸರು ಮತ್ತು ಶಿವ ಸೇರಿ ಆಡಿದ ನಾಟಕವಾ? ಇದರ ಹಿಂದೆ ರಾಜಕೀಯ ಒತ್ತಡಗಳಿವೆಯಾ? ಅಥವಾ ಪೊಲೀಸರು ಕೊಲೆ ಆರೋಪಿಯನ್ನು ಹಿಡಿಯಲೇಬೇಕಾದ ಅನಿವಾರ್ಯತೆಯಿಂದ ಮಾಡಿದ ಅರೆಸ್ಟಾ?

ಮಂಡ್ಯದ ಪಾತಕಲೋಕದಲ್ಲಿನ ರೌಡಿಗಳಾದ ಸುಂದ್ರ, ಅಣ್ಣಯ್ಯ, ಎಸ್.ಕೆ.ರಾಮಣ್ಣ, ಶಂಕ್ರ, ಶಿವರಾಮರೆಂಬ ಅಣ್ಣ ತಮ್ಮಂದಿರು, ಜಡೇಜಾ ರವಿಗಳಂತಹ ನಟೋರಿಯಸ್‌ಗಳು ಹಾದಿಬೀದಿಗಳಲ್ಲಿ ಹತ್ಯೆಯಾಗಿ ಶಿವನಪಾದ ಸೇರಿದರೆ, ಅಶೋಕಪೈ, ಪೇಟೆಬೀದಿಯ ಚೇತನ, ಮನುರಂತಹ ಪಾತಕಿಗಳು ತಮ್ಮದೇ ಪಾತಕ ಕೃತ್ಯಗಳಿಂದ ಜೈಲುಪಾಲಾಗಿದ್ದಾರೆ. ಇನ್ನೂ ಬಂಗಾರಪ್ಪ ಕಪ್ಪೆ ರವಿ, ದತ್ತ ಮಂಡ್ಯ ತೊರೆದು ಬೀದಿಪಾಲಾಗಿದ್ದಾರೆ. ಇಂಥವರಲ್ಲಿ ಹೊರಗಿದ್ದವರ ಪೈಕಿ ಅತ್ಯಂತ ಡೇಂಜರಸ್ ಆಗಿದ್ದವನೇ ಶಿವ ಅಲಿಯಾಸ್ ಡೇಂಜರ್ ಶಿವ.


ಡೇಂಜರ್ ಶಿವನ ತಂದೆ ಸುಂದ್ರ 80ರ ದಶಕದಲ್ಲಿ ಮಂಡ್ಯ ಡಾನ್ ಪಟ್ಟಕ್ಕಾಗಿ ಹಪಹಪಿಸುತ್ತಿದ್ದವ. ಇದಕ್ಕಾಗಿ ಪೈಪೋಟಿಯಿದ್ದದ್ದು ಗಾಂಧಿನಗರದ ಮಲ್ಲಿಕಾ, ಅಣ್ಣಯ್ಯ, ಈಗ ಜೆಡಿಎಸ್ ಲೀಡರ್ ಆಗಿರುವ ಹಾಲಹಳ್ಳಿ ಆನಂದ ನಡುವೆ. ಸುಂದ್ರ ಆತ್ಮಾನಂದನ ತಮ್ಮ ಸತ್ಯನ ಪೆಟ್ರೋಲ್ ಬಂಕ್ ಬಳಿ ಮಲಗಿದ್ದಾಗ, ಮೈಸೂರಿನ ಕ್ಯಾಟ್ ಮಾದೇವಾ ಮತ್ತು ಅಣ್ಣಯ್ಯ ಸುಂದ್ರನನ್ನು ಕಲ್ಲಿನಿಂದ ಜಜ್ಜಿ ಕೊಂದುಹಾಕಿದ್ದರು. ಅಷ್ಟರಲ್ಲಾಗಲೇ ಹಾದಿತಪ್ಪಿದ್ದ ಸುಂದ್ರನ ಖಾಸಾ ಬಾಮೈದ ಜಡೇಜಾ ರವಿ, ಭಾವನ ಹೆಸರೇಳಿಕೊಂಡು ಎತ್ತುವಳಿ ಮಾಡುವ ಸಕಲ ವಿದ್ಯೆಗಳನ್ನ ಕರಗತ ಮಾಡಿಕೊಂಡಿದ್ದ. ತನ್ನ ಭಾವನ ಹತ್ಯೆಗೆ ಪ್ರತೀಕಾರವಾಗಿ ಅಣ್ಣಯ್ಯನನ್ನೇ ಬಲಿತೆಗೆದುಕೊಳ್ಳುವ ಜಡೇಜಾ ರವಿ ಹಾಕಿದ ಸ್ಕೆಚ್‌ನಲ್ಲಿ ಸಾಥ್ ನೀಡಿದ್ದು ಕಲ್ಲಹಳ್ಳಿ ಪ್ರಭುನನ್ನ ಕಳೆದುಕೊಂಡಿದ್ದ ಅಶೋಕ ಪೈ, ಶಂಕ್ರ, ಶೆಟ್ಟಿ ಮೋಹನ ಸೇರಿದಂತೆ 12 ಮಂದಿ.

ಇವೆಲ್ಲದರ ಲಾಭ ಪಡೆದಿದ್ದು ಎಸ್.ಕೆ.ರಾಮಣ್ಣ. ಈತ ಮಾಜಿ ಶಾಸಕ ಆತ್ಮಾನಂದನ ಸಂಬಂಧಿ ಕೂಡ. ಈತ ಶಿವನಂಜಪ್ಪರ ಕುಟುಂಬದ ಫ್ಯೂಡಲ್ ರಾಜಕೀಯಕ್ಕೆ ಸಾಕಷ್ಟು ಬಳಕೆಯಾದ. ಕಲೆಕ್ಷನ್ ವಿಚಾರದಲ್ಲಿ ಬಂದ ಮನಸ್ತಾಪಗಳ ಕಾರಣಕ್ಕಾಗಿ ಶಂಕ್ರ ಮತ್ತು ಅವನ ತಮ್ಮ ಶಿವರಾಮ ಎಸ್.ಕೆ.ರಾಮಣ್ಣನನ್ನ ರಸ್ತೆ ಬದಿಯಲ್ಲೇ


ನಾಗೇಂದ್ರ



ಜಡೇಜಾ ರವಿ





ಕೊಚ್ಚಿಹಾಕಿದರು. ಆದರೆ ಎಸ್.ಕೆ.ರಾಮಣ್ಣ ಜಡೇಜಾ ರವಿಯ ರೌಡಿ ಗುರು. ಇದರ ಋಣ ತೀರಿಸಲು, ಅಣ್ಣಯ್ಯನನ್ನು ಮುಗಿಸಲು ಸಹಕರಿಸಿದ ತನ್ನ ಸ್ನೇಹಿತ ಶಂಕ್ರನನ್ನೇ ಜಡೇಜಾ ರವಿ ಮುಗಿಸಿದ. ಇವೆರಡು ಹತ್ಯೆಗಳಲ್ಲಿ ಇದೇ ಡೇಂಜರ್ ಶಿವ ತನ್ನ ಮಾವನ ಬೆನ್ನಿಗೆ ನಿಂತಿದ್ದ. ದುರಂತವೆಂದರೆ ಇದೇ. ಅಣ್ಣಯ್ಯನನ್ನು ಮುಗಿಸಲು ಜೊತೆಯಾಗಿದ್ದ ಶಂಕ್ರನನ್ನ ಜಡೇಜಾ ರವಿ ಕೊಂದುಹಾಕಿದ. ಕುಖ್ಯಾತ ಸಾರಾಯಿ ದಂಧೆಕೋರ ರಂಗಸ್ವಾಮಿ ಹಾಗೂ ಜಡೇಜಾ ಜೊತೆಗೂಡಿ ಅದೇ ಅಣ್ಣಯ್ಯನ ಕೊಲೆಗೆ ಸಾಥ್ ನೀಡಿದ್ದ ಪಾತಕಿ ಸ್ನೇಹಿತ ಅಶೋಕ ಪೈ ಮುಂಗಿಸಲು ಬಂಗಾರಪ್ಪನನ್ನು ಬಿಟ್ಟಿದ್ದರು. ಅದರ ಸುಳಿವು ಹಿಡಿದ ಪೈ, ತಿಥಿಗೆ ಹೊರಟಿದ್ದ ರವಿಯನ್ನೇ ಯಲಿಯೂರು ಸರ್ಕಲ್ ಬಳಿ ತಿಥಿ ಮಾಡಿದ. ಇದಕ್ಕೆ ತನ್ನ ಭಾವ ಶಂಕ್ರನನ್ನ ಕಳೆದುಕೊಂಡಿದ್ದ ಚೇತನ, ಮನು ಜೊತೆಗೂಡುತ್ತಾರೆ. ಈ ರೀತಿಯಲ್ಲಿ ಮಂಡ್ಯದ ಭೂಗತ ಜಗತ್ತು ಎರಡು ಸುತ್ತು ಚಕ್ರ ಉರುಳಿಸಿತ್ತು.

ಡೇಂಜರಸ್ ರೌಡಿ!


ಡೇಂಜರ್ ಶಿವ

ಡೇಂಜರ್ ಶಿವ ತನ್ನ ನಟೋರಿಯಸ್ ಗುಣದಿಂದಾಗಿಯೇ ಡೇಂಜರ್ ಶಿವ ಎಂಬ ಕುಖ್ಯಾತಿಯನ್ನು ಪಡೆದುಕೊಂಡಿದ್ದ. ತಂದೆ ಕಳೆದುಕೊಂಡ ನಂತರ ಮಾವ ಜಡೇಜಾ ಜೊತೆ ಸೇರಿ ಸಕಲ ದುಷ್ಟತನವನ್ನು ಕರಗತ ಮಾಡಿಕೊಂಡಿದ್ದ. ತನ್ನ ಮಾವನ ಹತ್ಯೆಗೆ ಫೈನಾನ್ಸ್ ಮಾಡಿದ್ದು ಮತ್ತೊಬ್ಬ ಸಾರಾಯಿ ದಂಧೆಕೋರ ಹೆಚ್.ಪಿ.ನಾಗೇಂದ್ರ ಅಲಿಯಾಸ್ ನಾಗಣ್ಣ ಎಂದು ಯಾವುದೋ ಪತ್ರಿಕೆ ಬರೆದದ್ದನ್ನೆ ನಂಬಿಕೊಂಡು ಕುದಿಯುತ್ತಿದ್ದ. ಇದಕ್ಕೆ ಕಾರಣವೂ ಇತ್ತು, ಇದೇ ಹೆಚ್.ಪಿ. ನಾಗೇಂದ್ರ ಶಂಕ್ರನನ್ನ ಮುಂದಿಟ್ಟುಕೊಂಡು ತನ್ನ ಸಾರಾಯಿ ದಂಧೆಯನ್ನ ಸುಗಮವಾಗಿ ನಡೆಸುತ್ತಿದ್ದ. ಶಂಕ್ರನ ದಿನನಿತ್ಯದ ಖರ್ಚು ವಗೈರೆಗಳನ್ನೂ ಸಹ ನೋಡಿಕೊಳ್ಳುತ್ತಿದ್ದ. ಒಂದು ದಿನ ಹೆಚ್.ಪಿ.ನಾಗೇಂದ್ರ ಮತ್ತು ಆತನ ಹೆಂಡತಿ (ಈಗಿನ ಮೂಡಾ ಅಧ್ಯಕ್ಷೆ ವಿದ್ಯಾ) ತಮ್ಮ ಮಗನನ್ನು ನೋಡಿಕೊಂಡು ಬರಲು ಮೈಸೂರಿನಲ್ಲಿರುವ ರಾಮಕೃಷ್ಣ ಆಶ್ರಮದ ಶಾಲೆಗೆ ಹೋಗಿದ್ದಾಗ ಹೆಂಡತಿ, ಮಗನ ಎದುರಿಗೆ ನಾಗೇಂದ್ರನನ್ನ ಹರೋಹರಾ ಎನ್ನಿಸಿದ್ದು ಇದೇ ಡೇಂಜರ್ ಶಿವ. ಇದಾದ ನಂತ... ಡೇಂಜರ್ ಶಿವನನ್ನ ಅರೆಸ್ಟ್ ಮಾಡಲಾಗಿತ್ತು.

ಡೇಂಜರ್ ಶಿವ ಹೆಸರಿನ... ಡೇಂಜರ್. ಸದಾ ಡ್ರಗ್ ಏರಿಸಿಕೊಂಡು ಅಮಲಿನಲ್ಲಿರುತ್ತಾನೆ. ಶಂಕ್ರನ ಕೇಸಿನ... ಜಡೇಜಾ ರವಿ, ಡೇಂಜರ್ ಶಿ... ಸೇರಿದಂತೆ ಇಡೀ ಗ್ಯಾಂಗ್ ಜೈಲು ಸೇರಿದ್ದ ಸಂದರ್ಭದಲ್ಲಿ ಜಡೇಜಾ ರವಿ... ಹೊಡೆಯಲು ಹೋಗಿ ಸಕತ್ತಾಗಿ ಒದೆ ತಿಂದಿದ್ದ. ಜಡೇಜಾ ರವಿ ಮರ್ಡರ್... ನಂತರ ಈತನ ಎಲ್ಲಾ ಖಯಾಲಿಗಳು ಅತಿರೇಕಕ್ಕೆ ಹೋಗಿದ್ದವು.

ಈಗ ಅರೆಸ್ಟ್ ಮಾಡಿದ್ದು ಏಕೆ?

ನಾಗೇಂದ್ರ ಮರ್ಡರ್ ಕೇಸಿನಲ್ಲಿ ಬಂಧಿತನಾಗಿದ್ದ ಈ... ಮೆಡಿಕಲ್ ಗ್ರೌಂಡ್ಸ್ ಮೇಲೆ ಜಾಮೀನು ಪಡೆದು ಹೊರಬಿದ್ದಿದ್ದ. ಒಂದೂಕಾಲು ವರ್ಷ ಜೈಲಿನಲ್ಲಿದ್ದು ಬಂದ ಮೇಲೂ ಸುಮ್ಮನೇ ಕೂರಲಿಲ್ಲ. ಕಳೆದ ಫೆಬ್ರವರಿಯಲ್ಲಿ ಹೊರಗೆ ಬಂದವನೇ ತಡ ತನ್ನ ಚಾಯಮಾನಕ್ಕೆ ತಕ್ಕಂತೆ ರೌಡಿಸಂ ಅನ್ನು ಶುರುಹಚ್ಚಿಕೊಂಡಿದ್ದ. ಶಾಸ... ಎಂ.ಶ್ರೀನಿವಾಸ್ ಮತ್ತು ನಾಗೇಂದ್ರನ ಮರ್ಡರ್‌ನ ಪ್ರತ್ಯ... ಸಾಕ್ಷಿಯಾಗಿರುವ ಆತನ ಹೆಂಡತಿಗೆ ವಿದ್ಯಾಗೆ ಕೊ...

...ತ್ರೈಪ್ಣೋವಿದೇವಿ ...ಣಲು 30 ರೂ.

...ಗಳು ದಸರಾ ಉತ್ಸವದಲ್ಲೂ ತಮ್ಮ ಬುದ್ಧಿ ...ದ್ದಾರೆ. ಕಳೆದ ಸಲ ನಿರಾಕಾರ ಸ್ವರೂಪಿ ...ಗವನ್ನು ಸ್ಥಾಪಿಸಿ ದೋಚಿದ್ದರೆ ಈ ವರ್ಷ ...ದೇವಿಯ ದೃಶ್ಯ ಸೃಷ್ಟಿಸಿ ಗುಡಿ ತರಹ ...ದ್ದಾರೆ. ಈ ಕಾರ್ಯಕ್ರಮದ ಗುತ್ತಿಗೆ ಪಡೆದಿರುವ ...ಲ್ ಎಂಬ ಮಾರವಾಡಿ ದೇವಿದರ್ಶನಕ್ಕೆ 30 ...ಪ್ಪ ಜನರನ್ನು ಸುಲಿಯುತ್ತಿದ್ದಾನೆ. ಇನ್ನೊಂದು ...ಂಗ್ ಫೀಸಿನ ಹಾವಳಿ ಜೋರಾಗಿದೆ.

...ಟನೆಗೆ ಕಪಟ ಸ್ವಾಮಿ ರವಿಶಂಕರನನ್ನು ... ದಸರಾಕ್ಕೆ ಚೆಡ್ಡಿ ಬಣ್ಣ ಬಂದಿತ್ತು, ರವಿಶಂಕರನ ...ಸೋಗಲಾಡಿ ಭಕ್ತರು ಡೊಳ್ಳುಗಳ ಮುಂದೆ ...ಗಿ ಕುಣಿದು ಅಸಹ್ಯ ಮೂಡಿಸಿದ್ದರು.

...ಕರ್ತರು ಇಂಥದನ್ನೆಲ್ಲ ಪ್ರಶ್ನಿಸುತ್ತ ಬಂದರು. ...ಸೇಡು ತೀರಿಸಿಕೊಳ್ಳಲೆಂಬಂತೆ 23ರಂದು ... ಕಾರ್ಯಕ್ರಮದ ಫೋಟೋ ತೆಗೆಯಲು ...ಸಂಜೆವಾಣಿಯ ಚಂದ್ರು ಮೇಲೆ ಪೊಲೀಸರು ...ದರು. ಬೆಂಗಳೂರಿನ ಎಸಿಪಿ ಮಂಜುನಾಥ್‌ನೇ ...ನೇತೃತ್ವ ವಹಿಸಿದ್ದ. 24ರಂದು ಪತ್ರಕರ್ತರು ...ದಾಗ ಜಿಲ್ಲಾಡಳಿತ ಕ್ಷಮೆ ಕೋರಿ ಮಾನ ...ಂಡಿತು.



ಫಾರಿನ್ ಡೊಳ್ಳು ಕುಣಿತ


... ಹಾಕುತ್ತಿದ್ದ ಎನ್ನಲಾಗಿದೆ. ಪೇಟೆಬೀದಿಯ ಹಲವು ...ಸ್ಥರಿಗೆ ಮತ್ತು ಮಂಡ್ಯದ ಇನ್ನೂ ಕೆಲವು ಹಗಲು ...ಚೆಕೋರರಿಂದ ದುಡ್ಡು ಕೇಳಿ ತೊಂದರೆ ಕೊಟ್ಟಿದ್ದ ...ಸುದ್ದಿಗಳೂ ಇವೆ.

...ಕೋರ್ಟ್‌ಗೆ ಹಾಜರಾಗದೆ ವಾರಂಟ್ ಮಾಡಿಸಿ ...ದ್ದ ಡೇಂಜರ್‌ನನ್ನು ಹುಡುಕಲು ಪೊಲೀಸರೇನೂ ...ದು ತೊಂದರೆ ತೆಗೆದುಕೊಂಡಿರಲಿಲ್ಲ, ಆದರೆ ...ದರಿಕೆಯಿದ್ದ ರಾಜಕಾರಣಿಗಳ ಒತ್ತಡದಿಂದಾಗಿ ... ಮತ್ತೆ ಹಿಡಿದು ಬಂಧಿಸಿದ್ದಾರೆ. ಇನ್ನೊಂದು ...ದ ಪ್ರಕಾರ, ಅಬ್ಕಾರಿ ಫ್ಯಾಮಿಲಿಯೊಂದು ಈ ...ನ್ನು ತಾವೇ ನಿಭಾಯಿಸಬೇಕು, ಅದಕ್ಕೆಂದು ...ರ್ ಶಿವನನ್ನು ಕೊಲ್ಲಿಸಬೇಕೆಂದು ತಯಾರಿ ...ಕೊಂಡಿತ್ತಂತೆ. ಅದರ ಸುಳಿವನ್ನು ಹಿಡಿದ ...ಸರೇ ಶಿವನನ್ನು ರಕ್ಷಿಸಲು ಆತನನ್ನು ಬಂಧನ ...ಲ್ಲಿ ಕರೆದುಕೊಂಡು ಹೋಗಿದ್ದಾರಂತೆ. ಇದರ ...ಟ್ ಕಾಪ್ ಎಂಬ ಬಿರುದುಳ್ಳ ಇನ್ಸ್‌ಪೆಕ್ಟರ್ ... ಎಂಬುದು ಪೊಲೀಸ್ ವಲಯಗಳಲ್ಲಿ ...ಡುತ್ತಿರುವ ಮಾತು. ಆದ್ದರಿಂದಲೇ ಹೆಲ್ಮೆಟ್ ...ಹಾಕುವ ಶಿವನು ಗಾಡಿ ಓಡಿಸುವ ಸ್ಟೈಲ್‌ನಿಂದ ...ಪಿ ಬೆಂಗಳೂರಿನಲ್ಲಿ ಹಿಡಿಯಲಾಯಿತು ಎಂಬ ... ನಡೆದಿದೆ.

...ಲಿನೊಳಗಿನಿಂದಲೇ ಸ್ಕೆಚ್ ರೂಪಿಸಿ ಕೊಲೆ ...ವುದರಲ್ಲಿ ಕೇವಲ ಬೆಂಗಳೂರು ರೌಡಿಗಳು ...ಲ್ಲ, ಮಂಡ್ಯ ರೌಡಿಗಳೂ ಪಳಗಿಬಿಟ್ಟಿದ್ದಾರೆ. ಕನಿಷ್ಠ ... ಕೊಲೆಗಳು ಹಾಗೆಯೇ ನಡೆದಿವೆ. ಒಟ್ಟಿನಲ್ಲಿ ...ದಕ್ಕೆ ಇಂಥ ರೌಡಿಗಳಿಂದ ಮುಕ್ತಿ ದೊರಕಿಸಲು [illegible] ಪೊಲೀಸರೂ ಮನಸ್ಸು ... ಇತ್ತೀಚಿಗೆ ಶ್ರೀರಂಗಪಟ್ಟಣ ತಾಲೂಕಿನಲ್ಲಿ ... [illegible] ಮಂಜುನಾಥನ ಕೊಲೆಯೂ ... ಅಲ್ಲಲ್ಲಿ ಇತರೆ ಕೊಲೆಗಳೂ ನಡೆಯುತ್ತಲೇ ... [illegible], ಕುಮಾರ್ ಬಗಿ ... ಎಂದು ನಿರೀಕ್ಷೆ ಮಾಡಬಹುದೇ?

● ವರದಿಗಾರ


ಬಳ್ಳಾರಿ ರೆಡ್ಡಿ ವಿರುದ್ಧ ರಾಮಲಿಂಗಪ್ಪ ಗರಂ!



ರಾಮಲಿಂಗಪ್ಪ


'ನೀನೇನ್ ನನ್ನನ್ನ ಎಂಎಲ್ಸಿ ಮಾಡೋದ್, ಸೆಂಟ್ರಲ್‌ನೋರು ಹೇಳಿದ್ರೆ ನಿಮ್ಮಪ್ಪ ಕೂಡ ಮಾಡ್ತಾನೆ'. ಇದು ಬಳ್ಳಾರಿ ಬಿಜೆಪಿಯ ಅನಭಿಷಿಕ್ತ ದೊರೆ ಹಾಗೂ ರಾಜ್ಯ ಬಿಜೆಪಿಯ ಖಜಾನೆ ಜನಾರ್ದನ ರೆಡ್ಡಿ ಎಂಬ ತಿಮಿಂಗಿಲಗೆ ರಾಮಲಿಂಗಪ್ಪ ಎಂಬ ಯಕಶ್ಚಿತ್ ಜಿಲ್ಲಾ ಪಂಚಾಯತಿಯ ಮಾಜಿ ಉಪಾಧ್ಯಕ್ಷ ತುಂಬಿದ ಸಭೆಯಲ್ಲೇ ಎದೆನಿಗರಿಸಿಕೊಂಡು ಸನ್ಮಾನಿಸಿದ ರೀತಿ.

ಅದು ನಡೆದದ್ದು ಮೊನ್ನೆ ಬಳ್ಳಾರಿ ಬಿಜೆಪಿ ಖಾಸಗೀ ದರ್ಬಾರ್ ಕೇಂದ್ರವಾಗಿರುವ 'ಕುಟೀರ'ದಲ್ಲಿ. ಬಳ್ಳಾರಿ ಜಿಲ್ಲಾ ಪಂಚಾಯತಿಗೆ ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಚರ್ಚಿಸುವುದಕ್ಕಾಗಿ ನಡೆದ ಸಭೆಯಲ್ಲಿ. ಜಿಲ್ಲಾ ಪಂಚಾಯತಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಹಲವರಲ್ಲಿ ಜಿಲ್ಲಾ ಪಂಚಾಯತಿಯ ಮಾಜಿ ಉಪಾಧ್ಯಕ್ಷ ಹಾಗೂ ಇಂಧನ ಸಚಿವ ಕೆ.ಎಸ್.ಈಶ್ವರಪ್ಪ ಅವರ ಹತ್ತಿರದ ಸಂಬಂಧಿಯಾಗಿರುವ ಕೆ.ಎ.ರಾಮಲಿಂಗಪ್ಪ ಕೂಡ ಒಬ್ಬರು. ಆದರೆ, ಜನಾರ್ದನ ರೆಡ್ಡಿಗೆ ಈತನನ್ನು ಅಧ್ಯಕ್ಷ ಕುರ್ಚಿಯ ಮೇಲೆ ಕೂರಿಸುವುದಕ್ಕೆ ಇಷ್ಟವಿಲ್ಲ. ಬಹಳ ದಿನಗಳಿಂದ ತನ್ನ ನಂಬಿಕೆ ಭಂಟನಾಗಿರುವ ಕುರುಗೋಡಿನ ನಾಡಗೌಡ್ರ ರುದ್ರಗೌಡರನ್ನೇ ಕೂರಿಸಬೇಕೆಂದು ಅಂದುಕೊಂಡಿದ್ದಾರೆ. ಈ ಹಿಂದೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ವಿರುದ್ಧದ 150 ಕೋಟಿ ಗಣಿ ಹಗರಣದಲ್ಲಿ ಪ್ರಮುಖ ಸಾಕ್ಷಿಯಾಗಿ ಇದೇ ರುದ್ರಗೌಡರನ್ನು ರೆಡ್ಡಿಗಳು ಗುರಾಣಿಯಂತೆ ಬಳಸಿಕೊಂಡಿದ್ದರು. ಈಗ ಅದಕ್ಕೆ ಕೃತಜ್ಞತೆ ಸಲ್ಲಿಸುವುದಕ್ಕೋ ಅಥವಾ ತನ್ನ ನಂಬಿಕಸ್ಥನೊಬ್ಬ ಆ ಕುರ್ಚಿಯಲ್ಲಿದ್ದರೆ ತಮ್ಮೆಲ್ಲಾ ವ್ಯವಹಾರಗಳಿಗೆ ಅನುಕೂಲವಾಗುತ್ತೆ ಎಂಬ ಕಾರಣಕ್ಕೋ ಗೊತ್ತಿಲ್ಲ ಅಂತೂ ಅವರನ್ನೇ ಜಿ.ಪಂ. ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ರೆಡ್ಡಿ ಹಠತೊಟ್ಟಿದ್ದಾರೆ. ಜಿಲ್ಲೆಯ ಪ್ರಬಲ ಲಿಂಗಾಯತ ಕೋಮಿನ ನಾಯಕರೂ, ಬಿ.ಇ. ಪದವೀಧರರೂ ಆಗಿರುವ ರುದ್ರಗೌಡರು ತನ್ನ ಬಹುದಿನದ ಕನಸೊಂದು ನನಸಾಗುವ ಗಳಿಗೆಗಾಗಿ ಕಾಯುತ್ತಿದ್ದಾರೆ. ಅದೇ ಹೊತ್ತಿಗೆ ಬಳ್ಳಾರಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಸ್ಥಾನ 'ಸಾಮಾನ್ಯ ವರ್ಗ'ಕ್ಕೆ ಮೀಸಲಾದ ಮೇಲಂತೂ ಅವರ ಕನಸುಗಳು ಗರಿಗೆದರಿ ಹಾರಲಾರಂಭಿಸಿವೆ. ಹೀಗಾಗಿ, ಅವರು ಆ ಸ್ಥಾನಕ್ಕೇರುವುದು ಬಹುತೇಕವಾಗಿ ಖಚಿತವಾಗಿತ್ತು.



ಈಶ್ವರಪ್ಪ

ಆದರೆ, ಈ ಸ್ಥಾನದ ಮೇಲೆ ಕಣ್ಣಿಟ್ಟು ಬಹಳ ದಿನಗಳಿಂದ ಚಾತಕಪಕ್ಷಿಯಂತೆ ಕಾಯುತ್ತಿದ್ದ; ಈ ಕಾರ್ಯಸಾಧನೆಗಾಗಿ ಬೆಂಗಳೂರು, ಶಿವಮೊಗ್ಗ, ಬಳ್ಳಾರಿ ಎಂತೆಲ್ಲಾ ಅಂಡಲೆದು ಲಕ್ಷಾಂತರ ರೂಪಾಯಿ ದುಡ್ಡು, ಸಮಯ ಖರ್ಚು ಮಾಡಿಕೊಂಡಿದ್ದ ರಾಮಲಿಂಗಪ್ಪನಿಗೆ ಈ ವಿಚಾರ ತಿಳಿಯುತ್ತಿದ್ದಂತೆಯೇ ಗರಂ ಆಗಿಬಿಟ್ಟರು. ಬಿಜೆಪಿಯ ಸದಸ್ಯರ ಅಭಿಪ್ರಾಯ ಸಂಗ್ರಹಕ್ಕಾಗಿ ಜಿಲ್ಲಾ ಪಂಚಾಯತಿಯ ಎಲ್ಲಾ ಸದಸ್ಯರ ಮತ್ತು ಮುಖಂಡರ ಸಭೆಯನ್ನು 'ಕುಟೀರ'ದಲ್ಲಿ ಏರ್ಪಡಿಸಿದಾಗ ಸಹಜವಾಗಿಯೇ ಅದು ಸ್ಫೋಟಗೊಂಡುಬಿಟ್ಟಿತು. "ಜಿ.ಪಂ. ಅಧ್ಯಕ್ಷ ಸ್ಥಾನ ನನಗೇ ದಕ್ಕಬೇಕು. ಅದು ಯಾರ ಪಾಲಾಗಲೂ ನಾನು ಬಿಡುವುದಿಲ್ಲ'' ಎಂದು ಸಭೆಯಲ್ಲಿ ಒಂದೇಸಮನೆ ಒದರಾಡಲಾರಂಭಿಸಿದರು.



ರುದ್ರಗೌಡ

ಆದರೆ, ಜನಾರ್ದನ ರೆಡ್ಡಿಯ ಮನದಾಳದ ಇಂಗಿತವನ್ನು ತಿಳಿದಿದ್ದ ಎಲ್ಲರೂ ರಾಮಲಿಂಗಪ್ಪನ ಮಾತಿಗೆ ಸೊಪ್ಪು ಹಾಕದೇ ಎನ್. ರುದ್ರಗೌಡ ಅವರಿಗೆ ಬೆಂಬಲ ವ್ಯಕ್ತಪಡಿಸಿದರು. ಇದರಿಂದ ಮತ್ತೆ ಕೆಂಡಮಂಡಲವಾದ ರಾಮಲಿಂಗಪ್ಪ ಭ್ರಮನಿರಸನಗೊಂಡು "ನೀವು ಯಾರನ್ನಾದರೂ ಅಧ್ಯಕ್ಷರನ್ನು ಮಾಡಿ. ಶಾಲೆಗಳಿಗೆ ಪೂರೈಕೆ ಮಾಡುವ ಡೆಸ್ಕ್ ಇನ್ನಿತರೆಗಳಲ್ಲಿ ಕೋಟ್ಯಂತರ ರೂಪಾಯಿಯನ್ನು ತಿಂದ, ಕಡುಭ್ರಷ್ಟ ರುದ್ರಗೌಡನಿಗೆ ಮಾತ್ರ ಅಧ್ಯಕ್ಷ ಪದವಿ ನೀಡಬೇಡಿ. ಆತನೇನಾದರೂ ಜಿ.ಪಂ. ಅಧ್ಯಕ್ಷ ಗಾದಿಗೇರಿದರೆ ಕೋಟ್ಯಂತರ ರೂಪಾಯಿಗಳ ಭ್ರಷ್ಟಾಚಾರ ನಡೆಯಲಿದೆ. ಜಾತಿ ರಾಜಕೀಯ ಹೆಚ್ಚಾಗುತ್ತದೆ" ಎಂದೆಲ್ಲಾ ಆಕ್ರೋಶಭರಿತನಾಗಿ ಬಾಯಿಗೆ ಬಂದಂಗೆ ಒದರಿದ. ಅಲ್ಲಿಯತನಕ ಅತ್ಯಂತ ಸಮಾಧಾನದಿಂದ, ಶಾಂತಚಿತ್ತದಿಂದ, ಏಕಾಗ್ರತೆಯಿಂದ ಚರ್ಚೆಯನ್ನು ಕೇಳಿಸಿಕೊಳ್ಳುತ್ತಿದ್ದ ಜಿ. ಜನಾರ್ದನರೆಡ್ಡಿ ಎದ್ದು ನಿಂತು "ರಾಮಲಿಂಗಪ್ಪ... ನಾನು ರುದ್ರಗೌಡನಿಗೆ ಈಗಾಗಲೇ ಮಾತು ನೀಡಿದ್ದೇನೆ. ನೀನು ಈಗಾಗ್ಲೇ ಉಪಾಧ್ಯಕ್ಷ ಆಗಿದ್ದಿ. ಬೇರೆಯವರಿಗೂ ಅವಕಾಶ ನೀಡು. ಡಿಸೆಂಬರ್‌ನಲ್ಲಿ ಬರುವ ಎಂಎಲ್ಸಿ ಎಲೆಕ್ಷನ್‌ನಲ್ಲಿ ನಿನಿಗೇ ಟಿಕೆಟ್ ಇಸ್ಕೊಡ್ತೀನಿ. ಸದ್ಯಕ್ಕೆ ಸುಮ್ಮನಿರು" ಎಂದು ಸಮಾಧಾನ ಹೇಳಲು ಪ್ರಯತ್ನಿಸಿದರು.

ಜನಾರ್ದನರೆಡ್ಡಿಯ ಮಾತುಗಳು ಇನ್ನೂ ಮುಗಿದಿರಲಿಲ್ಲ, ಅಷ್ಟರಲ್ಲೇ ಎದ್ದು ನಿಂತ ರಾಮಲಿಂಗಪ್ಪ "ನೀನೇನ್ ನನ್ನನ್ನ ಎಂಎಲ್ಸಿ ಮಾಡೋದ್, ಸೆಂಟ್ರಲ್‌ನೋರು ಹೇಳಿದ್ರೆ ನಿಮ್ಮಪ್ಪ ಕೂಡ ನನ್ನನ್ನ ಎಂಎಲ್ಸಿ ಮಾಡ್ತಾನೆ" ಎಂದು ಬಾಯ್ಗೆ ಬಂದಂತೆ ಅರಚಾಡಿ ಜನಾರ್ದನ ರೆಡ್ಡಿಯ ಬೆವರಿಳಿಸಿಬಿಟ್ಟರು. ತನ್ನ ಸಾಮ್ರಾಜ್ಯದೊಳಗೇ ತನ್ನೆದುರು ಎದೆಸೆಟೆಸಿಕೊಂಡು ಬೆವರಿಳಿಸಿದ್ದು ಜನಾರ್ದನ ರೆಡ್ಡಿಯ ಅಥಾರಿಟಿಗೆ ಸವಾಲೆಸೆದಂತಿತ್ತು. ಸಭೆಯಲ್ಲಿದ್ದವರೆಲ್ಲರಿಗೂ ದಿಗ್ಭ್ರಮೆ ಮೂಡಿಸಿತ್ತು. ರೆಡ್ಡಿ ಮಾತ್ರ ಏನೂ ಸಂಭವಿಸಿಯೇ ಇಲ್ಲವೆಂಬಂತೆ ಸಭೆಯಿಂದ ಮುಗುಳ್ನಗುತ್ತಲೇ ಹೊರ ನಡೆದು ಮಾನ ಉಳಿಸಿಕೊಳ್ಳಲು ಪ್ರಯತ್ನಿಸಿದರು.

ಈ ಹಿಂದೆ ಕೂಡ ಪದ್ಮಾವತಿ ಜಿ. ಯಾದವ್ ವಿಷಯದಲ್ಲಿ ಒಂದು ಸಾರಿ ಹಾಗೂ ರೆಡ್ಡಿಗಳ ಕುಟುಂಬದ ವೈಯಕ್ತಿಕ ವಿಷಯದಲ್ಲಿ ಮತ್ತೊಂದು ಸಾರಿ ಇದೇ ರಾಮಲಿಂಗಪ್ಪ ರೆಡ್ಡಿ ಸಹೋದರರಿಂದ ಚೆನ್ನಾಗಿಯೇ ಮಂಗಳಾರತಿ ಎತ್ತಿಸಿಕೊಂಡಿದ್ದರು. ಆದರೆ, ನಂತರದ ದಿನಗಳಲ್ಲಿ ಮತ್ತೆ ಮುಖಕ್ಕೆ ಪೌಡರ್ ಹಚ್ಚಿಕೊಂಡು ತನಗೇನೂ ಆಗಿಲ್ಲವೆಂಬಂತೆ ಪೋಜು ಕೊಟ್ಟಿದ್ದರು. ಈಗ ತುಂಬಿದ ಸಭೆಯಲ್ಲೇ ಅದನ್ನೆಲ್ಲಾ ಬಡ್ಡಿ ಸಮೇತವಾಗಿ ತೀರಿಸಿಕೊಂಡಿದ್ದಾರೆ. ಆದರೆ, ಅದು ಅವರಿಗೆ ಸಿಕ್ಕ ವಿಜಯವಲ್ಲ. ಅದು ಅವರ ರಾಜಕೀಯ ಅವಸಾನದ ಆರಂಭ. ●

ಅದೆಷ್ಟು ಜನರಿಗೆ ಟಿಕೆಟ್?


ಜಿಲ್ಲಾ, ತಾಲೂಕು, ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಜಿ. ಜನಾರ್ದನರೆಡ್ಡಿ ಕಣ್ಣಿಗೆ ಬಿದ್ದ ಪ್ರತೀ ಲೀಡರ್‌ಗೂ "ವಿಧಾನಪರಿಷತ್‌ಗೆ ನಾಮಕರಣ ಮಾಡಿಸುತ್ತೇನೆ, ಇಲ್ಲವೇ ಚುನಾವಣೆಯಲ್ಲಿ ನಿಲ್ಲಿಸಿ ಗೆಲ್ಲಿಸುತ್ತೇನೆ, ಇಲ್ಲಾ ಪಕ್ಷದ ಜಿಲ್ಲಾ - ರಾಜ್ಯ ಘಟಕಗಳಲ್ಲಿ ಉನ್ನತ ಹುದ್ದೆಗಳನ್ನು ಕೊಡಿಸುತ್ತೇನೆ'' ಎಂದೆಲ್ಲಾ ಬಾಯಿಗೆ ಬಂದಂತೆ ವಾಗ್ದಾನ ನೀಡಿ ಎಲ್ಲರಿಗೂ ಮರ ಹತ್ತಿಸುತ್ತಿದ್ದಾರೆ. ಈಗ, ಕಾಂಗ್ರೆಸ್‌ನ ಕೆ.ಎಸ್.ಎಲ್. ಸ್ವಾಮಿ ಅವರ ಅವಧಿ ಸೇರಿ ಪರಿಷತ್‌ನ 25 ಸದಸ್ಯರ ಅವಧಿ ಡಿಸೆಂಬರ್‌ನಲ್ಲಿ ಕೊನೆ ಆಗಲಿದೆ. ಸ್ಥಳೀಯ ಸಂಸ್ಥೆಗಳಿಂದ ನಡೆಯುವ ಕೆ.ಎಸ್.ಎಲ್. ಸ್ವಾಮಿ ಅವರ ಸ್ಥಾನಕ್ಕೆ ಈ ಬಾರಿ ಬಿಜೆಪಿ ನಿರಾಯಾಸವಾಗಿ ಗೆಲುವು ಸಾಧಿಸಲಿದೆ. ಈ ಹಿನ್ನಲೆಯಲ್ಲಿ ಎಮ್ಮೆಲ್ಸಿ ಟಿಕೆಟ್‌ಗಾಗಿ ಕನಸು ಕಾಣುತ್ತಿದ್ದವರು ಕ್ಯೂನಲ್ಲಿ ನಿಂತು ಚಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ.

ಕೇಂದ್ರದ ಮಾಜಿ ಸಚಿವೆ, ದಿವಂಗತ ಬಸವರಾಜೇಶ್ವರಿ ಅವರ ಪುತ್ರ ಡಾ. ವೆಂಕಟ ಮಹಿಪಾಲ್, ಅಲ್ಲಂ ಕುಟುಂಬದ ಸದಸ್ಯ ಹಾಗೂ ಸ್ವಯಂಘೋಷಿತ ಲೀಡರ್ ಅಲ್ಲಂ ಚನ್ನಪ್ಪ, ಕಾಂಗ್ರೆಸ್‌ನಿಂದ ಬಿಜೆಪಿಗೆ ಹಾರಲು ತುದಿಗಾಲಲ್ಲಿ ನಿಂತಿರುವ ಕೆ.ಎಸ್.ಎಲ್. ಸ್ವಾಮಿ, ಮಾಜಿ ಶಾಸಕ ಹಾಗೂ ಪ್ರವಾಸೋದ್ಯಮ ಪ್ರಾಧಿಕಾರದ ಅಧ್ಯಕ್ಷ ಎಂ. ಸಿರಾಜ್‌ಶೇಖ್, ಕೊಟ್ಟೂರಿನ ಎಂಎಂಜೆ ಕುಟುಂಬದ ಓರ್ವ ಸದಸ್ಯ, ಹೂವಿನಹಡಗಲಿಯ 10ಕ್ಕೂ ಹೆಚ್ಚಿನ ಸಂಖ್ಯೆಯ ಕನಸುಗಾರರು, ಜಿಲ್ಲಾ ಪಂಚಾಯತಿಯ ನೂತನ ಅಧ್ಯಕ್ಷ ಎನ್. ರುದ್ರಗೌಡ, ಜಿಲ್ಲಾ ಪಂಚಾಯತಿಯ ಮಾಜಿ ಉಪಾಧ್ಯಕ್ಷ ಕೆ.ಎ. ರಾಮಲಿಂಗಪ್ಪ, ಪದ್ಮಾವತಿ ಜಿ.ಯಾದವ್, ಹಂಪಿ ರಮಣ, ಮಾಜಿ ಶಾಸಕ ಬಿ. ಶಿವರಾಮರೆಡ್ಡಿ, ಭೋವಿ ಜನಾಂಗದ ರಾಮಚಂದ್ರಯ್ಯ ಸೇರಿದಂತೆ ನೂರಕ್ಕೂ ಹೆಚ್ಚಿನ ನಾಯಕರು ಎಮ್ಮೆಲ್ಸಿಯ ಕನಸು ಕಾಣುತ್ತಾ ಕ್ಯೂನಲ್ಲಿ ನಿಂತಿರುವ ಪ್ರಮುಖರು. ಕಂಡಕಂಡವರಿಗೆಲ್ಲಾ 'ನಿಮ್ಮನ್ನು ಎಮ್ಮೆಲ್ಸಿ ಮಾಡ್ತೇನೆ' ಎಂದು ಭರವಸೆ ಕೊಟ್ಟಿರುವ



ಜನಾರ್ದನರೆಡ್ಡಿ

ಜನಾರ್ದನ ರೆಡ್ಡಿಗೀಗ ಈ ಹಿಂದಿನಲ್ಲಿ ಯಾರನ್ನು ಎಮ್ಮೆಲ್ಸಿ ಮಾಡಬೇಕು ಎಂಬುದೇ ಒಂದು ಫಜೀತಿಯಾಗಿದೆ. ಸಂಸದೆ ಜೆ. ಶಾಂತಾ ಅವರನ್ನು ಏಕಾಏಕಿ ಜನರಿಗೆ ಪರಿಚಯಿಸಿದಂತೆ ತಮ್ಮ ಅಧೀನದಲ್ಲೇ ಇರುವ ರೆಡ್ಡಿ ಅಥವಾ ವಾಲ್ಮೀಕಿ ಜನಾಂಗದ ಯಾವುದಾದರೂ 'ಡಾರ್ಕ್‌ಹಾರ್ಸ್' ಅನ್ನು ಕೊನೆಗೆ ಅಭ್ಯರ್ಥಿಯನ್ನಾಗಿಸುತ್ತಾರೆ ಎಂಬ ರೂಮರ್ ಕೂಡ ಇದೆ. ವಿಕೇಂದ್ರಿತವಾಗಿ [illegible] ಜಿಲ್ಲೆಯಲ್ಲಿ ಬಿಜೆಪಿ ಈಗಾಗಲೇ ಬಿರುಕುಬಿಟ್ಟ ಮನೆ ಆಗಿದೆ. ಎಮ್ಮೆಲ್ಸಿ ಚುನಾವಣೆಯ ಹೊತ್ತಿಗೆ ಅದು ಇನ್ನಷ್ಟು ಛಿದ್ರವಾದರೂ ಆಶ್ಚರ್ಯವಿಲ್ಲ. ●



ಟಿವಿ ನಟ ಉಮೇಶ್ ಹೆಗಡೆಯ ದೇವರ ಚಿತ್ರ

ಉದಯ ಟಿವಿಯಲ್ಲಿ ಪ್ರತಿ ರಾತ್ರಿ ಒಂಭತ್ತಕ್ಕೆ ಪ್ರಸಾರವಾಗುವ ಮಾಂಗಲ್ಯ ಧಾರಾವಾಹಿಯನ್ನು ಯಾವ ಗೃಹಿಣಿ ತಾನೇ ನೋಡಿಲ್ಲ? ಅದರಲ್ಲಿ ಬರುವ ಜಗನ್ನಾಥರಾಯನೆಂಬ ಸದ್‌ಗೃಹಸ್ಥನ ಪಾತ್ರ ಕಂಡು ತಲೆದೂಗದಿರುವವರುಂಟೆ? ಇನ್ನು ಈ ಟಿವಿಯಲ್ಲಿ ಪ್ರತಿರಾತ್ರಿ ಪ್ರಸಾರವಾಗುವ ಟಿ.ಎನ್. ಸೀತಾರಾಮ್ ಅವರ 'ಮಾಡು ಸಿಕ್ಕದಲ್ಲ' ಎಂಬ ಪುಳಿಚಾರು ಸೀರಿಯಲ್ಲನ್ನು ನೋಡಿದವರ ಲೆಕ್ಕ ಇಟ್ಟವರ್‍ಯಾರು?

ಇಲ್ಲಿನ ಅಸಹ್ಯದ ಚಿತ್ರಗಳನ್ನೊಮ್ಮೆ ಗಮನವಿಟ್ಟು ನೋಡಿ. ನಡುವಯಸ್ಸಿನ ಪಕ್ಕಾ ಪೆಂಗನಂತೆ ಕಾಣುವ ಆಸಾಮಿಯೊಬ್ಬ ಅರೆಬೆತ್ತಲೆ ಹೆಂಗಸರೊಂದಿಗೆ ಕಾಮಕೇಳಿ ನಡೆಸುತ್ತಿದ್ದಾನೆ. ಈ ಪುಣ್ಯಾತ್ಮನ ಹೆಸರು ಉಮೇಶ್ ಹೆಗಡೆ.

ಈತ ಉದಯ ಟಿವಿಯ ಅತ್ಯಂತ ಜನಪ್ರಿಯ ಧಾರಾವಾಹಿಗಳಲ್ಲೊಂದಾದ 'ಮಾಂಗಲ್ಯ'ದ ಜಗನ್ನಾಥರಾಯನ ಪಾತ್ರಧಾರಿ. ಟಿ.ಎನ್. ಸೀತಾರಾಮ್ ಅವರ 'ಮಾಡು ಸಿಕ್ಕದಲ್ಲ' ಎಂಬ ಧಾರಾವಾಹಿಯಲ್ಲೂ ಈತನೇ ಪ್ರಮುಖ ನಟ. ದೂರದರ್ಶನದಲ್ಲಿ ಒಂದಾನೊಂದು ಕಾಲಕ್ಕೆ ಜನಪ್ರಿಯವಾಗಿದ್ದ 'ಮನೆತನ' ಎಂಬ ಮತ್ತೊಂದು ಧಾರಾವಾಹಿಯಲ್ಲಿ ಉಮೇಶ್ ಹೆಗಡೆ ಅಭಿನಯಿಸಿದ್ದ ರುದ್ರಪ್ಪನ ಪಾತ್ರ ಅದೆಷ್ಟು ಜನಪ್ರಿಯವಾಗಿತ್ತೆಂದರೆ; ಜನ ಹೆಗಡೆ ಎಂಬ ಹೆಸರನ್ನೇ ಮರೆತು ರುದ್ರಪ್ಪ ಎಂದು ಕರೆಯುವಂತಾಗಿತ್ತು. ಉಮೇಶ್ ಹೆಗಡೆಗೆ ಈಗ ಅಷ್ಟು ಅವಕಾಶಗಳು ಇಲ್ಲದೆ ಹೋದರೂ ಹಾಲಿ ಸ್ಟಾರ್‌ಗಳಾದ ಮಂಜುನಾಥ ಹೆಗ್ಡೆ, ರಮೇಶ್, ಅಚ್ಯುತ್‌ರಾವ್, ನಾರಾಯಣಸ್ವಾಮಿ, ಮಂಜುಭಾಷಿಣಿ ಮಟ್ಟದ ನಟನಂತೂ ಹೌದು.

ಉದಯ ಟಿವಿಯಲ್ಲಿ ಬರುತ್ತಿದ್ದ ಪಾರ್ವತಮ್ಮ ರಾಜ್‌ಕುಮಾರ್ ಬ್ಯಾನರಿನ 'ಮಹಾನದಿ'ಯಂಥ ಧಾರಾವಾಹಿಯಲ್ಲಿ ನಟಿಸುವುದು ಸಣ್ಣ ಮಾತೇನಲ್ಲ. ಅಂಥಾ ಟಿವಿ ನಟನೊಬ್ಬ ಇಂಥಾ ಕೊಳಕು ದೃಶ್ಯಗಳಲ್ಲಿ ನಟಿಸುತ್ತಾನೆಂದರೆ ಏನರ್ಥ?

ಒಂದೇ ಮಾತಲ್ಲಿ ಹೇಳಬೇಕೆಂದರೆ ಇದೊಂದು ಪಕ್ಕಾ ಬ್ಲೂಫಿಲ್ಮ್. ಕೆಲ ಚಿತ್ರಗಳಲ್ಲಿ ಉಮೇಶ್ ಹೆಗಡೆ ಒಂದಲ್ಲ ಐವರು ಅರೆಬೆತ್ತಲೆ ಹೆಂಗಸರೊಂದಿಗೆ ಲಲ್ಲೆಗರೆಯುತ್ತಿದ್ದಾನೆ. ಇನ್ನೂ ಕೆಲವದರಲ್ಲಿ ಒಬ್ಬಳೇ ಹೆಂಗಸನ್ನು ರಮಿಸುತ್ತಿದ್ದಾನೆ. ಯಾವೊಬ್ಬ ಹೆಂಗಸಿಗೂ ಮೇಲುಗಡಿಗೆಯಿಲ್ಲ. ಒಳಉಡುಗೆ ಬಿಟ್ಟರೆ ಉಮೇಶ್ ಹೆಗಡೆಗಾಗಲಿ, ಆತನನ್ನು ಸುತ್ತುವರಿದ ಕನ್ಯಾಮಣಿಯರಿಗಾಗಲಿ 'ವಸ್ತ್ರ' ಎಂಬುದು ಇಲ್ಲವೇ ಇಲ್ಲ. ಚಿತ್ರದ ಧಾಟಿ, ನಟರ ರೀತಿ ಎಲ್ಲವೂ ಬ್ಲೂಫಿಲ್ಮ್‌ಗಾಗಿಯೇ ಚಿತ್ರೀಕರಿಸಿದ ಸ್ಪೆಷಲ್ ಕ್ಯಾಟಗರಿಯ ದೃಶ್ಯಾವಳಿಯಲ್ಲದೇ ಮತ್ತೇನೂ ಅಲ್ಲ.

ಮುಖಭಾವ ಕೂಡ ತಮ್ಮ ಪಾಪಕ್ಕೆ ಪಶ್ಚಾತ್ತಾಪ ಪಟ್ಟಂತೆಯೇ ಇದೆ. ಹೊಟ್ಟೆಪಾಡಿಗಾಗಿ ಬೆತ್ತಲಾದ ನೃತದೃಷ್ಟ ಕನ್ನಿಕೆಯರ ಮಧ್ಯೆ ಟಿವಿ ನಟ ಉಮೇಶ್ ಹೆಗಡೆಗೆ ಬೆತ್ತಲಾಗುವಂಥ ಹರಕತ್ತಾದರೂ ಏನಿತ್ತು? ಇದು ಸೊಕ್ಕಾ? ಮಸ್ತಿಯಾ? ಅಥವಾ ದುಡ್ಡಿನ ದುರಾಶೆಯಾ?

ಉಮೇಶ್ ಹೆಗಡೆ ಕನ್ನಡದ ವಿವಿಧ ಟಿವಿ ಚಾನಲ್ಲುಗಳ ಸರಿಸುಮಾರು ಐವತ್ತಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ನಟಿಸಿದ ಪ್ರಮುಖ ಕಲಾವಿದ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಶಿರ್ಶಿ ತಾಲ್ಲೂಕಿನ ಅಂಶಿಮನೆ ಗ್ರಾಮದ ಈತ ತಾನು ಬಿಜೆಪಿ ಸರ್ಕಾರದ ಪ್ರಾಥಮಿಕ ಶಿಕ್ಷಣ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯ ಸಂಬಂಧಿ ಎಂದೇ ಹೇಳಿಕೊಳ್ಳುತ್ತಾನೆ. ಈತನ ತಂದೆ ಕೃಷ್ಣಪ್ಪ ಹೆಗಡೆ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯ ತಮ್ಮ ಗಣೇಶ್ ಹೆಗಡೆಗೆ ಆತ್ಮೀಯರಂತೆ. ವಿದ್ಯಾವಂತ. ಈತನ ಪತ್ನಿ ಸುಧಾ ಹೆಗಡೆ ಕೂಡ ಮನೆತನ, ಎಸ್. ನಾರಾಯಣರ ಸೂರ್ಯವಂಶ, ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣದ ಅತ್ತಿಗೆ, ಕಲ್ಯಾಣ ರೇಖೆ, ಸಪ್ತಪದಿ ಮುಂತಾದ ಜನಪ್ರಿಯ ಧಾರಾವಾಹಿಗಳಲ್ಲಿ ನಟಿಸಿದ್ದಾಳೆ. ರಾಘವೇಶ್ವರ ಭಾರತಿ ಸ್ವಾಮಿಯ ಪರಮಾಪ್ತೆ ಗಿರಿಜಾ ಹೆಗಡೆ ಈಕೆಯ ತಂಗಿಯಂತೆ.

ತಮಾಷೆಯೆಂದರೆ ರಾಮಚಂದ್ರಾಪುರದ ಮಠಾಧೀಪತಿ ರಾಘವೇಶ್ವರ ಭಾರತಿಗೂ ತಾನು ಸಮೀಪದ ಸಂಬಂಧಿ ಎಂದು ಉಮೇಶ್ ಹೆಗಡೆ ಹೇಳಿಕೊಂಡಿದ್ದಾನೆ. ಎಲ್ಲಾ ಓಕೆ. ಆದರೆ ಹೊಲಸು ತಿನ್ನುವಾಗ ಉಮೇಶ್ ಹೆಗಡೆಗೆ ಅದ್ಯಾವುದೂ ನೆನಪಾಗಲಿಲ್ಲ ಯಾಕೆ? ಹಿಂದೆ ಕಾಮಿಡಿ ನಟ ಬರಾದಾರ್ ಕೂಡ ಇದೇ ಕನಿಷ್ಠ ವಸ್ತ್ರಧಾರಿಣಿಯರ ಜೊತೆ ಇಂಥದ್ದೇ ದೃಶ್ಯಾವಳಿಗಳಲ್ಲಿ ನಟಿಸಿದ್ದ. ಈಗ ಉಮೇಶ್ ಹೆಗಡೆ ಕೂಡ ಅದೇ ನಟಿಯರ ಜೊತೆ ಅಂಥದ್ದೇ ದೃಶ್ಯಗಳಲ್ಲಿ ಪೋಜು ಕೊಡುತ್ತಿದ್ದಾನೆ. ಇದರರ್ಥ ಅವತ್ತು ಬರಾದಾರ್ ಬೆತ್ತಲೆಯಾದ ರೇಟಿಗೆ ಉಮೇಶ್ ಹೆಗಡೆ ಮೈ ಒಪ್ಪಿಸಿದ್ದಾನೆ. ಬಹುಶಃ ಹಿಂದಿದ್ದ ಹಿಮಾಲಯ, ಕೆಂಪೇಗೌಡ ಥೇಟರುಗಳಲ್ಲಿ ಯಾವುದೋ ಚಿತ್ರ ಹಾಕಿ ಮಧ್ಯೆ ಈ ಥರದ ಬ್ಲೂಫಿಲ್ಮ್ ತೋರಿಸುತ್ತಿದ್ದರಲ್ಲ; ಅಂಥ ಸೆಕ್ಸ್ ಚಿತ್ರಗಳ ಸೃಷ್ಟಿಕರ್ತರೇ ಉಮೇಶ್ ಹೆಗಡೆಯಂಥ ಟಿವಿ ನಟನನ್ನು ಬಳಸಿಕೊಂಡಿದ್ದಾರೆ.

ಸದ್ಯ ಗಾಂಧಿನಗರದ ಚಿತ್ರಬ್ರಹ್ಮರೇ ಹೇಳುವಂತೆ ಈ ಥರದ ಸೆಕ್ಸ್ ಚಿತ್ರಗಳನ್ನು ನಿರ್ಮಿಸಿ ಕರ್ನಾಟಕದ ಗ್ರಾಮಾಂತರ ಭಾಗದ ಸಿನಿಮಾ ಟೆಂಟುಗಳಿಗೆಂದೇ ಮಾರುವ ಖದೀಮರ ತಂಡವೊಂದು ಚೆನ್ನೈನಲ್ಲಿದೆ. ಸಿನಿಮಾಗಳಲ್ಲಿ ಅಷ್ಟಿಷ್ಟು ಹೆಸರು ಮಾಡಿದ ಮೀಡಿಯಂ ಕಲಾವಿದರು, ಟಿವಿ ಧಾರಾವಾಹಿಗಳಲ್ಲಿ ಹೆಸರು ಮಾಡಿದ ನಟ-ನಟಿಯರ ಕೈಗಿಷ್ಟು ದುಡ್ಡು ಕೊಟ್ಟು ಇಂಥ ದೃಶ್ಯಗಳನ್ನು ಚಿತ್ರೀಕರಿಸುತ್ತಾರೆ. ಅದಕ್ಕೆಂದೇ ಮೈಕಸುಬು ಕೇಂದ್ರಗಳ ಹುಡುಗಿಯರನ್ನು ಕರೆಸುತ್ತಾರೆ. ನಗರದ ಹೊರವಲಯದ ಲಾಡ್ಜುಗಳಲ್ಲೋ, ಫಾರ್ಮ್ ಹೌಸುಗಳಲ್ಲೋ ಚಿತ್ರೀಕರಣವಿರುತ್ತದೆ. ಚಿತ್ರೀಕರಣಕ್ಕೂ ಮುನ್ನ ಕರೆಸಿದ ಹೆಂಗಸರಿಗೆ ವಿಸ್ಕಿ ಕುಡಿಸುತ್ತಾರೆ. ಇನ್ನು ಹೀರೋ ಮೈಚಳಿ ಬಿಟ್ಟು ನಟಿಸಬೇಕಲ್ಲ; ಆತನಿಗೂ ಕಂಠಮಟ್ಟ ಕುಡಿಸುತ್ತಾರೆ. ಹೀಗೆ ಸೃಷ್ಟಿಯಾದ ತುಣುಕು ಸೆಕ್ಸ್ ಚಿತ್ರಗಳನ್ನು ಗಾಂಧಿನಗರದ ಜನ ಕರೆಯುವುದು ಬಿಟ್ಸ್ ಅಥವಾ ಬಿಟ್ಟುಗಳು ಎಂದು.

ಇಂಥ ಸೆಕ್ಸ್ ಬಿಟ್ಟುಗಳನ್ನು ಗ್ರಾಮಾಂತರದ ಕೊಳಕಲು ಟೆಂಟುಗಳಿಗೆ ಹಂಚುವ ಅನಾಹುತಕಾರಿ ಜಾಲವೊಂದು ಗಾಂಧಿನಗರದ 'ಇಂದ್ರ ಮಹಲ್' ಲಾಡ್ಜಿನಲ್ಲಿ ಅಡ್ಡೆ ಹಾಕುತ್ತದೆ. ಈ ಪೈಕಿ ನಟೋರಿಯಸ್‌ಗಳೆಂದರೆ ಕಲಾಸಿಪಾಳ್ಯದ ಚೆನ್ನೆ ಆರ್ಮುಗಮ್, ಈಶ್ವರಪ್ಪ ಎಸ್ಟೆಸ್ಸಿ ರಮೇಶ, ಜಗ್ಗೇಶ್ ಶಿಷ್ಯ ವೆಂಕಟೇಶ, ಮುನಿರತ್ನಂ, ರಫೀಕ್ ಮತ್ತು ವಿಜಯನಗರದ ಗೌಡ. ಇವರ ಮೂಲಕವೇ ಸೆಕ್ಸ್ ಬಿಟ್ಟುಗಳು ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳ ಟೆಂಟುಗಳಿಗೆ, ತಾಲ್ಲೂಕು ಕೇಂದ್ರದ ಟಾಕೀಸುಗಳಿಗೆ ರವಾನೆಯಾಗುತ್ತವೆ. ಈ ಹಿಂದೆ ಬೆಂಗಳೂರಿನ ಕೆಂಪೇಗೌಡ ಟಾಕೀಸಿನಲ್ಲಿ ಪ್ರೇಮದ ಕಾರಂಜಿ, ದೇವಾಲಯ, ಡಾಕ್ಟರ್ ದೇವೋಭವ, ಏನಿದು? ಇತ್ಯಾದಿ ವಿಚಿತ್ರ ಹೆಸರಿನ 'ದೇವರ ಚಿತ್ರಗಳು' ಸತತ 25 ವಾರಗಳ ಕಾಲ ಪ್ರದರ್ಶನ ಕಂಡಿತ್ತೆಂದರೆ, ಅದರ ಮೂಲ ಪುರುಷರು ಇಂಥ 'ಸೆಕ್ಸ್‌ಬಿಟ್ ' ಸೃಷ್ಟಿಕರ್ತರೆ. ಆಯಾ ಪೊಲೀಸ್ ಠಾಣೆಗಳಿಗೆ ಮೊದಲೇ ಮಾಮೂಲಿ ಫಿಕ್ಸಾಗಿರುತ್ತದೆ.

ದುಬಾರಿಯಲ್ಲದ ಆರ್ಥಿಕವಾಗಿ ಸಂಕಷ್ಟದಲ್ಲಿರುವ, ಅಷ್ಟಿಷ್ಟು ಜನಪ್ರಿಯತೆ ಗಳಿಸಿದ ಮೀಡಿಯಂ ರೇಂಜಿನ ನಟರನ್ನೇ ಸೆಕ್ಸ್ ಬಿಟ್ ಖದೀಮರು ಹುಡುಕುತ್ತಿರುತ್ತಾರೆ. ಬಹಳಷ್ಟು ಇಂಥ ಹೊಲಸು ಕೆಲಸಕ್ಕೆ ಕೈಹಾಕುವುದಿಲ್ಲ. ಇಂಥವರಿಗೆ ಅದರ ಅಗತ್ಯ ಕೂಡ ಇಲ್ಲ. ಆದರೆ ಉಮೇಶ್ ಹೆಗಡೆಯಂಥ ದುರಾಶೆಯ ನಟನಿಗೆ ಅದೇನು ರೋಗ ಬಂದಿತ್ತೋ?


ಚಪಲಕ್ಕೋ ಸೊಕ್ಕಿಗೋ ದುಡ್ಡಿಗೋ ತಲೆ ಕೊಟ್ಟು ಹೆಗಡೆ ಬೆತ್ತಲಾಗಿದ್ದಾನೆ. ವಿಕಟವೆಂದರೆ ಉಮೇಶ್ ಹೆಗಡೆಯನ್ನು ಟೀವಿ ಲೋಕವಾಗಲಿ, ಸಿನಿಮಾ ರಂಗವಾಗಲಿ ಯಾವತ್ತೂ ಹಸಿವಿಗೆ ನೂಕಿಲ್ಲ. ಮಾಂಗಲ್ಯದಂಥ ಮೆಗಾ ಸೀರಿಯಲ್ಲಿತ್ತು, ಕುಂಕುಮ ಭಾಗ್ಯ, ಕಲ್ಯಾಣ ರೇಖೆ, ದೂರದರ್ಶನದಲ್ಲಿ ಬರುತ್ತಿದ್ದ ದೊಡ್ಡಕಳ್ಳ ಇತ್ಯಾದಿ ಧಾರಾವಾಹಿಗಳಲ್ಲೇ ಬಿಡುವಿಲ್ಲದಷ್ಟು ಅವಕಾಶವಿತ್ತು. ಸಾಲದ್ದಕ್ಕೆ ಸಿನಿಮಾಗಳಲ್ಲೂ ಹೆಗಡೆಗೆ ಸಾಕಷ್ಟು ಬೇಡಿಕೆಯಿತ್ತು. ವಿಷ್ಣುವರ್ಧನ್ ಜೊತೆ ಭೂತಯ್ಯನ ಮಗ ಅಯ್ಯು, ನೀ ಬರೆದ ಕಾದಂಬರಿ, ಮೆಗಾಸಿಟಿ ಯೋಗೇಶ್ ಜೊತೆ ಉತ್ತರಧ್ರುವದಿಂ ದಕ್ಷಿಣ ಧ್ರುವಕು, ಶಿವಣ್ಣನ ಜೊತೆ ಎಕೆ 47, ಸಿಂಹದ ಮರಿ, ಪುಟ್ಟಣ್ಣ ಕಣಗಾಲರ ಧರಣಿ ಮಂಡಲ ಮಧ್ಯದೊಳಗೆ ಇತ್ಯಾದಿ ಅನೇಕ ಚಿತ್ರಗಳಲ್ಲಿ ಉಮೇಶ್ ಹೆಗಡೆಗೆ ಗಣನೀಯ ಪಾತ್ರವಿತ್ತು. ಹೀಗಿದ್ದೂ ಉಮೇಶ್ ಹೆಗಡೆ ಸೆಕ್ಸ್ ಚಿತ್ರಗಳಲ್ಲಿ ನಟಿಸುತ್ತಾನೆಂದರೆ ಅದು ಮುಕಳಿ ಸೊಕ್ಕಲ್ಲದೇ ಮತ್ತೇನು?

ಥೇ ಥೇ.... ಏನೂ ಕೇದೋ; ಯಾವ ಕರ್ಮವೋ?

● ರಾ. ಸೋ.











ನನ್ನ ಆಕ್ಟಿಂಗ್ ನೋಡೇ ರಾಜ್ ಸಂಪತ್ತಿಗೆ ಸವಾಲ್ ಮಾಡಿದ್ದು!

ಊರಿಗೆ ಉಪದೇಶ ಕೊಟ್ಟು ಒಲೆಯೊಳಗೆ ಉಚ್ಚೆ ಹೊಯ್ದಂತೆ ಮಾತು ಮಾತಿಗೆ 'ವರನಟ ರಾಜ್‌ಕುಮಾರ್ ನನ್ನ ಆಕ್ಟಿಂಗ್ ನೋಡಿಯೇ ಸಂಪತ್ತಿಗೆ ಸವಾಲ್ ಚಿತ್ರ ಮಾಡಿದ್ದು' ಎನ್ನುತ್ತಾನೆ ಉಮೇಶ್ ಹೆಗಡೆ.

ಗೋಕಾಕ್ ಕಂಪೆನಿಯೆಂದೇ ಹೆಸರಾದ ಶಾರದಾ ಸಂಗೀತ ನಾಟಕ ಮಂಡಳಿ ಅದ್ಯಾವತ್ತೋ ಕನಕಪುರದಲ್ಲಿ ಕ್ಯಾಂಪ್ ಹಾಕಿತ್ತಂತೆ. ಅದರ ಪ್ರಮುಖ ಆಕರ್ಷಣೆಯಾಗಿದ್ದ ಸಂಪತ್ತಿಗೆ ಸವಾಲ್ ನಾಟಕದಲ್ಲಿ ಹೆಗಡೆಗೆ ಹೀರೋ ಅಣ್ಣನ ಪಾತ್ರವಿತ್ತಂತೆ. ಅವತ್ತು ಕನಕಪುರಕ್ಕೆ ಶೂಟಿಂಗಿಗೆಂದು ಬಂದಿದ್ದ ರಾಜ್‌ಕುಮಾರ್ ನಾಟಕದಲ್ಲಿ ಉಮೇಶ್ ಹೆಗಡೆಯ ಆಕ್ಟಿಂಗ್ ಕಂಡಿದ್ದೇ ಸುಸ್ತು ಹೊಡೆದರಂತೆ. ಅವತ್ತೇ ಸಂಪತ್ತಿಗೆ ಸವಾಲ್ ಚಿತ್ರ ಮಾಡೇ ಮಾಡ್ತೀನಿ ಎಂದು ಉಮೇಶ್ ಹೆಗಡೆಗೆ ಮಾತು ಕೊಟ್ಟರಂತೆ!

ಇದು ಹೆಗಡೆ ಹೇಳುವ ಕತೆ. ಧೀರೇಂದ್ರ, ಗೋಪಾಲ್, ಸುಧೀರ್, ಸುಂದರ ಕೃಷ್ಣ ಅರಸು ಮುಂತಾದವರೆಲ್ಲ ಈತನ ಜೊತೆ ನಾಟಕ ಆಡಿಕೊಂಡಿದ್ದರಂತೆ. ಓಕೆ; ಅಷ್ಟೆಲ್ಲಾ ದೊಡ್ಡಸ್ತಿಕೆಯಿದ್ದ ಮೇಲೆ ಹೆಗಡೆ ಇಂಥ ಕೆಲಸಕ್ಕೇಕೆ ಕೈಹಾಕುತ್ತಿದ್ದ? ಇವನ್ನು ಹುಚ್ಚನ್ನಬೇಕಾ ಪೆಚ್ಚನ್ನಬೇಕಾ?



ಬಳ್ಳಾರಿ ಕಾಡಿಗೆ ಕನ್ನ

ಅರಣ್ಯಚೋರ ಎಮ್ಮೆಲ್ಲೇ ಆನಂದ್ ಸಿಂಗ್

ಗಣಿರೆಡ್ಡಿಗಳ ಶನಿ ಸಂತಾನವಾದ ಎಮ್ಮೆಲ್ಲೇ ಆನಂದ್‌ಸಿಂಗ್‌ನ ಜನೋಪಕಾರಕ್ಕೊಂದು ಕರಾಳಮುಖವಿದೆ. ಅದು ಸರ್ಕಾರಿ ಅರಣ್ಯದ ಹಗಲು ದರೋಡೆ. ಗಣಿ ರೆಡ್ಡಿಗಳ ಹೀನಚಾಳಿಯನ್ನೇ ಅನುಕರಿಸುತ್ತಾ ಅದಿರು ಲೂಟಿಗಿಳಿದವನು ಆನಂದ್‌ಸಿಂಗ್. ಹೆಲಿಕಾಪ್ಟರಿನಲ್ಲಿ ಹಾರಾಟ, ಸಿನಿಮಾ ಶೋಕಿ, ಮಾಡೆಲ್‌ಗಳ ಖಯಾಲಿ, ರಿಯಲ್ ಎಸ್ಟೇಟ್ ದುರಾಶೆ ಇತ್ಯಾದಿಗಳೆಲ್ಲವನ್ನೂ ಒಟ್ಟೊಟ್ಟಿಗೇ ಮೈಗೂಡಿಸಿಕೊಂಡ ಆನಂದ್‌ಸಿಂಗ್ ಈಗ ತಾನೊಬ್ಬ ಶಾಸಕ ಎಂಬುದನ್ನೇ ಮರೆತು ಬಳ್ಳಾರಿ ರಕ್ಷಿತ ಅರಣ್ಯಕ್ಕೆ ಕನ್ನ ಹಾಕಿದ್ದಾನೆ.

ಯಾರೋ ಕಳ್ಳನೊಬ್ಬ ಪ್ರತಿ ರಾತ್ರಿ ಕಳ್ಳತನಕ್ಕೆ ಹೋಗಿ ...ಗಲಾಯಿತೆಂದರೆ ಬಡಬಗ್ಗರಿಗೆ ದಾನ ಕೊಡುತ್ತಿದ್ದನಂತೆ. ...ನೆಗೊಮ್ಮೆ ಆತ ಸಿಕ್ಕಿಬಿದ್ದಾಗಲೇ ಆತನು ಕೊಡುತ್ತಿದ್ದ ...ನವೆಲ್ಲ ಕದ್ದ ಮಾಲೆಂದು ಜನಕ್ಕೆ ಗೊತ್ತಾಗಿದ್ದು! ...ಥದೊಂದು ಓಬಿರಾಯನ ಕಾಲದ ...ನಪದ ಕತೆಯನ್ನು ಅಕ್ಷರಶಃ ಪಾಲಿಸು ...ವವನು ಹೊಸಪೇಟೆಯ ಬಿಜೆಪಿ ಶಾಸಕ ...ನಂದ್ ಸಿಂಗ್!



ಯಡ್ಡಿ

ಒಂದೆಡೆ ರಕ್ಷಿತ ಅರಣ್ಯಕ್ಕೆ ಕನ್ನ ಹಾಕುವುದು ...ತ್ತೊಂದೆಡೆ ಹೊಸಪೇಟೆಯಲ್ಲಿ ಯಾರೇ ... ರೋಗಿಯಿದ್ದರೆ ಆತನ ಚಿಕಿತ್ಸೆಗೆ ...ಕ್ಷವನ್ನೋ ಒಂದೂವರೆ ಲಕ್ಷವನ್ನೋ ...ದುರ್ಮಾರ್ಥ ಕೊಟ್ಟು ಪೋಜು ಕೊಡು ...ತು. ಸದ್ಯ ಹೊಸಪೇಟೆಯಲ್ಲಿ ಯಾರಿಗೇ ...ರ್ಟ್ ಆಪರೇಷನ್ ಎಂದರೂ ಆನಂದ್‌ಸಿಂಗ್ ದುಡ್ಡು ...ಡುತ್ತಾರೆ. ಮೊನ್ನೆಯಷ್ಟೇ ಮುಸ್ಲಿಮರ ರಂಜಾನ್ ಹಬ್ಬ ...ತಲ್ಲ; ತಿಂಗಳು ಪೂರ್ತಿ ಮಸೀದಿಗಳ ಮುಂದೆ ...ನಂದ್‌ಸಿಂಗ್ ಪಟಾಲಮ್ಮು ಬಿರಿಯಾನಿ ಬಡಿಸಿದ್ದೇ ...ಡಿಸಿದ್ದು-



ಜನಾರ್ದನ ರೆಡ್ಡಿ

ಗಣಿರೆಡ್ಡಿಗಳ ಶನಿ ಸಂತಾನವಾದ ...ಮ್ಮೆಲ್ಲೇ ಆನಂದ್‌ಸಿಂಗ್‌ನ ಇಂಥ ಜನೋಪ ...ಕ್ಕೊಂದು ಕರಾಳಮುಖವಿದೆ. ಅದು ...ರ್ಕಾರಿ ಅರಣ್ಯದ ಹಗಲು ದರೋಡೆ. ಗಣಿ ...ಗಳ ಹೀನಚಾಳಿಯನ್ನೇ ಅನುಕರಿಸುತ್ತಾ ...ದಿರು ಲೂಟಿಗಿಳಿದವನು ಆನಂದ್‌ಸಿಂಗ್. ...ಬಾಜಿ ಮೈನಿಂಗ್ ಕಂಪೆನಿ ಮತ್ತು ...ವಿಕೆ ಗ್ರೂಪ್ ಹೆಸರಲ್ಲಿ ಸಂಡೂರು ...ಸುತ್ತಲ ಅರಣ್ಯ ಭೂಮಿಯಲ್ಲಿ ಅದಿರು ದೋಚಿಯೇ ...ಬೇರನಾದ ಆನಂದ್‌ಸಿಂಗ್ ಇಂಥ ಪಾಪದ ದುಡ್ಡು ...ಂದೇ ಗವಿಯಪ್ಪನನ್ನು ಸೋಲಿಸಿ ಹೊಸಪೇಟೆಗೆ ...ಮ್ಮೆಲ್ಲೇಯಾದ. ದೋಚಿದ ಅದಿರಿನ ದುಡ್ಡನ್ನೇ ಎಣಿಸಲು ...ಮಿಲ್ಲ, ಹೆಲಿಕಾಪ್ಟರಿನಲ್ಲಿ ಹಾರಾಟ, ಸಿನಿಮಾ ಶೋಕಿ, ...ಡೆಲ್‌ಗಳ ಖಯಾಲಿ, ರಿಯಲ್ ಎಸ್ಟೇಟ್ ದುರಾಶೆ ...ತ್ಯಾದಿಗಳೆಲ್ಲವನ್ನೂ ಒಟ್ಟೊಟ್ಟಿಗೇ ...ಗೂಡಿಸಿಕೊಂಡ ಆನಂದ್‌ಸಿಂಗ್ ಈಗ ...ನೊಬ್ಬ ಶಾಸಕ ಎಂಬುದನ್ನೇ ಮರೆತು ...ಳ್ಳಾರಿ ರಕ್ಷಿತ ಅರಣ್ಯಕ್ಕೆ ಕನ್ನ ಹಾಕಿದ್ದಾನೆ.



ಅದೂ ಮಹಾನ್ ಗಣಿಕಳ್ಳ ಜನಾರ್ದನ ...ಯ ಜೊತೆಜೊತೆಗೇ ಕಾಡುಗಳ್ಳತನಕ್ಕೆ ...ಳಿಟ್ಟಿದ್ದಾನೆ!

ಬಳ್ಳಾರಿ ರಕ್ಷಿತ ಅರಣ್ಯದ ವಿಠಲಾಪುರ ...ರ್ನಾಟಕ ಮತ್ತು ಆಂಧ್ರದ ಗಡಿಯ ...ಕಡೆಯ ಗ್ರಾಮ. ಇದರ ಸರ್ವೆ ನಂ. 1 ರಲ್ಲಿ ...ಷ್ಕಳ ಅದಿರು ಸಂಗ್ರಹವಿರುವುದನ್ನು ಮೊದಲು ...ಪತ್ತೆಹಚ್ಚಿದವನು ನಾಮಾ ರತ್ನಯ್ಯ ಶೆಟ್ಟಿ ಎಂಬ ಬಳ್ಳಾರಿಯ ...ಯ ಕೋಮಟಿ. ಈಗ ಆನಂದ್‌ಸಿಂಗ್ ಮತ್ತು ...ನಾರ್ದನ ರೆಡ್ಡಿ ಸೇರಿ ಅರಣ್ಯ ಲೂಟಿಗಿಳಿದಿರುವುದು ...ಲೇ ರತ್ನಯ್ಯ ಶೆಟ್ಟಿಯ ಮೂಲಕ. ಈ ಎನ್. ರತ್ನಯ್ಯ ... ಹೇಳಿಕೇಳಿ ಹಳೇ ಅದಿರುಕಳ್ಳ. ಯಾರ್‍ಯಾರಿಗೋ ...ದು ಹಾಕಿಯೇ ಕುಬೇರನಾದ ನಾಮಾ ರತ್ನಯ್ಯ ಶೆಟ್ಟಿ ...ಗೆ ವಿಠಲಾಪುರದ ಸರ್ವೆ ನಂ. 1 ರಲ್ಲಿ ಗಣಿಗಾರಿಕೆಗೆ ...ರ್ಕಾರ ಲೈಸೆನ್ಸ್ ಕೊಟ್ಟಿದೆ ಎನ್ನುತ್ತಾನೆ. ದಾಖಲೆಗಳ ...ನ್ನ್ ಪ್ರತಿಯನ್ನೂ ತೋರಿಸುತ್ತಾನೆ. ಆದರೆ ಇದೆಲ್ಲವೂ ...ನಕಲಿ ದಾಖಲೆಗಳೆ.

ಬಳ್ಳಾರಿ ಡಿಎಫ್‌ಒ ಮುತ್ತಯ್ಯ ಮತ್ತು ಎಸಿಎಫ್ ...ಶ್ರೀನಿವಾಸಮೂರ್ತಿಯಂಥ ದಗಲುಬಾಜಿ ಅರಣ್ಯಾಧಿಕಾರಿಗಳಿಗೆ ಹೊಲಸು ತಿನ್ನಿಸಿಬಿಟ್ಟರೆ ಸಾಕು. ಇಂಥ ಕಳ್ಳ ದಾಖಲೆಗಳ ಆಧಾರದ ಮೇಲೆ ಯಾರು ಬೇಕಾದರೂ ಅದಿರು ದೋಚಬಹುದು. ಇದನ್ನು ಅರಿತೇ ರತ್ನಯ್ಯ ಶೆಟ್ಟಿ ತನಗೆ ವಿಠಲಾಪುರದ ಸರ್ವೆ ನಂ. 1 ರಲ್ಲಿ ಗಣಿಗಾರಿಕೆಗೆ ಪರವಾನಗಿ ಕೊಡುವಂತೆ 2001 ರಲ್ಲಿ ಅರ್ಜಿ ಕೊಟ್ಟ. ಹಾಗಂತ ಸರ್ಕಾರವಾಗಲಿ, ಗಣಿ ಇಲಾಖೆಯಾಗಲಿ ಈತನ ಅರ್ಜಿಯನ್ನು ಒಪ್ಪಿಲ್ಲ. ಕನಿಷ್ಠ ಫಾರೆಸ್ಟ್ ಕ್ಲಿಯರೆನ್ಸ್ ಕೂಡ ಶೆಟ್ಟಿಗೆ ಸಿಕ್ಕಿಲ್ಲ.

ಆವತ್ತಿನಿಂದ ಅದಿರು ದೋಚಲು ಹೊಂಚುಹಾಕುತ್ತಲೇ ಇದ್ದ ರತ್ನಯ್ಯ ಶೆಟ್ಟಿ ಈಗ ಜನಾರ್ದನ ರೆಡ್ಡಿ ಮತ್ತು ಆನಂದ್‌ಸಿಂಗ್ ಮೂಲಕ ಕಾರ್ಯ ಸಾಧಿಸುತ್ತಿದ್ದಾನೆ. ಆ ಪ್ರಕಾರ ರತ್ನಯ್ಯ ಶೆಟ್ಟಿಗೆ ಬಳ್ಳಾರಿ ರಕ್ಷಿತ ಅರಣ್ಯದ ವಿಠಲಾಪುರದ ಸ.ನಂ. 1 ರಲ್ಲಿ ಹನ್ನೊಂದು ಹೆಕ್ಟೇರ್ ಪ್ರದೇಶದಲ್ಲಿ ಗಣಿಗುತ್ತಿಗೆ ಸಿಕ್ಕಂತೆ ಸೃಷ್ಟಿಸಿದ ನಕಲಿ ದಾಖಲೆಯನ್ನು ಬಳ್ಳಾರಿಯ ಖದೀಮ ಡಿಎಫ್‌ಓ ಮುತ್ತಯ್ಯ ಮನ್ನಿಸಿದ್ದಾನೆ. ಇಲ್ಲಿಗೆ ಎರಡು ತಿಂಗಳ ಹಿಂದೆ ರತ್ನಯ್ಯ ಶೆಟ್ಟಿ, ಜನಾರ್ದನ ರೆಡ್ಡಿ ಮತ್ತು ಆನಂದ್‌ಸಿಂಗ್ ಮಧ್ಯೆ ರೈಸಿಂಗ್ ಕಾಂಟ್ರಾಕ್ಟ್ ಒಂದು ಏರ್ಪಟ್ಟಿದೆ. ಅದರಂತೆ ಹನ್ನೊಂದು ಹೆಕ್ಟೇರ್‌ಗಳ ಪೈಕಿ ಜನಾರ್ದನ ರೆಡ್ಡಿ ಐದೂವರೆ ಹೆಕ್ಟೇರ್‌ಗೆ ರೈಸಿಂಗ್ ಕಾಂಟ್ರಾಕ್ಟ್ ಪಡೆದರೆ ಮಿಕ್ಕ ಐದೂವರೆ ಎಕರೆಯನ್ನು ಆನಂದ್‌ಸಿಂಗ್ ಆಕ್ರಮಿಸುತ್ತಾನೆ.

ಮೊದಲೇ ರಕ್ಷಿತ ಅರಣ್ಯ. ಯಾವುದೇ ಪರವಾನಗಿಯಿಲ್ಲದಿದ್ದರೂ ಏಕಾಏಕಿ ಕಾಡಿಗೆ ನುಗ್ಗಿದ ಜನಾರ್ದನ ರೆಡ್ಡಿಯು ಗೂಂಡಾಪಡೆ ರಾಜಾರೋಷವಾಗಿ ಅದಿರು ದೋಚಿದ್ದೇ ಅದೆಲ್ಲವನ್ನೂ ಆಂಧ್ರದ ಓಬಳಾಪುರಂ ಮೈನಿಂಗ್ ಕಂಪೆನಿಯ ಸ್ಟಾಕ್ ಯಾರ್ಡಿಗೆ ಸಾಗಿಸುತ್ತದೆ. ದುರಂತವೆಂದರೆ ಕರ್ನಾಟಕದ ವಿಠಲಾಪುರದಿಂದ ಆಂಧ್ರಕ್ಕೆ ಸಣ್ಣದೊಂದು ಚೆಕ್‌ಪೋಸ್ಟ್ ಕೂಡ ಇರದಂತೆ ಜನಾರ್ದನ ರೆಡ್ಡಿ ನೋಡಿಕೊಂಡರೆ, ಇದನ್ನೇ ಬಳಸಿಕೊಂಡು ತನ್ನ ಡಕಾಯಿತಿ ಶುರು ಹಚ್ಚಿಕೊಂಡವನು ಆನಂದ್‌ಸಿಂಗ್.


ತನ್ನ ಕಾಡುಗಳ್ಳತನಕ್ಕೆ ಪೂರಕವೆಂಬಂತೆ ಮೊದಲು ತುಮಟಿಯಲ್ಲಿ ಅಳಿಯ ಸಂತೋಷ್ ಸಿಂಗ್ ಹೆಸರಲ್ಲಿ 20 ಎಕರೆ ರೈತರ ಭೂಮಿ ಖರೀದಿಸಿದ ಆನಂದ್‌ಸಿಂಗ್ ಅದನ್ನೇ ತನ್ನ ಸ್ಟಾಕ್ ಯಾರ್ಡ್ ಅಂದರೆ ಅದಿರು ಸಂಗ್ರಹಾಗಾರ ಎಂದು ನಮೂದಿಸಿದ್ದಾನೆ. ಇಲ್ಲಿಂದ ವಿಠಲಾಪುರದ ಸ.ನಂ. 1 ಕ್ಕೆ ಹೋಗಬೇಕೆಂದರೆ ಅಲ್ಲಿಂದ ರತ್ನಯ್ಯ ಶೆಟ್ಟಿಯ ಹೆಸರಲ್ಲಿ ಅದಿರು ದೋಚಿ ತರಬೇಕೆಂದರೆ ರಸ್ತೆ ಬೇಕಲ್ಲ-

ಅದಕ್ಕೆ ಆನಂದ್‌ಸಿಂಗ್ ಬಳಸಿದ್ದು ಲೋಕಲ್ ಬಿಜೆಪಿ ಗೂಂಡಾಗಳಾದ ವ್ಯಾಸನಕೆರೆ ಶ್ರೀನಿವಾಸ್ ಮತ್ತು ಸಂಡೂರಿನ ಕಾರದಪುಡಿ ಮಹೇಶ್‌ರನ್ನು. ಖಾರದ ಪುಡಿ ಮಹೇಶ್ ಮತ್ತು ವ್ಯಾಸನಕೆರೆ ಶ್ರೀನಿವಾಸ್ ಇಬ್ಬರೂ ಆನಂದ್‌ಸಿಂಗ್ ಸಾಕಿದ ಸರ್ಪಗಳೆ. ರಾಹುಲ್ ಬಲ್ಡೋಟನ ಎಂಎಸ್‌ಪಿಎಲ್ ಗಣಿಗೆ ನುಗ್ಗಿದ್ದೇ ಆತನ ಇನ್ನೂರೆಕರೆಯಷ್ಟು ಗಣಿ ಪ್ರದೇಶವನ್ನು ಇವತ್ತಿಗೂ ದೋಚುತ್ತಿರುವ ಆನಂದ್‌ಸಿಂಗ್ ಈ ಕೆಲಸಕ್ಕೂ ಇದೇ ಗೂಂಡಾಗಳನ್ನು ಛೂಬಿಟ್ಟಿದ್ದ. ಈಗ ಸರ್ಕಾರಿ ರಕ್ಷಿತಾರಣ್ಯವನ್ನು ದೋಚಬೇಕಲ್ಲ. ಅದಕ್ಕೆ ಶ್ರೀನಿವಾಸ್ ಮತ್ತು ಖಾರದ ಪುಡಿ ಮಹೇಶ ರೌಡಿ ಪಡೆ ಆಗಸ್ಟ್ ಎರಡರಂದು ವಿಠಲಾಪುರದ ಕಾಡಿಗೆ ನುಗ್ಗಿದೆ. ಸಿಕ್ಕಸಿಕ್ಕಲ್ಲಿ ಕಾಡು ಕಡಿದು ರಸ್ತೆ ಅಗೆಯಲಾರಂಭಿಸಿದೆ. ಹೀಗೆ ಆನಂದ್‌ಸಿಂಗ್ ಪಟಾಲಮ್ಮಿನ ಅದಿರುದಾಹಕ್ಕೆ ಸಿಲುಕಿ ನಾಶವಾದ ಕಾಡಿನ ಪ್ರಮಾಣವೇ ಇಪ್ಪತ್ತೆರಡು ಎಕರೆ. ಹೇಳಿಕೇಳಿ ರತ್ನಯ್ಯ ಶೆಟ್ಟಿಯ ಕಳ್ಳ ಗಣಿಯಿರುವುದು ತುಮಟಿಯ ಟಪಾಲ್ ನಾರಾಯಣ ರೆಡ್ಡಿಯ ಗಣಿಗೆ ಹೊಂದಿಕೊಂಡು. ಯಾವತ್ತು ಆನಂದ್‌ಸಿಂಗ್ ಬಂಟರು ಕಾಡು ಅಗೆದು ರಸ್ತೆ ನಿರ್ಮಿಸುತ್ತಿರುವುದು ಗೊತ್ತಾಯಿತೋ ನಾರಾಯಣ ರೆಡ್ಡಿಯವರ ಮಗ ಟಪಾಲ್ ಗಣೇಶ್ ಬೀದಿಗಿಳಿದಿದ್ದಾರೆ. ಮುಖ್ಯಮಂತ್ರಿ, ಹೈಕೋರ್ಟ್ ನ್ಯಾಯಮೂರ್ತಿ, ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ, ಗಣಿ ನಿರ್ದೇಶಕರು ಎಲ್ಲರಿಗೂ ಗಣೇಶ್ ದೂರು ಕೊಟ್ಟಿದ್ದಾರೆ.

ಅದೇನಾಯಿತೋ ದೂರು ಬಂದಿದ್ದೇ ತಡ ಫಾರೆಸ್ಟ್ ಆಫೀಸರ್ ಶಂಕರ್ ಮತ್ತು ಗಾರ್ಡ್ ವಿರೂಪಾಕ್ಷಿ ಧಾವಿಸಿ ಬಂದಿದ್ದೇ ರಸ್ತೆ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆ. ಇದಾಗಿ ತಿಂಗಳೇ ಕಳೆದರೂ ಈತನಕ ಕಾಡು ನಾಶ ಮಾಡಿದ ಆನಂದ್‌ಸಿಂಗ್ ವಿರುದ್ಧವಾಗಲಿ, ಆತನ ರೌಡಿಗಳಾದ ಶ್ರೀನಿವಾಸ್ ಮತ್ತು ಖಾರದ ಪುಡಿ ಮಹೇಶನ ವಿರುದ್ಧವಾಗಲಿ ಅರಣ್ಯಾಧಿಕಾರಿಗಳು ಕೇಸು ದಾಖಲಿಸಿಲ್ಲ. ಹಾಳಾಗಲಿ ವಿಠಲಾಪುರದಲ್ಲಿ ಆನಂದ್‌ಸಿಂಗ್ ಮತ್ತು ಜನಾರ್ದನ ರೆಡ್ಡಿ ಪಟಾಲಮ್ ಅದಿರು ದೋಚುತ್ತಿರುವುದನ್ನಾದರೂ ನಿಲ್ಲಿಸಬೇಕಿತ್ತಲ್ಲವೇ?

ದುರಂತವೆಂದರೆ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಮನೋಜ್‌ಕುಮಾರ್ ಶುಕ್ಲಾ, ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಶ್ರೀನಿವಾಸಮೂರ್ತಿ, ಡಿಎಫ್‌ಓ ಮುತ್ತಯ್ಯ ಮತ್ತು ರೇಂಜರ್ ವೆಂಕಟೇಶಲು; ಇತ್ಯಾದಿ ಅರಣ್ಯಾಧಿಕಾರಿಗಳೆಲ್ಲರೂ ಜನಾರ್ದನ ರೆಡ್ಡಿಯ ಸಾಕುನಾಯಿಗಳೆ. ಕಾಟಾಚಾರಕ್ಕಷ್ಟೇ ರಸ್ತೆ ಕಾಮಗಾರಿಯನ್ನು ನಿಲ್ಲಿಸಿದ ರೇಂಜರ್ ವೆಂಕಟೇಶಲು ಎಮ್ಮೆಲ್ಲೇ ಆನಂದ್‌ಸಿಂಗ್ ವಿರುದ್ಧ ದೂರು ದಾಖಲಿಸಿಲ್ಲ, ಕೇಸನ್ನೂ ಹಾಕಿಲ್ಲ. ರಕ್ಷಿತಾರಣ್ಯದಿಂದ ಅಹೋರಾತ್ರಿ ಅದಿರು ಲೂಟಿಯಾಗುತ್ತಿದ್ದರೂ ಆ ಬಗ್ಗೆ ಯಾವೊಬ್ಬ ಅರಣ್ಯಾಧಿಕಾರಿಯೂ ತಲೆ ಕೆಡಿಸಿಕೊಂಡಿಲ್ಲ.

ವಿಚಿತ್ರವೆಂದರೆ ಮುಖ್ಯಮಂತ್ರಿ ಯಡ್ಡಿಯೇ ಶಿವಮೊಗ್ಗದ ಪತ್ರಿಕಾಗೋಷ್ಠಿಯಲ್ಲಿ ಅದಿರು ಲೂಟಿಯಾಗುತ್ತಿರುವುದನ್ನು ಒಪ್ಪಿಕೊಳ್ಳುತ್ತಾರೆ. ತಾನೇ ಅರಣ್ಯ ಮಂತ್ರಿಯಾಗಿದ್ದು ತನ್ನದೇ ಕೈಕೆಳಗಿನ ಅರಣ್ಯಾಧಿಕಾರಿಗಳು ಅರಣ್ಯಲೂಟಿಯನ್ನು ಕಟ್ಟುನಿಟ್ಟಾಗಿ ತಡೆಗಟ್ಟುತ್ತಿಲ್ಲ, ತನ್ನ ಮಾತನ್ನೇ ಕೇಳುತ್ತಿಲ್ಲ ಎಂದು ಯಡ್ಡಿಯೇ ಹೇಳಿಕೆ ಕೊಡುತ್ತಾರೆ. ಇತ್ತ ಅದಿರು ದೋಚುತ್ತಿರುವುದು ಅವರದೇ ಪಕ್ಷದ ಎಮ್ಮೆಲ್ಲೇ ಮತ್ತು ಪ್ರವಾಸೋದ್ಯಮ ಮಂತ್ರಿ ಎಂಬುದನ್ನು ಯಡ್ಡಿಗೆ ನೆನಪಿಸುವವರ್‍ಯಾರು?



ಆನಂದ್‌ಸಿಂಗ್

ಅಧಿಕಾರಿಗಳು ತನ್ನ ಮಾತನ್ನು ಕೇಳುತ್ತಿಲ್ಲ ಎಂದು ಯಡ್ಡಿ ಹೇಳಿಕೆ ಕೊಟ್ಟಾಕ್ಷಣ ಅದಿರು ಲೂಟಿಯನ್ನು ಕಂಡೂ ಸರ್ಕಾರ ಸುಮ್ಮನಿರಬೇಕೆ? ಎಮ್ಮೆಲ್ಲೇ ಆನಂದ್ ಸಿಂಗ್ ಮತ್ತು ಜನಾರ್ದನ ರೆಡ್ಡಿ ದುಷ್ಟಕೂಟಕ್ಕೆ ಈ ದೇಶದ ಯಾವುದೇ ಕಾಯ್ದೆ ಕಾನೂನುಗಳು ಅನ್ವಯಿಸುವುದಿಲ್ಲವೇ?

● ರಾ. ಸೋಮನಾಥ್

ದೋಚಿದ ದುಡ್ಡಲ್ಲಿ ವಿ.ಕ. ಪುರವಣಿ

ಆನಂದ್‌ಸಿಂಗ್ ಸಾಧನೆಗಳ ಗುಣಗಾನಕ್ಕೆಂದೇ ಖ್ಯಾತ(?) ದಿನಪತ್ರಿಕೆ ವಿಜಯ ಕರ್ನಾಟಕ ವಿಶೇಷ ಸಂಚಿಕೆಯೊಂದನ್ನು ಹೊರತರುತ್ತಿದೆ. ಮುಂಬರುವ ಅಕ್ಟೋಬರ್ 3 ರಂದು ಆನಂದ್‌ಸಿಂಗ್ ಹುಟ್ಟು ಹಬ್ಬವಂತೆ. ಆವತ್ತು ಅರವತ್ತು ಪುಟಗಳ ಆನಂದ್‌ಸಿಂಗ್ ಸಾಧನೆಗಳ ಕುರಿತು ವಿಶೇಷ ಲೇಖನಗಳುಳ್ಳ ವಿಶಿಷ್ಟ ಸಂಚಿಕೆಯೊಂದನ್ನು ವಿಜಯ ಕರ್ನಾಟಕದ ಜೊತೆ ಉಚಿತವಾಗಿ ಹಂಚಲಾಗುತ್ತದೆ!

ಹಾಗಂತ ವಿಕ ಇದನ್ನೇನೂ ಲೋಕ ಕಲ್ಯಾಣಾರ್ಥ ಮಾಡುತ್ತಿಲ್ಲ. ಪ್ರತಿ ಪುಟಕ್ಕೂ ಆನಂದ್‌ಸಿಂಗ್‌ನಿಂದ ಹನ್ನೆರಡು ಸಾವಿರ ರೂಪಾಯಿಗಳಷ್ಟು ದುಡ್ಡು ಪೀಕುತ್ತದೆ. ಅರವತ್ತು ಪುಟಕ್ಕೆ ಬರೋಬ್ಬರಿ ಎಂಟು ಲಕ್ಷ ರೂಪಾಯಿಗಳಷ್ಟಾಯಿತು. ಇಂಥ ಇಪ್ಪತ್ತು ಸಾವಿರಕ್ಕೂ ಅಧಿಕ ಸಂಚಿಕೆಗಳನ್ನು ಮುದ್ರಿಸಿ ಹೊಸಪೇಟೆಯ ಮತದಾರರಿಗೆ ಹಂಚುವ ಜವಾಬ್ದಾರಿಯನ್ನು ಟೈಮ್ಸ್ ಆಫ್ ಇಂಡಿಯಾ ಬಳಗ ವಹಿಸಿಕೊಂಡಿದೆ. ಅದೂ ಹೊಸಪೇಟೆಯ ಏಜೆಂಟರ ಮೂಲಕ. ಆನಂದ್‌ಸಿಂಗ್ ದುಡ್ಡಿನ ದೌಲತ್ತು ಮತ್ತು ಟೈಮ್ಸ್ ಮಾರ್ವಾಡಿಗಳ ಹಣದಾಹಕ್ಕೆ ಇದೊಂದು ಉದಾಹರಣೆಯಷ್ಟೇ. ತನ್ನದೇ ಪಾಪದ ದುಡ್ಡು ಸುರಿದು ತನ್ನ ಭಜನಾವಳಿಯನ್ನೇ ಉಚಿತವಾಗಿ ಹಂಚಿಸುವ ಆನಂದ್‌ಸಿಂಗ್ ಹುಚ್ಚಾಟದ ಲಾಭ ಪಡೆಯುತ್ತಿರುವುದು ಯಾರು ಗೊತ್ತೆ?

ರದ್ದಿ ಅಂಗಡಿಯವರು!

ವಿಜಯ ಕರ್ನಾಟಕ

ಇದೀ ಹೊಸಪೇಟೆಯಲ್ಲಿ ಹೆಚ್ಚೆಂದರೆ ಐದು ಸಾವಿರದಷ್ಟು ವಿಕ ಓದುಗರಿರಬಹುದು. ಅಷ್ಟು ಪ್ರತಿಗಳ ಜೊತೆ ಒಂದೊಂದು ಉಚಿತ ಸಂಚಿಕೆ ಕೊಟ್ಟರೂ ಇನ್ನೂ ಹದಿನೈದು ಸಾವಿರದಷ್ಟು ಮಿಕ್ಕುತ್ತದೆಯಲ್ಲ, ಅದನ್ನು ಏಜೆಂಟರೇ ನಿಂತು ರದ್ದಿಗೆ ಮಾರಿಕೊಂಡರೆ?

ರದ್ದಿಯವನಿಗೂ ಲಾಭ, ಏಜೆಂಟನಿಗೂ ಖಮಾಯಿ!

ಪಾಪದ ದುಡ್ಡು ಪಾಪಕ್ಕಲ್ಲದೇ ಮತ್ತೇನು?

ಈ ಪ್ರಶ್ನೆಗಳಿಗೆ ಯಾರು ಉತ್ತರಿಸುತ್ತಾರೆ?

* ತನ್ನ ಪತ್ನಿ ಪದ್ಮಪ್ರಿಯಾರವರಿಗೆ ಅತುಲ್ ರಾವ್ ಜೊತೆ ಸಂಬಂಧವಿದೆ ಎಂದು ಆರೋಪಿಸಿ ಅತುಲ್ ವಿರುದ್ಧ ಕೇಸು ದಾಖಲಿಸಿರುವ ರಘುಪತಿ ಭಟ್ಟರು, ತನಗೆ ಇತರ ಅನೇಕ ಹೆಂಗಸರೊಂದಿಗೆ ಸಂಬಂಧವಿದೆ ಎಂದು ಪದ್ಮಪ್ರಿಯಾರವರ ಮಾತುಗಳನ್ನು ಉಲ್ಲೇಖಿಸಿ ಅತುಲ್ ರಾವ್ ಮಾಡಿರುವ ಆಪಾದನೆಯ ಕುರಿತು ಏನು ಹೇಳುತ್ತಾರೆ?
* ರಘುಪತಿ ಭಟ್ಟರಿಗೂ, ಪದ್ಮಪ್ರಿಯಾರಿಗೂ ಆಗಾಗ ಜಗಳ ನಡೆಯುತ್ತಿತ್ತು, ಮಾತುಕತೆ ಇರುತ್ತಿರಲಿಲ್ಲ, ದಾಂಪತ್ಯದಲ್ಲಿ ವಿರಸವಿತ್ತು ಎಂಬ ವಿಚಾರಗಳು ಡಾ. ವಿ.ಎಸ್. ಆಚಾರ್ಯ ಹಾಗೂ ಭಟ್ಟರ ಸಹೋದರರಿಗೆ ತಿಳಿದಿತ್ತು ಮತ್ತು ಇವರು ಆಗಾಗ ಮಧ್ಯಸ್ಥಿಕೆ ವಹಿಸಿ ರಾಜಿ ಮಾಡಿಸುತ್ತಿದ್ದರು ಎಂದು ಅತುಲ್ ರಾವ್ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಈ ರಾಜ್ಯದ ಗೃಹ ಸಚಿವರೂ ಆಗಿರುವ ಆಚಾರ್ಯರು ಏನು ಹೇಳುತ್ತಾರೆ?
* ದೆಹಲಿ ಪ್ರಯಾಣದ ವೇಳೆ ಕಾರ್ಕಳದ ಮಾಜಿ ಶಾಸಕ ಸುನಿಲ್ ಕುಮಾರ್ ಪಿಸಿ ದಿನೇಶ್ ಶೆಟ್ಟಿಗೆ ಫೋನ್ ಮಾಡಿ ಮಾತನಾಡುತ್ತಿದ್ದುದೇನು?
* ಉಡುಪಿ ಎಸ್ಪಿ ಇನ್ಸ್‌ಪೆಕ್ಟರ್ ಶ್ರೀನಿವಾಸ ರಾಜುರವರಿಗೆ ಫೋನ್ ಮಾಡಿ ಪದ್ಮಪ್ರಿಯಾ ಅಪಾರ್ಟ್‌ಮೆಂಟ್ನಲ್ಲಿಲ್ಲ ಎಂದು ಹೇಳಿದ್ದು ಯಾಕಾಗಿ?
* ಇನ್ಸ್‌ಪೆಕ್ಟರ್ ಜಯಂತ್ ಶೆಟ್ಟಿ ಬೆಳಗ್ಗೆ ಅಪಾರ್ಟ್‌ಮೆಂಟ್ಗೆ ಹೋಗದೆ ಕರ್ನಾಟಕ ಭವನಕ್ಕೆ ಹೋದದ್ದೇಕೆ?
* 15ರ ಬೆಳಗ್ಗೆ ಪೊಲೀಸರು ಹೋಗುವ ಮೊದಲೇ ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿಯವರನ್ನು ಬೆದರಿಸಿ ಪದ್ಮಪ್ರಿಯಾರಿದ್ದ ಫ್ಲಾಟಿಗೆ ಹೋದ ಕರ್ನಾಟಕದ ಮೂವರು ಯಾರು? ಅವರು ಸುನಿಲ್ ಕುಮಾರ್, ರಘುಪತಿ ಭಟ್ ಮತ್ತು ಅವರೊಂಗಿದ್ದ ಮೂರನೆ ವ್ಯಕ್ತಿಯೇ?
* ಈ ಮೂವರು ಫ್ಲಾಟಿಗೆ ಹೋಗಿ ಮಾಡಿದ್ದೇನು?
* ಪದ್ಮಪ್ರಿಯಾರ ತಂದೆ, ತಾಯಿ, ಸಹೋದರರು ಹಾಗೂ ಸಹೋದರಿ ನೀಡಿದ ಹೇಳಿಕೆ ಪರೋಕ್ಷವಾಗಿ ಪದ್ಮಪ್ರಿಯರ ಸಾವಿಗೆ ರಘುಪತಿ ಭಟ್ಟರೇ ಕಾರಣ ಎಂದು ಆರೋಪಿಸಿದಂತಿದೆಯಲ್ಲವೇ? ಈ ಎಲ್ಲಾ ಗಂಭೀರ ವಿಚಾರಗಳ ಬಗ್ಗೆ ಪೊಲೀಸ್ ಅಧಿಕಾರಿಗಳಾಗಲಿ, ಸಿಓಡಿ ಅಧಿಕಾರಿಗಳಾಗಲಿ ತನಿಖೆ ನಡೆಸಿದ್ದಾರೆಯೇ? ನಡೆಸಿಲ್ಲವೆಂದಾದರೆ ಯಾಕೆ?
* ಈ ಎಲ್ಲಾ ಸೂಕ್ಷ್ಮ ವಿಷಯಗಳ ಕುರಿತು ಗೃಹ ಸಚಿವರು, ಮುಖ್ಯಮಂತ್ರಿಗಳು ಏನು ಹೇಳುತ್ತಾರೆ?



ಸತ್ತ ಪತ್ನಿಯ ಮೇಲೆ ಭಟ್ಟನ ಅತ್ಯಾಚಾರ



ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್‌ರ ಪತ್ನಿ ಪದ್ಮಪ್ರಿಯ ಅವರ ನಿಗೂಢ ಸಾವಿನ ಪ್ರಕರಣದ ತನಿಖೆ ನಡೆಸಲು ಸಿಬಿಐ ಮುಂದಾಗಿದೆ ಎಂಬ ಸುದ್ದಿಯೇ ಕರಾವಳಿಯ ಚೆಡ್ಡಿಗಳಿಗೆ ನಡುಕ ಹುಟ್ಟಿದೆ.

ನವದೆಹಲಿಯ ಸಿಬಿಐ ಕೇಂದ್ರ ಕಚೇರಿ ಮಣಿಪಾಲ ಪೊಲೀಸ್ ಠಾಣೆಯ ಪೊಲೀಸರನ್ನು ಸಂಪರ್ಕಿಸಿ ಪದ್ಮಪ್ರಿಯ ಪ್ರಕರಣಕ್ಕೆ ಸಂಬಂಧಿಸಿದ ಸಂಪೂರ್ಣ ಕಡತಗಳನ್ನು ಕನ್ನಡದಿಂದ ಇಂಗ್ಲಿಷಿಗೆ ಭಾಷಾಂತರ ಮಾಡಿ ಕೂಡಲೇ ಕಳುಹಿಸಿ ಕೊಡುವಂತೆ ಸೂಚಿಸಿದೆ ಎಂದೂ, ಆ ಕಾರಣಕ್ಕೆ ಮಣಿಪಾಲ ಪೊಲೀಸರು ಇತ್ತೀಚೆಗೆ ದಾಖಲೆಗಳನ್ನು ಸಿಬಿಐ ಕೇಂದ್ರ ಕಚೇರಿಗೆ ಕಳುಹಿಸಿ ಕೊಟ್ಟಿದ್ದಾರೆಂದೂ ಈಗ ಎಲ್ಲೆಡೆ ಗುಸುಗುಸು ಹಬ್ಬಿದೆ.

ಇದನ್ನು ಕೇಳಿ ರಘುಪತಿ ಭಟ್ಟ ಆಘಾತಗೊಂಡನೋ ಏನೋ? ಕೂಡಲೆ ತನ್ನ ರಕ್ಷಣೆಗಾಗಿ ರಘುಪತಿ ಭಟ್ ತನ್ನ ಮಾಜಿ ಮಿತ್ರ ಅತುಲ್ ರಾವ್ ವಿರುದ್ಧ ಹೊಸ ದೂರು ದಾಖಲಿಸಿದ್ದಾನೆ. ಸಿಬಿಐ ಅಧಿಕಾರಿಗಳು ಮಣಿಪಾಲ ಠಾಣೆಯಿಂದ ಕಡತ ಕೇಳಿದರು ಎಂಬ ಸುದ್ದಿ ಹರಡಿದ ನಾಲ್ಕು ದಿನಗಳ ಬಳಿಕ ಮತ್ತು ಸಿಓಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ ಎರಡು ದಿನಗಳ ಅಂತರದಲ್ಲೇ ರಘುಪತಿ ಭಟ್ಟ ಅತುಲ್ ರಾವ್ ವಿರುದ್ಧ ಉಡುಪಿಯ ಪ್ರಧಾನ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ದ ಮೂಲಕ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಖಾಸಗಿ ದಾವೆಯನ್ನು ದಾಖಲಿಸಿದ್ದಾನೆ.

ರಘುಪತಿ ಭಟ್ ನೀಡಿರುವ ಹೊಸ ದೂರಿನ ಆಧಾರದ ಮೇಲೆ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಅತುಲ್ ರಾವ್ ವಿರುದ್ಧ ಕಲಂ 497, 498 ಮತ್ತು 306 ರಂತೆ ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭಿಸಲಾಗಿದೆ.

ಇದಕ್ಕೆಲ್ಲ ಕಾರಣವೂ ಇದೆ. ಕಳೆದ ವರ್ಷ ಪದ್ಮಪ್ರಿಯ ಅವರು ದೆಹಲಿಯ ಶಮಾ ಅಪಾರ್ಟ್‌ಮೆಂಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರಲ್ಲವೇ? ಅಂದು ನಡೆದ ಘಟನಾವಳಿಗಳನ್ನು ನೋಡಿದರೆ ಹಲವು ಅಂಶಗಳು ಸ್ಪಷ್ಟವಾಗುತ್ತವೆ. ಅದೇನೆಂದರೆ ಆಕೆಯನ್ನು ಕೊನೆಯದಾಗಿ ಮಾತನಾಡಿಸಿದವರು ಆಕೆಯ ಗಂಡ ರಘುಪತಿ ಭಟ್ಟ, ಭಟ್ಟನ ದೋಸ್ತ್ ಕಾರ್ಕಳದ ಮಾಜಿ ಶಾಸಕ ಸುನಿಲ್ ಕುಮಾರ್ ಮತ್ತು ಇನ್ನೊಬ್ಬರು ಎಂಬುದು. ಇದೆಲ್ಲ ಸ್ವತಃ ಪದ್ಮಪ್ರಿಯಾಳ ಸಹೋದರ ರಾಜಶೇಖರ್ ರಾವ್ ಅವರು ನೀಡಿದ



ಹೇಳಿಕೆಯಲ್ಲಿ ಮತ್ತು ಅತುಲ್ ರಾವ್ ನೀಡಿದ ಹೇಳಿಕೆಯಲ್ಲಿ ಬ್ಲಾಕ್ ಅಂಡ್ ವೈಟ್ ಆಗಿದೆ.

ಅಂದರೆ, ಕೊನೆಗೂ ಪದ್ಮಪ್ರಿಯಾ ಆತ್ಮಹತ್ಯೆಗೆ ಶರಣಾಗುವುದಕ್ಕೆ ಕಾರಣರಾಗಿದ್ದವರು ಭಟ್ ಮತ್ತು ಸುನೀಲ್ ಕುಮಾರ್! ಇದೆಲ್ಲ ನ್ಯಾಯಾಲಯದ ಮುಂದೆ ಬಂದರೆ ತನಗೆ ಆಪತ್ತು ಗ್ಯಾರಂಟಿ ಎಂದು ಭಟ್ ಭಾವಿಸಿರಬೇಕು. ಆದ್ದರಿಂದಲೇ ಆತ ಈಗ ತನ್ನ ಪತ್ನಿ ಪದ್ಮಪ್ರಿಯ ಮತ್ತು ಅತುಲ್ ರಾವ್ ನಡುವೆ ದೈಹಿಕ ಸಂಬ[...] ವಿತ್ತೆಂದೂ, ಆಕೆಯ ಆತ್ಮಹತ್ಯೆಗೆ ಅತು[...] ರಾವ್‌ನೇ ಕಾರಣವೆಂದೂ ಹೊಸ ದೂ[...] ದಾಖಲಿಸಿದ್ದಾನೆ. (ವಿವರಗಳಿಗೆ ಬಾ[...] ನೋಡಿ).

ತನ್ನ ಮೇಲಿನ ಆರೋಪಗಳಿಗೆ ಉ[...] ನೀಡಲಾಗದ, ಇಂತಹ ಚಾರಿತ್ರ್ಯ ಹರಣ[...] ವಿರೋಧಿಸಲಾಗದ ಸ್ಥಿತಿಗೆ ದೂಡಲ್ಪಟ್ಟಿರ[...] ಪದ್ಮಪ್ರಿಯಳ ಮೇಲೆ ಇದು ಆಕೆಯ ಗಂಡ ಎಸಗುತ್ತಿರುವ ಅತ್ಯಾಚಾರವಲ್ಲವೇ?

ಬದುಕಿದ್ದಾಗ ನೆಮ್ಮದಿ ನೀಡದ, ತೊರೆ[...] ಹೋದಾಗ ಸುಮ್ಮನಿರದ, ಸತ್ತ ಮೇಲ[...] ಇಂತಹ ಆರೋಪಗಳನ್ನು ಮಾಡುತ್ತಿರುವು[...] ಆಕೆಯ ಮೇಲೆ ನಡೆಯುತ್ತಿರುವ ಶೀಲಹರ[...] ಅಲ್ಲದೆ ಮತ್ತಿನ್ನೇನು?

ಅತುಲ್ ಪ್ರಕಾರ ಅಂದು ನಡೆದ[...]

ಪೊಲೀಸರಿಗೆ ಅತುಲ್ ರಾವ್ ನೀಡಿರು[...] ಹೇಳಿಕೆಯಲ್ಲಿ ಪ್ರಮುಖವಾದ ಅಂಶಗ[...] ಹೀಗಿವೆ:

"(ಪದ್ಮಪ್ರಿಯ ನಾಪತ್ತೆಯಾದ ಒಂ[...] ದಿನದ ನಂತರ) 14-6-2008ರಂ[...] 12.00 ಗಂಟೆ ಸಮಯಕ್ಕೆ ಉಡುಪಿ ಡಿಸಿಐಬಿ ಇನ್ಸ್‌ಪೆಕ್ಟ[...] ಅವರಾದ ಶ್ರೀನಿವಾಸ್ ರಾಜ ಅವರು ನನಗೆ ದೂರವಾ[...] ಕರೆಮಾಡಿ ಕರೆಸಿಕೊಂಡರು. ನಂತರ ಕೆಲವು ಕಾಲ್ ಡೀಟೈ[...] ದಾಖಲೆಗಳನ್ನು ತೋರಿಸಿ 'ನಿನ್ನ ಹಾಗೂ ಪದ್ಮಪ್ರಿಯರವ[...] ಫೋನ್ ಕಾಲ್ ಡೀಟೈಲ್ಸ್‌ಗಳನ್ನು ಈಗಾಗಲ[...] ತೆಗೆದುಕೊಂಡಿದ್ದೇವೆ. ಸುಳ್ಳು ಹೇಳಿ ಪ್ರಯೋಜನವಿ[...] ಇದ್ದ ವಿಚಾರವನ್ನು ತಿಳಿಸು' ಎಂದು ಹೇಳಿದ ಮೇರೆ[...] ನಾನು ಪದ್ಮಪ್ರಿಯರವರನ್ನು ದೆಹಲಿಯಲ್ಲಿ ಬಿಟ್ಟಿರು[...] ಬಗ್ಗೆ ತಿಳಿಸಿದೆನು..."

"ಎಸ್ಪಿರವರು ನನ್ನ ಫೋನಿನಿಂದ ಪದ್ಮಪ್ರಿಯರವರಿ[...] ಫೋನ್ ಮಾಡಿಸಿದರು. ನನ್ನ ಫೋನ್ ಸ್ಪೀಕರನ್ನು ಆ[...] ಮಾಡಿಸಿದರು."

"ಆ ದಿನ ಉಡುಪಿಯಿಂದ ಇನ್ಸ್‌ಪೆಕ್ಟರ್ ಶ್ರೀನಿವಾ[...] ರಾಜು ಮತ್ತು ಪೊಲೀಸರು ದೆಹಲಿಗೆ ಹೋಗಲೆಂದ[...] ಮಂಗಳೂರಿಗೆ ಹೊರಟೆವು. ನಂತರ ಮಂಗಳೂರ[...] ಇನ್ಸ್‌ಪೆಕ್ಟರ್ ಜಯಂತ್ ಶೆಟ್ಟಿಯವರು ನಮ್ಮ ಜೊ[...] ಸೇರಿ ಕಾರಿನಲ್ಲಿ ನೇರವಾಗಿ ಬೆಂಗಳೂರಿನ ದೇವನಹ[...] ಏರ್‌ಪೋರ್ಟ್‌ಗೆ ತಲುಪಿದೆವು. ದಾರಿ ಮಧ್ಯದಲ್ಲಿ 'ನಾನ[...] ಅವಳೊಂದಿಗೆ ಮಾತನಾಡುತ್ತೇನೆ' ಎಂದಾಗ ಜಯಂತ[...] ಶೆಟ್ಟಿಯವರು 'ನಿನಗೆ ತಲೆ ಕೆಟ್ಟಿದೆಯೇ. ಒಂದಕ[...] ಒಂದೂವರೆಯಾಗುತ್ತೆ' ಎಂದು ಹೇಳಿ ಪದ್ಮಪ್ರಿಯರೊಂದಿ[...] ಫೋನಿನಲ್ಲಿ ಮಾತನಾಡಿಸಲಿಲ್ಲ. ಬೆಂಗಳೂರಿನಲ್ಲಿ ಎಸಿ[...] ಜಿತೇಂದ್ರನಾಥರವರು ನಮ್ಮೊಡನೆ ಸೇರಿಕೊಂಡರು. 6.40 ಗಂಟೆಯ ಫ್ಲೈಟನಲ್ಲಿ ದೆಹಲಿಗೆ ಹೊರಟೆವು. ವಿಮಾನವ[...] 9.45ಕ್ಕೆ ದೆಹಲಿ ಮುಟ್ಟಿತು.

ನಾವು ಪ್ರಯಾಣಿಸುತ್ತಿದ್ದಾಗ ಪಿಸಿ ದಿನೇಶ್ ಶೆಟ್ಟಿ[...] ಕಾರ್ಕಳದ ಮಾಜಿ ಎಮ್‌ಎಲ್‌ಎ ಸುನಿಲ್ ಕುಮಾರ್[...] ಅವರು ಫೋನ್ ಮಾಡುತ್ತಿದ್ದರು. ನಾವುಗಳು ದೆಹಲಿ[...] ಏರ್‌ಪೋರ್ಟ್‌ನಲ್ಲಿ ಇಳಿದು ಹೊರಗೆ ಬರುತ್ತಿರಬೇಕಾದರ[...] ಉಡುಪಿ ಎಸ್ಪಿರವರು ಇನ್ಸ್‌ಪೆಕ್ಟರ್ ಶ್ರೀನಿವಾಸ ರಾಜು[...]ರವರಿಗೆ ಫೋನ್ ಮಾಡಿ 'ಆಕೆ ಅಪಾರ್ಟ್‌ಮೆಂಟನಲ್ಲಿಲ್ಲ[...] ನಿನ್ನೆ ದಿನವೇ ಅಲ್ಲಿಂದ ಹೊರಟು ಹೋಗಿದ್ದಾಳೆ' ಎಂದು ತಿಳಿಸಿದರು. ಆದಾಗ್ಯೂ ಯಾವುದಕ್ಕೂ ಫ್ಲಾಟಿಗೆ ಹೋಗಿ ಬರುವುದು ಒಳ್ಳೆಯದೆಂದು ಹೇಳಿದರು. ಆಗ ಜಯಂತ್ ಶೆಟ್ಟರವರು 'ಆಕೆ ಇಲ್ಲವೆಂದ ಮೇಲೆ ಹೋಗಿ ಏನು ಮಾಡುವುದು' ಎಂದು ಹೇಳಿದರು.

ನಂತರ ಕರ್ನಾಟಕ ಭವನಕ್ಕೆ ಹೋದೆವು. 12 ಗಂಟೆಯ ಸುಮಾರಿಗೆ ಪದ್ಮಪ್ರಿಯರ ಫೋನಿನ ಟವರ್ ದ್ವಾರಕಾದಲ್ಲಿದ[...] ಎಂದು ತಿಳಿದು ಬಂತೆಂದು ನಂತರ ಎರಡು ಗಂಟೆ ಸುಮಾರಿಗೆ ನಾವೆಲ್ಲರು ದ್ವಾರಕಾಗೆ ಹೋದೆವು.

ಫ್ಲಾಟಿಗೆ ನಾವು ಹೋದಾಗ ಸೆಕ್ಯೂರಿಟಿಯವರು ಯಾರೋ ಕರ್ನಾಟಕದಿಂದ ಬೆಳಗ್ಗೆ 3 ಜನ ಬಂದು ನಮ್ಮ ಮೇಲೆ ಜೋರು ಮಾಡಿ ಒಳಗೆ ಹೋಗಿ ಬಂದಿರುತ್ತಾರೆಂದು ಹೇಳಿದರು.

ನಾನು ಮತ್ತು ಪೊಲೀಸ್ ಅಧಿಕಾರಿಗಳು ಫ್ಲಾಟ್ ಬಳಿಗೆ ಹೋದೆವು. ಪದ್ಮಪ್ರಿಯರವರನ್ನು ನನ್ನಿಂದ ಕೂಗಿಸಿದರು. ರೆಸ್ಪಾನ್ಸ್ ಬರಲಿಲ್ಲ."

ಇದು ಅತುಲ್ ಹೇಳಿಕೆಯ ಮುಖ್ಯ ಭಾಗ. ಈಗ ಅಂದು ಏನು ನಡೆಯಿತು ಎಂದು ರಘುಪತಿ ಭಟ್ ಮತ್ತು ಸುನೀಲ್ ಕುಮಾರ್‌ರೊಂದಿಗೆ ದೆಹಲಿಗೆ ಹೋಗಿದ್ದ[...] ಪದ್ಮಪ್ರಿಯಾಳ ಸಹೋದರ ರಾಜಶೇಖರ್ ಅವರ ಹೇಳಿಕೆಯನ್ನು ಗಮನಿಸಿ. ಆತನ ಹೇಳಿಕೆಯ ಮುಖ್ಯ ಭಾಗಗಳು ಹೀಗಿವೆ:

ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬೆಳಗಿನ ಜಾವ[...]

ರಾಮನಂತಲ್ಲದ ಭಟ್ಟ!



ತಾನು ರಾಮನ ಭಕ್ತ ತನ್ನದು ರಾಮ ಭಕ್ತರ ಪಕ್ಷ ಎಂದು ಹೇಳಿಕೊಳ್ಳುವ ಶಾಸಕ ರಘುಪತಿ ಭಟ್ಟನ ದಾಂಪತ್ಯ ಜೀವನ ಹೇಗಿತ್ತು? ಈಗಾಗಲೇ ಎಲ್ಲರಿಗೂ ಗೊತ್ತಿರುವಂತೆ ತನ್ನ ಹೆಂಡತಿ 24 ಗಂಟೆಗಿಂತಲೂ ಹೆಚ್ಚು ಕಾಲ ಮನೆಯಿಂದ ನಾಪತ್ತೆಯಾಗಿದ್ದರೂ ಈತ ಕೇರ್ ಮಾಡಿರಲಿಲ್ಲ, ಅದು ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾದಾಗಲೇ ಈತ ಬೆಂಗಳೂರಿನಿಂದ ತನ್ನ ಉಡುಪಿಯ ಮನೆಗೆ ಹೋಗಿದ್ದು.

ಪೊಲೀಸರಿಗೆ ಅತುಲ್ ರಾವ್ ನೀಡಿರುವ ಹೇಳಿಕೆಯಲ್ಲಿ ಭಟ್-ಪದ್ಮಪ್ರಿಯ ನಡುವಿನ ದಾಂಪತ್ಯ ಜೀವನ ಹೇಗಿತ್ತು ಎಂಬುದರ ಸುಳಿವುಗಳಿವೆ.


"2006ರ ಡಿಸೆಂಬರ್‌ನಿಂದ ಹೆಚ್ಚು ಕಡಿಮೆ ಪ್ರತಿ ದಿನವೂ ಫೋನಿನಲ್ಲಿ ಮಾತನಾಡುತ್ತಿದ್ದೆವು. ವೈಯಕ್ತಿಕ ವಿಚಾರಗಳ ಬಗ್ಗೆಯೂ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಆ ಸಂದರ್ಭದಲ್ಲಿ ರಘುಪತಿ ಭಟ್ರವರು ಬ್ರಾಹ್ಮಣರಾಗಿದ್ದು ಮದ್ಯಪಾನ ಹಾಗೂ ಮಾಂಸ ಸೇವಿಸುವ ಬಗ್ಗೆ ಆಕೆ ಹೇಳಿಕೊಂಡು ಅಸಹ್ಯ ವ್ಯಕ್ತ ಪಡಿಸುತ್ತಿದ್ದರು. ಆಗ ನಾನು ಅವರನ್ನು ಸಮಾಧಾನಿಸಿ ಬಡ ಕುಟುಂಬದಿಂದ ಬಂದ ಪದ್ಮಪ್ರಿಯಾರವರಿಗೆ ರಘುಪತಿ ಭಟ್ಟರಿಂದ ಸ್ಥಾನ ಮಾನ ಸಿಕ್ಕಿರುವುದರಿಂದ ಇದನ್ನೆಲ್ಲಾ ಅನುಸರಿಸಿಕೊಂಡು ಹೋಗಬೇಕೆಂದು ಸಲಹೆ ನೀಡಿದ್ದೆ.

ನಂತರ ಕುಂದಾಪುರ ಮೂಲದ ರತ್ನಾ ಎಂಬ ಹೆಂಗಸಿನೊಂದಿಗೆ ರಘುಪತಿ ಭಟ್ ಅವರಿಗೆ ಸಂಬಂಧವಿರುವುದು ಅವರಿಗೆ ತಿಳಿದುಬಂದಿದ್ದರಿಂದ ಈ ವಿಚಾರದಲ್ಲಿ ಗಂಡನೊಂದಿಗೆ ಜಗಳವಾಡಿಕೊಂಡು ಮಾತುಕತೆ ಬಿಟ್ಟಿದ್ದರು.


ನಂತರದ ದಿನಗಳಲ್ಲಿ ಭಟ್ಟರಿಗೆ ಬೇರೆ ಬೇರೆ ಹುಡುಗಿಯರ ಸಂಪರ್ಕ ಇರುವ ಬಗ್ಗೆ ಪದ್ಮಪ್ರಿಯಾರಿಗೆ ತಿಳಿದುದಾಗಿ ನನಗೆ ಹೇಳಿದ್ದರು. ಈ ಬಗ್ಗೆ 2008ನೇ ಫೆಬ್ರುವರಿ 2ರಂದು ರಘುಪತಿ ಭಟ್ಟರ ಜೊತೆ ಜಗಳ ಮಾಡಿಕೊಂಡು ಮಾತುಕತೆ ಬಿಟ್ಟಿರುವುದಾಗಿ ಹೇಳಿದ್ದರು. ಈ ಸಂದರ್ಭದಲ್ಲಿ ಭಟ್ಟರ ಅಣ್ಣನಾದ ರಾಧಾಕೃಷ್ಣ ಬಾರಿತ್ತಾಯರಿಗೆ ಹೇಳಿರುವುದಾಗಿ ತಿಳಿಸಿದ್ದರು. ಅವರೊಬ್ಬರೇ ಯಾವುದೆ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗದೆ ರಘುಪತಿ ಭಟ್ಟರ ಇನ್ನೋರ್ವ ಅಣ್ಣನಾದ ರಮೇಶ ಬಾರಿತ್ತಾಯರನ್ನು ಕರೆಸಿಕೊಂಡು ಇವರಿಬ್ಬರೂ ಸೇರಿ ರಘುಪತಿ ಭಟ್ಟರ ಹತ್ತಿರ ವಿಚಾರವನ್ನು ಪ್ರಸ್ತಾಪಿಸಿದ್ದರು. ಆದಕ್ಕೆ ಅವರು "ಹಾಗೇನು ಇಲ್ಲ, ಎಲ್ಲವೂ ನಿನ್ನದೇ ತಪ್ಪು?" ಎಂದು ಹೇಳಿರುವುದಾಗಿ ತಿಳಿಸಿದ್ದರು. ಆ ಬಳಿಕ ಸುಮಾರು ಎರಡೂವರೆ ಗಂಟೆಗಳ ಕಾಲ ಪದ್ಮಪ್ರಿಯರಿಗೆ ರಾಧಾಕೃಷ್ಣ ಬಾರಿತ್ತಾಯ ಹಾಗೂ ರಮೇಶ ಬಾರಿತ್ತಾಯರವರು ಬುದ್ಧಿವಾದವನ್ನು ಹೇಳಿ ಗಂಡನನ್ನು ನಂಬಬೇಕು ಎಂದು ಹೇಳಿದ್ದರು. ಈ ವಿಚಾರದಲ್ಲಿ ಬಹಳಷ್ಟು ಮನನೊಂದಿರುವುದಾಗಿ ಪದ್ಮಪ್ರಿಯಾ ನನ್ನೊಂದಿಗೆ ಹೇಳಿದ್ದರು.

ವೀಣಾ, ಜೋತ್ಸ್ನ, ದಿವ್ಯಾ ಶೆಟ್ಟಿ ಎಂಬವರು ತನ್ನ ಗಂಡನೊಂದಿಗೆ ಸ್ನೇಹ ಹೊಂದಿರುತ್ತಾರೆಂದು ನನಗೆ ನಂಬರುಗಳನ್ನು ಕೊಟ್ಟು ಚೆಕ್ ಮಾಡಲು ಪದ್ಮಪ್ರಿಯ ಹೇಳಿದ್ದರು."

ಇದೆಲ್ಲ ಏನನ್ನು ಸೂಚಿಸುತ್ತದೆ? ಪದ್ಮಪ್ರಿಯ ಅವರಿಗೆ ರಘುಪತಿ ಭಟ್ಟ ಖಂಡಿತವಾಗಿಯೂ ರಾಮನಂತಹ ಗಂಡನಾಗಿರಲಿಲ್ಲ ಎಂದಲ್ಲವೇ? ಇಂತಹ ಗಂಡನನ್ನು ತೊರೆಯದೆ ಪದ್ಮಪ್ರಿಯಾರಿಗೆ ಬೇರೆ ಯಾವ ದಾರಿ ಇತ್ತು?

ಗಂಟೆಗೆ ತಲುಪಿದೆವು. 5.30 ಕಿಂಗ್‌ಫಿಷರ್ ದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದೆವು. ನನ್ನ ಲ್ಲಿ ಸುನೀಲ್ ಕುಮಾರ್, ರಘುಪತಿ ಅವರ ಶಾಂತ ಇದ್ದರು. ಬೆಳಿಗ್ಗೆ 8.30 ಕ್ಕೆ ದೆಹಲಿಯ ನಿಲ್ದಾಣದಲ್ಲಿ ಇಳಿದು, ಟ್ಯಾಕ್ಸಿ ಮಾಡಿಕೊಂಡು ನಲ್ಲಿರುವ ಶಮಾ ಅಪಾರ್ಟ್‌ಮೆಂಟ್ಸ್ ರಸ್ತೆಗೆ ು 9.30/9.45 ಕ್ಕೆ ಹೋದೆವು. ಅಲ್ಲಿ ಕಾರನ್ನು ಸುನೀಲ್ ಕುಮಾರ್‌ರವರು ಈಗ ಬರ್ತೀನೆ, ಇಲ್ಲಿಯೇ ಇರಿ ಎಂದು ಇಳಿದು ಹೋದರು. ರ ಒಂದು ತಾಸು ಬಿಟ್ಟು ಅವರು ಬಂದು ಬರ್ ಮಿಸ್ ಗೈಡ್ ಆಗಿದೆ, ರೂ. ನಂ. 10 ಡಿದೆ, ಅವರು ಅದರಲ್ಲಿ ಅದಕ್ಕೆ ವಾಪಸ್ಸು ಬಂದೆ . ಮಧ್ಯಾಹ್ನ ಸುಮಾರು ಂದ 1.30 ರ ನಡುವೆ ವ ರಘುಪತಿ ಭಟ್ಟರು ಲಾಡ್ಜ್ ಹತ್ತಿರ ಇದ್ದೇವೆ, ಬನ್ನಿ ಎಂದು ಸುನೀಲ್ ರವರಿಗೆ ಫೋನ್ ಮಾಡಿ ು. ಅಲ್ಲಿಗೆ ಹೋದೆವು.



ನಮಗಾಗಿ ಕಾಯುತ್ತಿದ್ದರು. ಅವರ ಜೊತೆಯಲ್ಲಿ ಣ್ಣ ರಾಧಾಕೃಷ್ಣ ಇದ್ದರು. ಅದೇ ಹೋಟೆಲ್‌ನಲ್ಲಿ ಊಟ ಮಾಡಿ ಲಗೇಜ್ ಎಲ್ಲಾ ರೂಂನಲ್ಲಿಟ್ಟು ್ರ ಡ್ರೆಸ್ ತೆಗೆದುಕೊಳ್ಳಬೇಕೆಂದು ಅದೇ ಟ್ಯಾಕ್ಸಿಯಲ್ಲಿ ಅಥವಾ ಮುಕ್ಕಾಲು ಗಂಟೆ ಹೊರಗಡೆ ಹೋಗಿ ಬರುತ್ತಿರಬೇಕಾದರೆ, ಬಾವನವರು ಫೋನ್ ಇಲ್ಲೆ ಒಂದು ಕಡೆ ಇದ್ದಾಳೆ ಎಂದು ಗೊತ್ತಾಗಿದೆ ಎಂದು ತಿಳಿಸಿದರು. ಅದರಂತೆ ನಾನು ವಾಪಸ್ಸು ಅವರೊಟ್ಟಿಗೆ ಹೋಗುವಾಗ ದಾರಿಯಲ್ಲಿ ನನ್ನ ರು ಅವಳು ಮೊಬೈಲ್ ಎತ್ತುತ್ತಿಲ್ಲ, ಏನೋ ು ಆಗಿರಬಹುದು ಅಂತ ಹೇಳಿ ಸೀದಾ ದ್ವಾರಕಾ ಕರೆದುಕೊಂಡು ಹೋದರು. ಏರ್‌ಪೋರ್ಟ್‌ನಿಂದ ಅಪಾರ್ಟ್‌ಮೆಂಟ್‌ಗೆ ಟ್ಯಾಕ್ಸಿಯಲ್ಲಿ ಬರುವಾಗ್ಗೆ ಕುಮಾರ್‌ರವರು ತನ್ನ ಫೋನ್‌ನಿಂದ ಯಾರ ಎಲ್ಲಿಯೋ ಹಿಂದಿಯಲ್ಲಿ ಮಾತನಾಡುತ್ತಾ ಅಪ್ ಹೈ, ತುಮ್ ಆಯಾತೋ ಅಚ್ಛಾ ಹೋತಾ ಹೈ ಮಾತನಾಡಿದರು. ನಾವು ಎಲ್ಲರೂ ದ್ವಾರಕಾ ಪೊಲೀಸ್ ಸ್ಟೇಷನ್ ತಲುಪುವಾಗ್ಗೆ ಸಿಪಿಐ ಜಯಂತ್ ಶೆಟ್ಟಿ, ಅವರ ತಂಡದವರು ಮತ್ತು ಅತುಲ್ ದ್ವಾರಕಾ ಪೊಲೀಸ್ ಸ್ಟೇಷನ್‌ನಲ್ಲಿ ಇದ್ದರು. ನಮ್ಮ ಕರ್ನಾಟಕ ಪೊಲೀಸರು ದೆಹಲಿಯ ಪೊಲೀಸರ ಸಹಾಯ ಕೇಳಿ ವಿಡಿಯೋ, ಫೋಟೋಗ್ರಫಿ ಎಲ್ಲಾ ಅರೆಂಜ್ ಮಾಡಿ ದೆಹಲಿ ಪೊಲೀಸರ ತಂಡದೊಂದಿಗೆ ಶಮಾ ಅಪಾರ್ಟ್‌ಮೆಂಟ್ಸ್‌ನ ರೂ. ನಂ. 20 ಅನ್ನು ಸುಮಾರು 5.00 ಗಂಟೆ ಆಸುಪಾಸು ತಲುಪಿದೆವು. ಸ್ಟೋರ್‌ರೂಮಿನ ಬಾಗಿಲನ್ನು ಒಡೆಯಲು ಹೇಳಿದರು. ಅದರಂತೆ ಬಾಗಿಲು ಹೊಡೆದಾಗ ಅಲ್ಲಿ ನನ್ನ ಅಕ್ಕ ನೇಣು ಹಾಕಿಕೊಂಡಂತೆ ನೇತಾಡುತ್ತಿದ್ದದ್ದು ಕಂಡುಬಂತು. ಆಗ ಸುಮಾರು ಸಂಜೆ 6.00 ಗಂಟೆಯಾಗಿತ್ತು. ನಾವುಗಳೆಲ್ಲರೂ ಅಂದರೆ ರಘುಪತಿ ಭಟ್, ರಾಧಾ ಕೃಷ್ಣ ಅತ್ತಿಗೆ ಶಾಂತ ಹಾಗೂ ನಾನು ಅದೇ ಟ್ಯಾಕ್ಸಿಯಲ್ಲಿ ಸದರನ್ ಲಾಡ್ಜ್‌ಗೆ ಏಳು ಗಂಟೆ ಸಮಯಕ್ಕೆ ಬಂದೆವು. ಟ್ಯಾಕ್ಸಿಯಲ್ಲಿ ಬರುತ್ತಿರ ಬೇಕಾದರೆ ನನ್ನ ಬಾವನವರು ನಾನು ಪಾರ್ಟಿಯಿಂದಲೇ ಔಟ್, ಎಲ್ಲ ಮೀಡಿಯಾದಲ್ಲಿ ಬಂದು ಭಾರಿ ಇನ್ಸಲ್ಟ್ ಆಯಿತು ಅಂತಿದ್ದರು.

*****

ಇದೆಲ್ಲದರಿಂದ ಗೊತ್ತಾಗುತ್ತದಲ್ಲವೇ? ಪದ್ಮಪ್ರಿಯಾ ಅವರ ಸಾವಿಗೆ ನೇರವಾಗಿ ಕಾರಣರಾದವರು ಯಾರೆಂದು?

ಇದಕ್ಕೆ ರಘುಪತಿ ಭಟ್ ಈಗ ತನ್ನ ಹೆಂಡತಿಯ ಪಾವಿತ್ರ್ಯದ ಬಗ್ಗೆಯೇ ಸಂಶಯ ವ್ಯಕ್ತಪಡಿಸಿ, ಆಕೆಯ ಮಾನ ಹರಾಜಾದರೂ ಸೈ ತಾನು ಮಾತ್ರ ಸೇಫ್ ಆಗಬೇಕೆಂದು ಹೊಸ ದೂರು ದಾಖಲಿಸಿದ್ದಾರೆಯೇ?

ಪದ್ಮಪ್ರಿಯಾ ಸಾವನ್ನಪ್ಪಿ ಒಂದು ವರ್ಷದ ಮೇಲಾದರೂ ಆಕೆಯ ಆತ್ಮಕ್ಕೆ ನೆಮ್ಮದಿ ಇಲ್ಲದಂತಾಗಿರುವುದು ನಿಜಕ್ಕೂ ದುಃಖದ ವಿಷಯ. ಬದುಕಿದ್ದಾಗ ಆಕೆಗೆ ಸಂತೋಷವಾಗಲಿ, ನೆಮ್ಮದಿಯಾಗಲಿ, ಬಿಡುಗಡೆಯಾಗಲಿ ಸಿಗಲಿಲ್ಲ, ಸತ್ತ ನಂತರೂ ಅದ್ಯಾವುದು ಇಲ್ಲ ಎಂದರೆ ಆಕೆಯ ಬಗ್ಗೆ ಮರುಕ ಪಡದೆ ಇನ್ನೇನು ಅನ್ನಿಸಲು ಸಾಧ್ಯ?


● ಸಾವಂತ್ರಿ

ಪತ್ನಿಯ ಶೀಲ ಸಂಶಯಿಸಿದ ಭಟ್

ಈಗ ಎಲ್ಲರಿಗೂ ಗೊತ್ತಿರುವಂತೆ, ಪದ್ಮಪ್ರಿಯಾಳನ್ನು ಕೊನೆಯದಾಗಿ ಮಾತನಾಡಿಸಿದವರು ಆಕೆ ಗಂಡ ರಘುಪತಿ ಭಟ್ ಮತ್ತಾತನ 'ಚಡ್ಡಿ' ದೋಸ್ತ್ ಸುನೀಲ್ ಕುಮಾರ್. ಆದರೆ ಇದೇ ಅವರಿಬ್ಬರ ಕೊರಳಿಗೆ ಸುತ್ತುವರಿಯುತ್ತಿದೆ. ಇದರಿಂದ ಬಚಾವ್ ಆಗಲು ಇತ್ತೀಚೆಗೆ ರಘುಪತಿ ಭಟ್ ತನ್ನ ಹೆಂಡತಿಯ ಶೀಲವನ್ನೇ ಸಂಶಯಿಸಿ ನ್ಯಾಯಾಲಯದ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಿದ್ದಾನೆ. ಅದರ ಪ್ರಮುಖ ಭಾಗಗಳು ಮತ್ತು ಅವುಗಳು ಹುಟ್ಟುಹಾಕುವ ಪ್ರಶ್ನೆಗಳನ್ನು ಇಲ್ಲಿ ದಾಖಲಿಸಿದ್ದೇವೆ. (ಸೂಚನೆ: ಭಟ್ಟನ ದೂರಿನಲ್ಲಿ ಫಿರ್ಯಾದುದಾರ ಮತ್ತು ಆರೋಪಿ ತರಹದ ನ್ಯಾಯಾಲಯದ ಪದಗಳು ಹೇರಳವಾಗಿರುವುದರಿಂದ ಓದುವುದಕ್ಕೆ ಸುಲಭವಾಗಲು ಅವುಗಳನ್ನು ಇಲ್ಲಿ ಸ್ವಲ್ಪ ಬದಲಾಯಿಸಲಾಗಿದೆ):

* 2007 ಫೆಬ್ರವರಿಯಲ್ಲಿ ನಾನು ರಿಪೇರಿಯಾದ ನಮ್ಮ ಮನೆಗೆ ಸ್ಥಳಾಂತರವಾದ ನಂತರ ನನ್ನ ಮೊಬೈಲ್ ದೂರವಾಣಿಗೆ ಓರ್ವ ಗೃಹಿಣಿ ಕರೆ ಮಾಡಿದ್ದರ ಬಗ್ಗೆ ನನ್ನ ಪತ್ನಿ ಅನುಮಾನ ಪಟ್ಟು ಸಿಟ್ಟು ಮಾಡಿಕೊಂಡಿದ್ದಳು. ಅವಳಿಗೆ ನನ್ನ ಅಮಾಯಕತನ ಮತ್ತು ಪ್ರೀತಿಯನ್ನು ತಿಳಿಸಿ ಹೇಳಿದ ನಂತರ ನನ್ನ ಮೇಲಿದ್ದ ಅನುಮಾನವನ್ನು ತೊರೆದು ಚೆನ್ನಾಗಿದ್ದಳು.

ಆದರೆ 2008ರ ಜನವರಿಯಲ್ಲಿ ನನ್ನ ಟಚ್ ಸ್ಕ್ರೀನ್ ಮೊಬೈಲ್ ಕೆಟ್ಟು ಹೋಗಿದ್ದು ಅದನ್ನು ಅತುಲ್ ರಾವ್ ವಶಕ್ಕೆ ಕೊಟ್ಟು ರಿಪೇರಿ ಮಾಡಲು ತಿಳಿಸಿದ್ದೆ. ಎರಡು-ಮೂರು ದಿವಸಗಳ ನಂತರ ಸದರಿ ಮೊಬೈಲ್ ರಿಪೇರಿಯಾಗಿದೆ ಎಂದು ಅತುಲ್ ತಿಳಿಸಿದ್ದ. ಆದರೆ ಅದನ್ನು ನನಗೆ ನೇರವಾಗಿ ಕೊಡುವ ಬದಲು ಅದರಲ್ಲಿದ್ದ ಕೆಲವು ಮಾಹಿತಿಗಳನ್ನು ನನ್ನ ಹೆಂಡತಿಗೆ ತಿಳಿಸಿದ್ದಲ್ಲದೇ ನನ್ನ ಬಗ್ಗೆ ಅವಳಿಗೆ ಕೆಟ್ಟ ಅಭಿಪ್ರಾಯ ಬರುವಂತಹ ಪ್ರಯತ್ನ ಮಾಡಿದ್ದು ನನ್ನ ಗಮನಕ್ಕೆ ಬಂದಿತ್ತು. ಆದರೆ ಆಗಲೂ ನನ್ನ ಬಗ್ಗೆ ನನ್ನ ಹೆಂಡತಿ ಹೊಂದಿದ್ದ ತಪ್ಪು ತಿಳುವಳಿಕೆಯನ್ನು ದೂರ ಮಾಡಿದ್ದೆ. ಆದರೆ ಅತುಲ್ ನನ್ನ ಹೆಂಡತಿ ಪದ್ಮಪ್ರಿಯಾಳೊಂದಿಗೆ ಆತ್ಮೀಯತೆಯನ್ನು ಬೆಳೆಸಿಕೊಳ್ಳಲು ನನ್ನ ಬಗ್ಗೆ ಕೆಲವು ಇಲ್ಲಸಲ್ಲದ ವಿಷಯಗಳಿಗೆ ಬಣ್ಣ ಹಚ್ಚಿ ನನ್ನ ದಾಂಪತ್ಯದಲ್ಲಿ ಅಂತರವನ್ನು ಹೆಚ್ಚಿಸಲು ಪ್ರಯತ್ನಿಸಿದ.



(ಪ್ರಶ್ನೆ: ಭಟ್ಟನಿಗೆ ಫೋನ್ ಮಾಡುತ್ತಿದ್ದ ಮಹಿಳೆಯ ಯಾರು? ಆತನ ಮೊಬೈಲ್‌ನಲ್ಲಿ ಇದ್ದ 'ಮಾಹಿತಿ'ಗಳೇನು? ಆ ಮಾಹಿತಿಯನ್ನು ನೋಡಿ ಪತ್ನಿ ಪದ್ಮಪ್ರಿಯಾಳಿಗೆ ಯಾಕೆ ಭಟ್ಟನ ಬಗ್ಗೆ ಕೆಟ್ಟ ಅಭಿಪ್ರಾಯ ಬರಬೇಕು? ತಮ್ಮ ಪತ್ನಿ ಪದ್ಮಪ್ರಿಯರಿಗೆ ಗೊತ್ತಾಗಬಾರದ, ತಿಳಿಯಬಾರದ ರಹಸ್ಯ ವಿಷಯಗಳು ರಘುಪತಿ ಭಟ್ಟನ ಮೊಬೈಲಿನಲ್ಲಿ ದಾಖಲಾಗಿತ್ತು ಎಂಬ ವಾಸ್ತವಾಂಶಗಳು ಪರೋಕ್ಷವಾಗಿ ರಘುಪತಿ ಭಟ್ಟ ಸ್ವತಃ ಬಹಿರಂಗಪಡಿಸಿದಂತಲ್ಲವೇ? ಮಾತ್ರವಲ್ಲ, ಭಟ್ಟರಿಗೂ ಪದ್ಮಪ್ರಿಯರಿಗೂ ದಾಂಪತ್ಯದಲ್ಲಿ ಅಂತರ ಇತ್ತು ಎಂಬುದನ್ನು ಸಹ ಭಟ್ಟ ತನ್ನ ದೂರಿನಲ್ಲಿ ಖಚಿತಪಡಿಸಿದಂತಲ್ಲವೇ? ಉತ್ತರ ಕೊಡುವರೆ ರಘುಪತಿ ಭಟ್?)

* ಅತುಲನು ಸಿಓಡಿ ತನಿಖಾಧಿಕಾರಿಗಳ ಮುಂದೆ ನೀಡಿದ್ದ ಹೇಳಿಕೆಯ ಸಂಗತಿಗಳನ್ನು ನೋಡಲಾಗಿ ಅನೇಕ ಆಘಾತಕಾರಿ ಸಂಗತಿಗಳು ಕಂಡು ಬಂದಿವೆ. ಅಲ್ಲದೆ ನಮ್ಮ ಮನೆಯ ಕೆಲಸದಾಳು ಸುನೀತ ಮತ್ತು ಮಗ ರೋಹನ್‌ನ ಹೇಳಿಕೆಗಳಿಂದ ಅತುಲ್ ಹಾಗೂ ನನ್ನ ಪತ್ನಿ ನಡುವೆ ಇದ್ದ ಅನೈತಿಕ ಸಂಬಂಧ ಸ್ಪಷ್ಟವಾಗುತ್ತದೆ. ಅಲ್ಲದೆ ಅತುಲನು ನಾನು ಊರು ಅಥವಾ ಮನೆಯಲ್ಲಿ ಇಲ್ಲದ ರಾತ್ರಿ ಸಮಯದಲ್ಲಿ ತಾಸುಗಟ್ಟಲೆ ಮೊಬೈಲ್ ದೂರವಾಣಿ ಮೂಲಕ ಮಾತನಾಡುತ್ತಿದ್ದ ಅಂಶಗಳು ಸಹ ವ್ಯಕ್ತವಾಗುತ್ತವೆ.

ನಮ್ಮ ಮನೆತನದ ವ್ಯವಹಾರಗಳನ್ನು ನೋಡಿಕೊಳ್ಳುವ ನೆಪದಲ್ಲಿ ಅತುಲನು ಪದ್ಮಪ್ರಿಯಾಳೊಂದಿಗೆ ಅನೇಕ ಬಾರಿ ಕಾರ್ಕಳದಲ್ಲಿ ಅಡಿಕೆ ಮಾರುವ ಸಲುವಾಗಿ ಹೋಗಿ ಬಂದು ಮಾಡಿದ್ದು ಆ ವೇಳೆಯಲ್ಲಿ ಪ್ರಶಾಂತ್ ಎಂಬ ಲಾಡ್ಜ್‌ನಲ್ಲಿ 5-6 ಬಾರಿ ಉಳಿದುಕೊಂಡು ಫಿರ್ಯಾದುದಾರರ ಹೆಂಡತಿಯೊಡನೆ ದೈಹಿಕ ಸಂಪರ್ಕ ಹೊಂದಿದ್ದನೆಂಬುದು ಅತುಲನು ನೀಡಿರುವ ಸ್ವಇಚ್ಛಾ ಹೇಳಿಕೆಯಲ್ಲಿಯೇ ಒಪ್ಪಿಕೊಂಡಿದ್ದಾನೆ.

(ಪ್ರಶ್ನೆ: ಪದ್ಮಪ್ರಿಯಾ ಆತ್ಮಹತ್ಯೆ ಮಾಡಿಕೊಂಡಿದ್ದು ಜೂನ್ 17, 2008ರಂದು. ಆಕೆಯ ಮತ್ತು ರಘುಪತಿ ಭಟ್ಟನ ಪುತ್ರ ಒಂಭತ್ತು ವರ್ಷದ ರೋಹನ್‌ನನ್ನು ಪೊಲೀಸರು ಪ್ರಶ್ನಿಸಿದ್ದು ಆಗಸ್ಟ್ 14, 2008ರಂದು. ಆಗಲೇ ರೋಹನ್ ಹೀಗೆ ಹೇಳಿದ್ದ: "ಅತುಲ್ ಅಂಕಲ್ ಅಮ್ಮನನ್ನು ಮನೆಯ ಮೇಲೆ ಕರೆದುಕೊಂಡು ಹೋಗಿ ಟು ಅವರ್ಸ್ ಮಾತನಾಡುತ್ತಿದ್ದರು.. ಡ್ಯಾಡಿ ಇಲ್ಲದ ಸಮಯದಲ್ಲೇ ಅತುಲ್ ಅಂಕಲ್ ಬರುತ್ತಿದ್ದರು.. ರಾತ್ರಿ ನಮ್ಮನ್ನು ಮಲಗಿಸುವ ಸಮಯದಲ್ಲಿ ತುಂಬಾ ಹೊತ್ತು ಅತುಲ್ ಅಂಕಲ್ ಜೊತೆ ಫೋನ್‌ನಲ್ಲಿ ಮಾತನಾಡುತ್ತಿದ್ದರು..."

ಹಾಗೆಯೇ ಮನೆಯ ಕೆಲಸದವಳಾದ ಸುನೀತ ಕೂಡ ಆಗ ಪೊಲೀಸರಿಗೆ ನೀಡಿದ್ದ ಹೇಳಿಕೆಯಲ್ಲಿ ಹೀಗೆಂದಿದ್ದಳು: ".. ಒಮ್ಮೆ ರೋಹನ್ ತಂದೆಯವರಲ್ಲಿ ಅಮ್ಮನಿಗೆ ಬಾಯ್ ಫ್ರೆಂಡ್ ಇದ್ದಾರೆ ಎಂದು ಹೇಳಿದ.. ಆಗ ಪ್ರಿಯಕ್ಕ ರೋಹನ್‌ಗೆ ಎರಡು ಹೊಡೆತ ಕೊಟ್ಟು ಯಾರು ಹೇಳಿದ್ದು ನಿನಗೆ ನನಗೆ ಬಾಯ್ ಫ್ರೆಂಡ್ ಇದ್ದಾರೆ ಎಂದು ಜೋರು ಮಾಡಿದಾಗ ರೋಹನ್ ನನ್ನ ಮೇಲೆ ಹಾಕಿ ತಪ್ಪಿಸಿಕೊಂಡ. ಆಗ ಪ್ರಿಯಕ್ಕ ನನ್ನ ಮೇಲೂ ಜೋರುಮಾಡಿದ್ದರು.."

ಇದೆಲ್ಲ ಈಗ ಮಾತ್ರ ಹೇಗೆ ಭಟ್ಟನ ಅರಿವಿಗೆ ಬಂತು? ಇದನ್ನು ಮೊದಲೇ ಹೇಳಬಹುದಿತ್ತಲ್ಲ? ಈಗ ತಾನೇ ಪದ್ಮಪ್ರಿಯಾಳ ಸಾವಿಗೆ ಕಾರಣ ಎಂಬುದು ನ್ಯಾಯಾಲಯದ ಮುಂದೆ ಸ್ಪಷ್ಟವಾಗಬಹುದಾದ ಹಂತದಲ್ಲಿ ಯಾಕೆ ಅತುಲನ ವಿರುದ್ಧ ಮತ್ತೊಂದು ದೂರು?)

* ಪದ್ಮಪ್ರಿಯಾ ನನ್ನ ಪತ್ನಿ ಎಂಬುದು ಗೊತ್ತಿದ್ದರೂ ಅತುಲನು ಅವಳೊಡನೆ ಲೈಂಗಿಕ ಸಂಪರ್ಕವಿಟ್ಟುಕೊಂಡಿದ್ದು, ಅವಳನ್ನು ನನ್ನಿಂದ ದೂರ ಮಾಡುವ ಉದ್ದೇಶದಿಂದ ಅವಳಲ್ಲಿ ನನ್ನ ಬಗ್ಗೆ ಕೆಟ್ಟ ಭಾವನೆಗಳನ್ನು ಮೂಡಿಸಿ ದೆಹಲಿಯಲ್ಲಿ ಬೇರೆಯಾಗಿಯೇ ವಾಸವಾಗಿರುವಂತೆ ಅವಳನ್ನು ಮಾನಸಿಕವಾಗಿ ಗಟ್ಟಿಗೊಳಿಸಿದ್ದಾನೆ. ಅದಕ್ಕೆ ಪೂರ್ವ ತಯಾರಿಯಾಗಿ ದೆಹಲಿಯಲ್ಲಿ ಒಂದು ವಾಸದ ಅಪಾರ್ಟ್‌ಮೆಂಟ್ ಆತನ ಹೆಸರಿನಲ್ಲಿ ಬಾಡಿಗೆ ಪಡೆದು ಉಡುಪಿಯಿಂದ ಆಕೆಯನ್ನು ಪುಸಲಾಯಿಸಿ ಕರೆದುಕೊಂಡು ದೆಹಲಿಗೆ ಹೋಗಿದ್ದ.


ದಿನಾಂಕ 13-06-2008ರಿಂದ 15-06-2008ರವರೆಗೆ ನನ್ನ ಹೆಂಡತಿ ಪದ್ಮಪ್ರಿಯಾ ಕಾಣೆಯಾಗಿರುವ ಬಗ್ಗೆ ಪತ್ರಿಕೆ ಹಾಗೂ ಟಿವಿ ವಾಹಿನಿಗಳಲ್ಲಿ ಗಂಭೀರವಾದ ಸುದ್ದಿಗಳು ಪ್ರಸಾರವಾಗುತ್ತಿದ್ದರೂ, ಸತ್ಯವನ್ನು ಮರೆಮಾಚಿ ಅವಳು ಕಣ್ಮರೆಯಾಗಿರುವ ವಿಷಯ ಜಟಿಲವಾಗುವುದಕ್ಕೆ ಅವಕಾಶ ಮಾಡಿರುತ್ತಾನೆ. ಸದರಿ ಸಮಸ್ಯೆಯಿಂದ ಅವಳ ಮಾನ ಮತ್ತು ಜೀವಕ್ಕೆ ಅಪಾಯವಾಗಬಹುದೆಂಬ ಕಲ್ಪನೆ ಇದ್ದೂ ಸುಮ್ಮನಿದ್ದಾನೆ.

ಅತುಲನು ನನ್ನ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಲ್ಲಿ ತಾನು ಮಾಡಿರುವ ಅಪರಾಧವು ಕೂಡ ಮುಚ್ಚಿ ಹೋಗುತ್ತವೆ ಎಂಬ ಭಾವನೆಯಿಂದ ಅವಳು ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭವನ್ನು ಸೃಷ್ಟಿಸಿರುತ್ತಾನೆ. ದಿನಾಂಕ 15-6-2008ಕ್ಕೆ ನನ್ನ ಹೆಂಡತಿ ಪದ್ಮಪ್ರಿಯಾ ಅತುಲನು ಸೃಷ್ಟಿಸಿದ ಸಂದರ್ಭ ಮತ್ತು ಸನ್ನಿವೇಶಗಳಿಂದ ಹೊರಬರದೆ ಆತ್ಮಹತ್ಯೆಗೆ ಶರಣಾಗಿದ್ದಾಳೆ. ಆಕೆ ಆತ್ಮಹತ್ಯೆ ಮಾಡಿಕೊಳ್ಳಲು ಅತುಲ್ ರೂಪಿಸಿದ ಸಂಚು, ಪ್ರೇರಣೆ ಮತ್ತು ಪ್ರಚೋದನೆಗಳೇ ಕಾರಣವಾಗಿರುತ್ತವೆ.

(ಪ್ರಶ್ನೆ: ತನ್ನ ಗಂಡನ ಬಂಗಾರದ ಪಂಜರಕ್ಕಿಂತ ದೆಹಲಿಯ ಗುಬ್ಬಚ್ಚಿ ಗೂಡೇ ವಾಸಿ ಎಂದು ಪದ್ಮಪ್ರಿಯಾ ತನ್ನ ಮನೆಯಿಂದ ಓಡಿಹೋಗಿದ್ದು ಎಲ್ಲರೂ ಬಲ್ಲ ವಿಷಯ. ಅದಕ್ಕಿಂತಲೂ ಮುಖ್ಯವಾಗಿ, ಆಕೆ ದೆಹಲಿಯಿಂದ ಅತುಲ್‌ಗೆ ಫೋನ್ ಮಾಡಿದಾಗ ಆತನನ್ನೇ ಬಂಧಿಸಿದ್ದು ಗೊತ್ತಾಗಿ ಆಕೆ ತತ್ತರಿಸಿದ್ದಳು ಎಂಬುದು ಪೊಲೀಸರ ತನಿಖೆಯಿಂದಲೇ ಗೊತ್ತಾಗುತ್ತದೆ. ಹಾಗಿದ್ದರೂ ಈಗ ರಘುಪತಿ ಭಟ್ಟ ತನ್ನ ಹೆಂಡತಿಯ ಸಾವಿಗೆ ತಾನು ಕಾರಣನಲ್ಲ, ಬದಲಾಗಿ ಅತುಲ್ ಎಂದು ಆರೋಪಿಸುತ್ತಿರುವುದೇಕೆ?)

ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗುವುದೆಂದು?

ಇದು ನಿಜವಾಗಲೂ ಅತುಲ್‌ನ ಹೇಳಿಕೆಯೇ?



2008ರ ಆಗಸ್ಟ್ 17ರಂದು ಮಂಗಳೂರಿನ ಸಂಜೀವಿನಿ ಆಸ್ಪತ್ರೆಯಲ್ಲಿ ಅತುಲ್ ರಾವ್ ಸಿಓಡಿ ಅಧಿಕಾರಿಗಳಿಗೆ ನೀಡಿರುವ "ಸ್ವಇಚ್ಛಾ ಹೇಳಿಕೆ"ಯಲ್ಲಿ ಪದ್ಮಪ್ರಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಆಘಾತಕಾರಿ ಅಂಶಗಳು ಇವೆ. ಅದಕ್ಕಿಂತಲೂ ಮುಖ್ಯವಾಗಿ ಈ "ಸ್ವಇಚ್ಛಾ ಹೇಳಿಕೆ"ಯಲ್ಲಿ ಅತುಲ್ ರಾವ್ ಹೇಳದ, ನೀಡದ ವಿಚಾರಗಳನ್ನು ಸ್ವತಃ ಸಿಓಡಿ ಅಧಿಕಾರಿಗಳೇ ಸೇರಿಸಿರಬಹುದೇ ಎಂಬ ಗುಮಾನಿಯೂ ಈಗ ಜನರನ್ನು ಕಾಡುತ್ತಿದೆ.

ಕಾರಣವೂ ಇದೆ. ಅತುಲ್ ರಾವ್ ಪ್ರಕಾರ ಈ "ಸ್ವಇಚ್ಛಾ ಹೇಳಿಕೆ"ಯ 9ನೇ ಪುಟದಲ್ಲಿ ಸಂಜೀವಿನಿ [illegible] ಆಸ್ಪತ್ರೆಯಲ್ಲಿ ತಮ್ಮನ್ನು ದಾಖಲು ಮಾಡಿದ್ದು ಅಲ್ಲಿ ಉಪಚಾರ ಪಡೆಯುತ್ತಿದ್ದೇನೆ ಎಂಬ [illegible] ಅಂತ್ಯಗೊಳ್ಳುತ್ತದೆ. ಆದರೆ ಸಿಓಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ ಅತುಲ್ ರಾವ್‌ರವರ [illegible] "ಸ್ವಇಚ್ಛಾ ಹೇಳಿಕೆ"ಯ ಕೊನೆಯಲ್ಲಿನ ಸಾಲು ಹೀಗಿದೆ:

"[illegible] ಪ್ರಿಯರವರು ತಮ್ಮ ತೋಟದಲ್ಲಿ ಬೆಳೆದ ಅಡಿಕೆಯನ್ನು ಮಾರಲು ಆಗಾಗ್ಗೆ ಕಾರ್ಕಳಕ್ಕೆ ಹೋಗುತ್ತಿದ್ದರು. 28.2.08ರ ನಂತರ ಅವರು ಅಡಿಕೆ ಮಾರಲು ಕಾರ್ಕಳಕ್ಕೆ ಹೋಗಿದ್ದಾಗ 5-6 ಬಾರಿ ಕಾರ್ಕಳದ [illegible] ಹೋಟೇಲ್‌ನಲ್ಲಿ ನಾನು ಆಕೆಯೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿರುತ್ತೇನೆ."

[illegible] ಸೇರಿಸಿದ್ದು ಯಾರು? ಯಾವ ಕಾರಣಕ್ಕೆ?

[illegible] ಒತ್ತಡಕ್ಕೆ, ಗುರಿಯಾಗಿ ಸಿಓಡಿ ಅಧಿಕಾರಿಗಳೇ ಇದನ್ನು ಬರೆದರೆ?

[illegible] ಪದ್ಮಪ್ರಿಯರವರ [illegible] ಮಾಡುವ ಉದ್ದೇಶ ಮತ್ತು ಅತುಲ್ ರಾವ್ ಅವರನ್ನು [illegible] ಮಾಡಿ ಈ ಪ್ರಕರಣದಲ್ಲಿ [illegible] ವ್ಯವಸ್ಥಿತ ಸಂಚು ಇದು?

[illegible] ನಿಜವಾದ ಆರೋಪಿಗಳನ್ನು ರಕ್ಷಿಸುವ [illegible] ಇರಬಹುದೇ?

[illegible] ಉತ್ತರ ಕೊಡುವರೇ?

ಬುರ್ಖಾ ಮತ್ತು ಬಿಕಿನಿ

‘ಇಬ್ಬರು ಯುವತಿಯರ ಜಗಳ’

▶▶10 ನಿಮಿಷಗಳ ನಾಟಕ

▶▶ಕನ್ನಡಕ್ಕೆ ಅನುವಾದ : ಗೌರಿ ಲಂಕೇಶ್



‘ಬುರ್ಖಾ ಮತ್ತು ಬಿಕಿನಿ’ ಎಂಬ ಈ ಕಿರುನಾಟಕವನ್ನು ಬರೆದಿರುವವರು ಸಬೀನಾ ಇಂಗ್ಲೆಂಡ್ ಎಂಬುವವರು. ಭಾರತೀಯ ಮುಸಲ್ಮಾನ ದಂಪತಿಗಳಿಗೆ ಇಂಗ್ಲೆಂಡಿನಲ್ಲಿ ಜನಿಸಿದ ಸಬೀನಾ ಪಡೆದದ್ದು ಅಮೆರಿಕಾದಲ್ಲಿ. ಹುಟ್ಟಿನಿಂದಲೇ ಕಿವುಡರಾಗಿರುವ ಸಬೀನಾ "ಜನರ ಸಂಭಾಷಣೆ ಕೇಳುವುದರಿಂದ, ಅದರಿಂದ ಕಲಿಯುವುದರಿಂದ ಜೀವನ ಪರ್ಯಂತ ವಂಚಿತಳಾಗಿ ಎನ್ನುತ್ತಾರಾದರೂ ತಮ್ಮ ಓದು ಮತ್ತು ಅನುಭವಗಳನ್ನು ಆಧರಿಸಿಯೇ ಇವತ್ತು ನಾಟಕಕಾರ ಬರಹಗಾರರಾಗಿ ಖ್ಯಾತಿ ಪಡೆದಿದ್ದಾರೆ.

ಈ ಕಿರುನಾಟಕದಲ್ಲಿ ಬುರ್ಖಾ ಮತ್ತು ಬಿಕಿನಿ (ಅಂದರೆ ಸಂಪೂರ್ಣವಾಗಿ ಬಚ್ಚಿಡಲಾಗಿ ಮತ್ತು ಅರೆನಗ್ನವಾಗಿರುವ) ಮಹಿಳೆಯರು ಮೂಲಭೂತವಾಗಿ ಬೇರೆ ಬೇರೆ ಅಲ್ಲ ಎಂ ಬಿಕಿನಿಯಾಗಲೀ, ಬುರ್ಖಾ ಆಗಲೀ ಎಲ್ಲಿಯವರೆಗೆ ಅದು ಪುರುಷರ ಪ್ರತ್ಯಕ್ಷ ಅಥವಾ ಪರ ಆದೇಶದ ಮೇರೆಗೆ ಹೇರಲ್ಪಟ್ಟಿರುತ್ತದೋ, ಅಲ್ಲಿಯವರೆಗೆ ಅದು ಬಿಡುಗಡೆಗೆ ದಾರಿಯಾಗಲಾ ಎಂದು ಸಬೀನಾ ಇಂಗ್ಲೆಂಡ್ ತೋರಿಸಿದ್ದಾರೆ.

ಪಾತ್ರಗಳು: ಬುರ್ಖಾ ಧರಿಸಿರುವ ಮಹಿಳೆ, ಬಿಕಿನಿ ತೊಟ್ಟಿರುವ ಮಹಿಳೆ

ಸ್ಥಳ: ಅಮೆರಿಕದ ಯಾವುದೋ ಆರ್ಟ್ ಗ್ಯಾಲರಿಯಲ್ಲಿ.

ಕಾಲ: ಪ್ರಸ್ತುತ

ರಂಗದ ಮೇಲೆ ಇಬ್ಬರು ಮಹಿಳೆಯರಿರುತ್ತಾರೆ. ಅವರು ವಿವಿಧ ಭಂಗಿಗಳಲ್ಲಿ ತಟಸ್ಥರಾಗಿದ್ದು ಅವರ ಮುಖಗಳು ಭಾವರಹಿತವಾಗಿದೆ. ರಂಗದ ಮೇಲೆ ಹರಡಿರುವ ಕೆಲಜನ ಕಲಾಕೃತಿಗಳನ್ನು ನೋಡುತ್ತಿರುವಂತೆ ಅವರನ್ನು ವೀಕ್ಷಿಸಿ ಹೊರಡುತ್ತಾರೆ. ಕೆಲವೇ ನಿಮಿಷಗಳಲ್ಲಿ ಆ ಇಬ್ಬರು ಮಹಿಳೆಯರ ಹೊರತಾಗಿ ರಂಗ ಬರಿದಾಗುತ್ತದೆ. ಅವರಿಬ್ಬರು ತಮ್ಮ ತಟಸ್ಥ ಭಂಗಿಗಳನ್ನು ಬಿಟ್ಟು ಕೈಕಾಲು ಚಾಚುತ್ತಾ, ಪರಸ್ಪರ ತಿರಸ್ಕಾರದ ನೋಟವನ್ನು ಬೀರುತ್ತಾರೆ.

ಬಿಕಿನಿ: ಓ, ನನ್ನ ಮೂಳೆಗಳೆಲ್ಲಾ ನೋಯುತ್ತಿವೆ.

ಬುರ್ಖಾ: ಪ್ರತಿಮೆಗಳಿಗೆ ಮೂಳೆಗಳಿರುವುದಿಲ್ಲ, ಪೆದ್ದಿ.

ಬಿಕಿನಿ: ನನಗನ್ನಿಸಿದ್ದನ್ನು ನಾನು ಹೇಳ್ತೇನೆ. (ಗಂಟಲು ಸರಿಮಾಡಿಕೊಳ್ಳುತ್ತಾ) ಓ, ನನ್ನ ಮೂಳೆಗಳೆಲ್ಲಾ ನೋಯುತ್ತಿವೆ.

ಬುರ್ಖಾ: (ಅಣಕಿಸುತ್ತಾ) ಅಯ್ಯೋ, ನನ್ನ ಮೂಳೆಗಳೂ ನೋಯುತ್ತಿವೆ. ಆದರೆ ನಾನೊಂದು ಪ್ರತಿಮೆ, ನನ್ನೊಳಗೆ ಮೂಳೆಗಳೇ ಇಲ್ಲವಲ್ಲಾ!

ಬಿಕಿನಿಯತ್ತ ಬುರ್ಖಾ ಅಸಡ್ಡೆಯ ನಗುವನ್ನು ಬೀರುತ್ತಾಳೆ. ಅದನ್ನು ಕಂಡು ಬಿಕನಿಗೆ ರೇಗುತ್ತದೆ.

ಬಿಕಿನಿ: ನಿನ್ನ ಅಭಿಪ್ರಾಯದಲ್ಲಿ ನಾನೋರ್ವ ಸೂಳೆ ಮತ್ತು ಬುದ್ಧಿ ಇಲ್ಲದ ಮಹಿಳೆ, ಅಲ್ವಾ?

ಬುರ್ಖಾ: ನಾನೇನು ನಿನ್ನನ್ನು ಸೂಳೆ ಅಂತ ಕರಿಯಲಿಲ್ಲ (ಒಪ್ಪಿಕೊಳ್ಳುವಂತೆ) ಆದರೆ ಖಂಡಿತವಾಗಿಯೂ ನಿನಗೆ ಬುದ್ಧಿ ಇಲ್ಲ.

ಬಿಕಿನಿ: ನೀನು ನನ್ನಂತೆ ಬಿಕಿನಿ ಹಾಕಿಕೊಂಡಿಲ್ಲವಲ್ಲಾ ಅಂತ ನಿನಗೆ ಹೊಟ್ಟೆಕಿಚ್ಚು. ಆ ಭಯಂಕರ ಬುರ್ಖಾದಲ್ಲಿ ತುರುಕಲಾಗಿರುವ ನಿನ್ನನ್ನು ನೋಡು. ಆಹಾ, ಬುರ್ಖಾ ತೊಟ್ಟ ಪ್ರತಿಮೆಯಾಗಿರುವ ನಿನ್ನ ಬದುಕು ಅದೆಷ್ಟು ಸ್ವರ್ಗೀಯವಾಗಿರಬೇಕು!

ಬುರ್ಖಾ: ಪ್ರಾಯಶಃ ನಾನು ಶೋಷಿತಳೆಂದು ನೀನು ಭಾವಿಸಿರುವೆ.

ಬಿಕಿನಿ: ಹೌದು. ನೀನು ಶೋಷಿತಳಲ್ಲವೆ?

ಬುರ್ಖಾ: ಇಲ್ಲ, ಬದಲಾಗಿ ನೀನು ಶೋಷಿಸಲ್ಪಟ್ಟವಳು ಎಂಬುದು ನನ್ನ ಅಭಿಪ್ರಾಯ. ನಿನ್ನ ಬಗ್ಗೆ ನನಗೆ ಕನಿಕರ.

ಬಿಕಿನಿ: ಅದು ಹೇಗೆ? ಬಿಕಿನಿ ತೊಟ್ಟಿರುವ ನಾನು ಇಡೀ ಜಗತ್ತಿಗೇ ನನ್ನ ದೇಹವನ್ನು ಪ್ರದರ್ಶಿಸುತ್ತಿದ್ದೇನೆ. ನಾನು ಬೇಕಾದ್ದನ್ನು ಮಾಡುತ್ತೇನೆ. ನನ್ನನ್ನು ನಿರ್ಬಂಧಿಸುವವರು ಯಾರೂ ಇಲ್ಲ, ಆದರೆ ನೀನು! ನಿನ್ನನ್ನು ರೂಪಿಸಿದ ಪುರುಷ ನೀನು ಬುರ್ಖಾ ತೊಡಬೇಕೆಂದು ನಿರ್ಧರಿಸಿದ. ಆ ಬಲಾತ್ಕಾರವನ್ನು ಪ್ರಶ್ನಿಸದೇ ನೀನದನ್ನು ತೊಟ್ಟಿದ್ದೀ.

ಬುರ್ಖಾ: ಬುರ್ಖಾ ತೊಡಬೇಕೆಂದು ಯಾರೂ ನನ್ನನ್ನು ಬಲಾತ್ಕರಿಸಲಿಲ್ಲ! ನನ್ನ ದೇವರನ್ನು ಸಂತೋಷಗೊಳಿಸಲು ನಾನು ಬುರ್ಖಾವನ್ನು ತೊಡಲು ನಿರ್ಧರಿಸಿದೆ. ನನ್ನ ದೇಹ ಒಂದು ರತ್ನ, ಈ ರತ್ನವನ್ನು ಕಾಪಾಡುವುದು ನನ್ನ ಇಚ್ಛೆ.

ಬಿಕಿನಿ: ನಾನು ನನಗೋಸ್ಕರ, ನನ್ನ ಇಷ್ಟಕ್ಕೋಸ್ಕರ ಈ ಬಿಕಿನಿಯನ್ನು ತೊಡುತ್ತೇನೆ. ನನ್ನ ದೇಹವೂ ನನ್ನ ಪ್ರಕಾರ ರತ್ನವೇ. ಅದಕ್ಕೆ ಈ ರತ್ನವನ್ನು ಇಡೀ ಜಗತ್ತು ನೋಡಲಿ ಎಂದು ಆಶಿಸುತ್ತೇನೆ! ನಾನೇ ಒಂದು ರತ್ನ!

ಬುರ್ಖಾ: (ತಿರಸ್ಕಾರದ ನಗೆ ಬೀರುತ್ತಾ) ಹೌದು. ಪುರುಷರಿಂದ ಮೆಚ್ಚುಗೆ ಪಡೆಯುವ ಮೂಲಕ ನೀನು ಸುಂದರಿ ಎಂಬ ಸಾರ್ಥಕ ಭಾವನೆ ಪಡೆಯಲೆಂದೇ ನೀನು ಬಿಕಿನಿ ಧರಿಸುವ ಹತಾಶ ಸ್ಥಿತಿಗೆ ತಲುಪಿದ್ದಿ.

ಬಿಕಿನಿ: ಮೆಚ್ಚುಗೆ ಆಶಿಸುವುದರಲ್ಲಿ ತಪ್ಪೇನು? ಬಹಳಷ್ಟು ಪುರುಷರು ನನ್ನ ದೇಹವನ್ನು ನೋಡುವುದರಲ್ಲೇ ನನಗೆ ಆನಂದ ಸಿಕ್ಕರೆ ತಪ್ಪೇನು?

ಬುರ್ಖಾ: ಹಾಗಾದರೆ, ನಾನು ಸ್ವಇಚ್ಛೆಯಿಂದ ಬುರ್ಖಾ ಧರಿಸುವುದರಲ್ಲಿ ತಪ್ಪೇನು?

ಬಿಕಿನಿ: ಆದರೆ ಅದರಲ್ಲಿ ನಿನಗೆ ತುಂಬಾ ಶೆಖೆ ಆಗುವುದಿಲ್ಲವೇ?

ಬುರ್ಖಾ: ಪುರುಷರು ನಿನ್ನನ್ನು ದಿಟ್ಟಿಸಿ ನೋಡಿದಾಗ ನಿನ್ನ ಬಗ್ಗೆಯೇ ನಿನಗೆ ಅಸಹ್ಯವೆನ್ನಿಸುವುದಿಲ್ಲವೇ?

ಬಿಕಿನಿ: ನೀನು ವಿಚಿತ್ರ!

ಬುರ್ಖಾ: ನೀನು ಕರುಣಾಜನಕ!

ಬಿಕಿನಿ: ನೀನು ಶೋಷಣೆಗೊಳಲ್ಪಟ್ಟವಳು!

ಬುರ್ಖಾ: ನೀನು ಇದನ್ನು ಶೋಷಣೆ ಎನ್ನುತ್ತಿ, ನಾನು ಇದನ್ನು ನನ್ನ ವಿಮೋಚನೆ ಎನ್ನುತ್ತೇನೆ!

ಬಿಕಿನಿ: ನೀನು ಎಂದಾದರೂ ಬಿಕಿನಿ ತೊಟ್ಟಿದ್ದೀಯಾ? ಒಮ್ಮೆಯಾದರೂ? ಅರೆನಗ್ನವಾಗಿ, ಸಮುದ್ರದ ತೀರದಲ್ಲಿ ನಿಂತು, ಪುರುಷರೆಲ್ಲ ನಿನ್ನನ್ನು ಮುಕ್ಕುವಂತೆ ನೋಡುತ್ತಿರುವಂತೆ -ಅಂತಹ ದೃಶ್ಯವನ್ನು ಕಲ್ಪಿಸಿಕೊಂಡು ಕುತೂಹಲಗೊಂಡಿದ್ದೆಯಾ?

ಬುರ್ಖಾ : ನಾನು ನನ್ನ ತಲೆಗೂದಲನ್ನೂ ಪ್ರದರ್ಶಿಸಿಲ್ಲ.

ಬಿಕಿನಿ : ಯಾಕೆ?

ಬುರ್ಖಾ : ನನಗೆ ವಿನೀತತೆಯಲ್ಲಿ ನಂಬಿಕೆ. ನನ್ನ ದೇವರು ಹೇಳಿದ್ದನ್ನು ನಾನು ಪಾಲಿಸುತ್ತೇನೆ. ನನ್ನ ರತ್ನವನ್ನು ಮುಚ್ಚಿಡಬೇಕೆಂದು ನನ್ನ ಧರ್ಮವೇ ಹೇಳುತ್ತೆ.



ಬಿಕಿನಿ : ಅದೆಲ್ಲ ಸರಿ, ಆದರೆ ನನಗೆ ಈ ಧರ್ಮ, ದೇವರ ಬಗ್ಗೆ ಅಷ್ಟೇನು ನಂಬಿಕೆಯಿಲ್ಲ. ನನಗೆ ಬೇಕಾದ್ದನ್ನು ಮಾಡುತ್ತೇನೆ. ನನ್ನ ರತ್ನವನ್ನು ಮುಚ್ಚಿಡು ಎಂದು ಹೇಳುವ ಹಕ್ಕು ನಿನಗಿಲ್ಲ.

ಬುರ್ಖಾ : ನೀನು ಬುರ್ಖಾ ತೊಡಬೇಕೆಂದೇನು ನಾನು ಹೇಳುತ್ತಿಲ್ಲ. ನಿನಗೆ ಬಿಕಿನಿ ಬೇಕಿದ್ದರೆ, ನನಗೆ ಬುರ್ಖಾ ಬೇಕು, ಅಷ್ಟೇ.

ಬಿಕಿನಿ : ಬುರ್ಖಾ ತೊಡುವಂತೆ ಯಾರೂ ನನ್ನನ್ನು ಬಲಾತ್ಕರಿಸಬಾರದು. ಬಿಕಿನಿ ತೊಡುವ ನನ್ನ ಹಕ್ಕು ನನಗೆ ತುಂಬಾ ಇಷ್ಟ.

ಬುರ್ಖಾ : ಈ ದೇಶದ ಬಗ್ಗೆ ಇದೇ ಅಂಶ ನನಗೆ ತುಂಬಾ ಇಷ್ಟ. ಇಲ್ಲಿ ನಮಗೆ ಬೇಕಾದ್ದನ್ನು ನಾನು ತೊಡಬಹುದು. ಆದರೆ ನಾನು ಈ ಬುರ್ಖಾ ತೊಟ್ಟರೆ ಜನ ನನ್ನನ್ನು ಭಯೋತ್ಪಾದಕಿ ಎಂದು ಕರೆಯುತ್ತಾರೆ, ನಾನು ಇದನ್ನು ಧರಿಸಕೂಡದು ಎನ್ನುತ್ತಾರೆ. ಆದರೆ ಈ ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂದು ನಂಬಿದ್ದೆ.

ಬಿಕಿನಿ : ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ, ಬುರ್ಖಾ ಧರಿಸುವುದಕ್ಕೂ ಏನು ಸಂಬಂಧ?

ಬುರ್ಖಾ : ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೇನೇ ಅದನ್ನ ಎಲ್ಲ ರೀತಿಯಲ್ಲೂ ವ್ಯಕ್ತಪಡಿಸುವ ಸ್ವಾತಂತ್ರ್ಯ.

ಬಿಕಿನಿ : ಹೌದಲ್ಲಾ, ನಾನು ಅದರ ಬಗ್ಗೆ ಹಾಗೆ ಯೋಚಿಸಲೇ ಇರಲಿಲ್ಲ.

ಬುರ್ಖಾ : ನಿನ್ನ ಬಿಕಿನಿ ನಿನ್ನ ಸ್ವಚ್ಛಂದದ ಅಭಿವ್ಯಕ್ತಿ, ನನ್ನ ಬುರ್ಖಾ ಅಲ್ಲಾಹುನಲ್ಲಿನ ನನ್ನ ಭಕ್ತಿಯ ಅಭಿವ್ಯಕ್ತಿ.

ಬಿಕಿನಿ : ನೀನು ಹೇಳೋದರಲ್ಲಿ ಅರ್ಥ ಇದೆ.

ಬುರ್ಖಾ : ನಾನು ಎಂದೂ ಬಿಕಿನಿ ಧರಿಸುವುದಿಲ್ಲ. ನೀನು ಆ ಕೆಟ್ಟ ಬಿಕಿನಿಗಿಂತ ಉತ್ತಮ ವ್ಯಕ್ತಿ ಅಂತ ನನಗೆ ಅನ್ನಿಸುತ್ತೆ. ಆದರೂ ನಾನು ನಿನ್ನನ್ನು ತುಚ್ಛವಾಗಿ ನೋಡುವುದಿಲ್ಲ.

ಬಿಕಿನಿ : ಆದರೆ, ಆದರೆ ನಾನು ನಿನ್ನನ್ನು ತುಚ್ಛವಾಗಿ ಕಂಡೆ. ನೀನು ನಿಶ್ಯಕ್ತಳು, ಅಸಹಾಯಕಳು, ಶೋಷಿತಳು ಎಂದೇ ನಾನು ಭಾವಿಸಿದ್ದೆ. ಆದರೆ ನೀನೋ... ದೊಡ್ಡ ಬಾಯಿಯ, ಬಾಯಿ ಬಡುಕಿ.

ಬುರ್ಖಾ : (ನಗುತ್ತಾ) ಎಲ್ಲರೂ ಭಾವಿಸಿರುವುದು ಹಾಗೆಯೇ!

ಬಿಕಿನಿ : ನಿನಗೆ ಗೊತ್ತಾ? ಬಿಕಿನಿ ತೊಡುವ ನಾನು ನಿನಗಿಂತ ಭಿನ್ನವಾಗಿಲ್ಲ, ಬಹಳಷ್ಟು ಪುರುಷರು ಮಹಿಳೆಯರೂ ನಾನೋರ್ವ ಪೆದ್ದ ಶಿಖಾಮಣಿ ಎಂದು ಭಾವಿಸುತ್ತಾರೆ.

ಬುರ್ಖಾ : ಅಲ್ಲಾ, ಮಹಿಳೆಯರು ಅದೇನೇ ಧರಿಸಲಿ, ಆದರೂ ಬಹಳಷ್ಟು ಪುರುಷರು ಮಹಿಳೆಯರನ್ನು ಪೆದ್ದ ಶಿಖಾಮಣಿಗಳೆಂದೇ ಭಾವಿಸುವುದಿಲ್ಲವೆ?

▶▶



: ನೀನು ಹೇಳುತ್ತಿರುವುದು ನಿಜ.

ರ್ಖಾ : (ದುಃಖಿತಳಾದವಳಂತೆ) ಹಲವೊಮ್ಮೆ ನಾನು ...ಆಗಿರುವುದೇ ಶಾಪ ಅನ್ನಿಸುತ್ತೆ.

: ಯಾಕೆ?

ರ್ಖಾ : ಯಾಕೆಂದರೆ, ನಾವು ಏನು ಮಾಡಿದರೂ ...ವು ಏನು ಮಾಡಿದರೆ ಸರಿ?

: ಆದರೆ ನೀನು ನಿನ್ನ ದೇವರನ್ನು ...ಡಿಸಲು ಬುರ್ಖಾ ಧರಿಸಿದ್ದಿ. ಅದು ನಿನ್ನ ಅಭಿವ್ಯಕ್ತಿ. ಅದರಿಂದಲೂ ನಿನಗೆ ...ವಿಲ್ಲವೇ?

ರ್ಖಾ : ಸಂತೋಷವಿದೆ. ಆದರೆ ಜನ ನನ್ನನ್ನು ...ಗೆ ಬದುಕುವುದಿಲ್ಲವಲ್ಲಾ? ನನ್ನನ್ನು ಕಂಡಕೂಡಲೇ ...ವಾದಿ! ಇರಾಕಿಗೆ ವಾಪಸ್ ಹೋಗು!" ಎಂದು ...ರೆ.

: ಹಲವೊಮ್ಮೆ ಪುರುಷರು ನನ್ನ ಬಗ್ಗೆ ...ಳುತ್ತಾರೆ ಎಂಬುದರ ಬಗ್ಗೆ ನಾನು ಅಷ್ಟು ...ಡಕೂಡದು ಅನ್ನಿಸುತ್ತೆ.

ರ್ಖಾ : ಏನು?

: ವಯಸ್ಸಾಗುವುದರ ಬಗ್ಗೆ ನನಗೆ ತುಂಬಾ ... ನನಗೆ ಮುಖದಲ್ಲಿ ಸುಕ್ಕುಗಳು, ದೇಹದಲ್ಲಿ ...ಗ್ಗುಹಣ ಬೇಕಿಲ್ಲ. ನಾನೆಂದೂ ದಪ್ಪಗಾಗಕೂಡದು ... ನನ್ನ ಆಶಯ. ದರಿದ್ರ, ನನಗೆ ನಲವತ್ತು ...ದ ನಂತರ ನಾನು ಬೊಟಾಕ್ಸ್ ಮತ್ತು ಪ್ಲಾಸ್ಟಿಕ್ ...ಗೆ ಶರಣಾಗಬೇಕು ಅನ್ನಿಸುತ್ತಿದೆ.

ರ್ಖಾ : ಆದರೆ ನೀನೊಂದು ಪ್ರತಿಮೆ.

: ಪ್ರತಿಮೆಗಳಿಗೂ ವಯಸ್ಸಾಗುತ್ತೆ. ... ಇರು, ಬಿರುಕುಗಳು ಮೂಡುತ್ತವೆ, ...ದಿ ಬಣ್ಣಕ್ಕೆ ತಿರುಗುತ್ತದೆ.



ರ್ಖಾ : ಹೌದೌದು, ಸದಾ ಸುಂದರವಾಗಿ ...ರಾಗಿ ಕಾಣಿಸುತ್ತಿರಬೇಕೆಂಬ ಒತ್ತಡ ...ಸುತ್ತದೆ.

: ಆದರೆ ನೀನು ಬುರ್ಖಾ ತೊಡುತ್ತೀ. ...ಂದರವಾಗಿ, ಯುವತಿಯಾಗಿ ...ಕೆಂಬ ಒತ್ತಡ ನಿನ್ನ ಮೇಲಿಲ್ಲ ಎಂದು

ರ್ಖಾ : ನಾನು ಯಾವ ಕಾಲದಲ್ಲಿ ...ನೋ ಹಾಗೆಯೇ ನನ್ನನ್ನು ಇಷ್ಟಪಡುವ ಪಡೆಯುವ ಅದೃಷ್ಟ ನನಗಿದ್ದರೆ ಮಾತ್ರ!

: ಹಾಗಾದರೆ, ನಿನಗೆ ಬೆಸ್ಟ್ ಆಫ್ ಲಕ್. ...ಮಹಿಳೆಯರ ಸೌಂದರ್ಯದ ಬಗ್ಗೆಯಷ್ಟೇ ಕಾಳಜಿ ...ತಿರುವ ಬಹಳಷ್ಟು ಪುರುಷರಿಗೆ.

ರ್ಖಾ : ದರಿದ್ರರು, ಥೂ!

: ಏನು? ನೀನೂ ಕೆಟ್ಟಪದ ಉಚ್ಚರಿಸಿದೆಯಾ?

ರ್ಖಾ : ಹೌದಾ?

: ಹೌದು.

ರ್ಖಾ : ಓ... ನನಗೆ ನೆನಪಿಲ್ಲ. ಅಂತಹ ಪದವನ್ನು ...ಚ್ಚರಿಸಿದ್ದರೆ, ಸಾರಿ.

ಬಿಕಿನಿ : ಸಾರಿ ಹೇಳುವ ಅವಶ್ಯಕತೆ ಇಲ್ಲ, ನೀನು ತುಚ್ಛ ಪದವನ್ನು ಉಪಯೋಗಿಸಿದರೆ ನನಗೇನಾಬೇಕು? ಆದರೆ ನಿನ್ನಂತಹ ಧಾರ್ಮಿಕ ಶ್ರದ್ಧೆಯುಳ್ಳ ಮಹಿಳೆಯಿಂದ ಬಂದಿದ್ದರ ಬಗ್ಗೆ ನನಗೆ ಅಚ್ಚರಿಯಷ್ಟೇ.

ಬುರ್ಖಾ : ನನ್ನಂತಹ ಅಶಕ್ತ, ಅಸಹಾಯಕ ಮತ್ತು ಶೋಷಿತ ಮಹಿಳೆಯಿಂದ ಬಂದಿದ್ದರ ಬಗ್ಗೆ ಅಚ್ಚರಿಯೇ?

ಬಿಕಿನಿ : ನಿನ್ನ ಬಗ್ಗೆ ಹಾಗೆ ಭಾವಿಸಿದ್ದರ ಬಗ್ಗೆ ಸಾರಿ.

ಬುರ್ಖಾ : ಪರವಾಗಿಲ್ಲ, ನಾನು ನಿನ್ನ ಬಗ್ಗೆ ಕೆಟ್ಟದಾಗಿಯೇ ಯೋಚಿಸಿದ್ದೆ.

ಬಿಕಿನಿ : ಅಂದರೆ?

ಬುರ್ಖಾ : ನೀನು ನಾಚಿಕೆ ಇಲ್ಲದವಳು, ಕಂಡಕಂಡ ಪುರುಷರೊಂದಿಗೆ ಮಲಗುವವಳು ಎಂದುಕೊಂಡಿದ್ದೆ.

ಬಿಕಿನಿ : ನನಗೆ ಇಷ್ಟವಾದವರೊಂದಿಗೆ ನಾನು ಮಲಗಿಕೊಂಡಿರುವುದು ನಿಜ.

ಬುರ್ಖಾ : ಹೋ....

ಬಿಕಿನಿ : ಅಂದಮಾತ್ರಕ್ಕೆ ನಾನು ಸೂಳೆಯಾಗುತ್ತೇನೆಯೇ?

ಬುರ್ಖಾ : ನನಗೆ ಗೊತ್ತಿಲ್ಲ....

ಬಿಕಿನಿ : ತಾಂತ್ರಿಕವಾಗಿ ಹೌದು. ನಾನು ಸೂಳೆ ಆಗಿರಬಹುದು. ಆದರೆ ಅದು ತಪ್ಪೇ?

ಬುರ್ಖಾ : ಸೂಳೆ ಅಂತ ಕರೆಸಿಕೊಳ್ಳುವುದು ಅವಮಾನವಲ್ಲವೇ?

ಬಿಕಿನಿ : ನನ್ನ ಬಗ್ಗೆ ನನಗೆ ಹಾಗನ್ನಿಸದಿರುವಾಗ ಯಾರು ಏನೇ ಹೇಳಿದರೂ ಅದು ಅವಮಾನವಲ್ಲ.

ಬುರ್ಖಾ : ಹಾಗಿದ್ದರೆ ಪರವಾಗಿಲ್ಲ.

ಬಿಕಿನಿ : ನೀನು ಎಂದಾದರೂ ಲೈಂಗಿಕ ಸಂಬಂಧ ಹೊಂದಿದ್ದೆಯಾ?

ಬುರ್ಖಾ : ಇಲ್ಲ.

ಬಿಕಿನಿ : ಆ ನಿಟ್ಟಿನಲ್ಲಿ ಏನನ್ನಾದರೂ ಮಾಡಿದ್ದೀಯಾ?

ಬುರ್ಖಾ : ಇಲ್ಲ... ಮದುವೆ ಆಗುವತನಕ ಕಾಯುವ ನಂಬಿಕೆ ನನ್ನದು.

ಬಿಕಿನಿ : ಹಾಗಾದರೆ, ನೀನು ಕಾಯ್ತಿರು. ನನಗೆ ಬೇಕಾದವರೊಂದಿಗೆ ಸಂಬಂಧ ಹೊಂದಿರುತ್ತೇನೆ.

ಬುರ್ಖಾ : ಅಲ್ಲಾ, ಯಾರೊಂದಿಗೆ ನಿನ್ನ ಈ ಸಂಬಂಧ?

ಬಿಕಿನಿ : ಇತರೆ ಪ್ರತಿಮೆಗಳೊಂದಿಗೆ. ಸಂಜೆ ಈ ಕಲಾಭವನ ಮುಚ್ಚಿದ ನಂತರ ನಾನು ನನ್ನನ್ನು ಬಂಧಿಸಿರುವ ಈ ಗಾಜಿನ ಪೆಟ್ಟಿಗೆಯಿಂದ ಹೊರಗೆ ಹೋಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತೇನೆ.

ಬುರ್ಖಾ : ಆದರೆ ಯಾರೊಂದಿಗೆ?

ಬಿಕಿನಿ : ಮುಂದಿನ ಬಾಗಿಲ ಹತ್ತಿರವೇ ಚೆಲುವ ಗ್ರೀಕ್ ಪುರುಷನ ಪ್ರತಿಮೆ ಇದೆಯಲ್ಲಾ?

ಬುರ್ಖಾ : ಸುಂದರ ದೇಹವನ್ನು ಹೊಂದಿರುವ ಆ ನಗ್ನ ಪುರುಷನೇ?

ಬಿಕಿನಿ : (ಬುರ್ಖಾಳತ್ತ ವಾಲುತ್ತ ಗುಟ್ಟೊಂದನ್ನು ಹೇಳುವಂತೆ) ಏ ಹುಡುಗಿ, ನಿನಗೆ ಗೊತ್ತೇನು? ಮಹಿಳೆಯೊಬ್ಬಳನ್ನು ಹೇಗೆ ತಣಿಸಬೇಕೆಂದು ಆತನಿಗೆ ಚೆನ್ನಾಗಿ ಗೊತ್ತು.

ಬುರ್ಖಾ : ನಿಜವಾಗಲೂ?

ಬಿಕಿನಿ : ಸತ್ಯವಾಗಲು.



ಬುರ್ಖಾ : (ಒಪ್ಪಿಕೊಳ್ಳುವಂತೆ) ನಾನೂ ಹಲವೊಮ್ಮೆ ಅದರ ಬಗ್ಗೆ ಯೋಚಿಸಿದ್ದೇನೆ.

ಬಿಕಿನಿ : ಎಲ್ಲರೂ ಯೋಚಿಸಿರುತ್ತಾರೆ ಅದು ಪ್ರಕೃತಿ ಸಹಜ.

ಬುರ್ಖಾ : ಅದು ಹೇಗಿರುತ್ತೆ ಎಂಬ ಕುತೂಹಲ ಇದ್ದೇ ಇದೆ. ನನ್ನ ಭವಿಷ್ಯದ ಪತಿಯೊಂದಿಗಿನ ಮೊದಲ ರಾತ್ರಿ ಸ್ಪೆಷಲ್ ಆಗಿರಬೇಕು. ಆತನೂ ನನ್ನಂತೆಯೇ ಪವಿತ್ರನಾಗಿರಬೇಕು. ನಾನು ಮಹಿಳೆ, ಆತ ಪುರುಷ ಎಂಬ ಕಾರಣಕ್ಕೆ ನಾನು ಆತನ ದೌರ್ಜನ್ಯವನ್ನು ಸಹಿಸಲಾರೆ.

ಬಿಕಿನಿ : ಗುಡ್. ಪುರುಷರ ದೌರ್ಜನ್ಯವನ್ನು ಸಹಿಸುವುದಿಲ್ಲ ಅಂದೆಯಲ್ಲ, ಅದನ್ನು ಕೇಳಿ ನನಗೆ ಸಂತೋಷವಾಗುತ್ತಿದೆ.

ಬುರ್ಖಾ : ನಾನೇ ಯಾಕೆ, ಯಾರೂ ಸಹಿಸಕೂಡದು.

ಬಿಕಿನಿ : ಇತರೆ ಮುಸಲ್ಮಾನ ಮಹಿಳೆಯರೂ ನಿನ್ನಂತೆಯೇ ಇದ್ದಾರೆಯೇ?

ಬುರ್ಖಾ : ನೋಡು ಮತ್ತೆ, ಇತರೆ ಬಿಳಿ ಮಹಿಳೆಯರೆಲ್ಲ ನಿನ್ನಂತೆಯೇ ಇದ್ದಾರೆಯೇ ಅಂತ ನಾನು ಕೇಳಿದರೆ ಹೇಗಿರುತ್ತೇ?

ಬಿಕಿನಿ : (ಒಪ್ಪುವವಳಂತೆ) ನಿಜ ನನ್ನ ಪ್ರಶ್ನೆ ಅಜ್ಞಾನದಿಂದ ಕೂಡಿದ್ದು.

ಬುರ್ಖಾ : ಜಗತ್ತಿನಾದ್ಯಂತ 1.2 ಬಿಲಿಯನ್ ಮುಸಲ್ಮಾನರಿದ್ದಾರೆ. ಈ ದೇಶದಲ್ಲೇ ಎಷ್ಟು ಮುಸಲ್ಮಾನ್ ಮಹಿಳೆಯರಿದ್ದಾರೆ ಅಂತ ನಿನಗೆ ಗೊತ್ತಾ?

ಬಿಕಿನಿ : ಇಲ್ಲ.

ಬುರ್ಖಾ : ನನಗೂ ಗೊತ್ತಿಲ್ಲ. ಆದರೆ ಎಲ್ಲಾ ಮುಸಲ್ಮಾನ ಮಹಿಳೆಯರು ಒಂದೇ ತರಹ ಇರಲ್ಲ. ನನಗೆ ಗೊತ್ತಿರುವ ಹಲವರು ಬಿಕಿನಿ ತೊಟ್ಟಿದ್ದಾರೆ, ಪುರುಷರೊಂದಿಗೆ ಸಂಬಂಧವನ್ನು ಹೊಂದಿದ್ದಾರೆ. ಒಮ್ಮೆ ಪತ್ರಿಕೆಯಲ್ಲಿ ನೀಲಿ ಚಿತ್ರಗಳಲ್ಲಿ ನಟಿಸಿ ಖ್ಯಾತಿ ಪಡೆದಿದ್ದ ಮುಸಲ್ಮಾನ ಮಹಿಳೆಯೊಬ್ಬಳ ಬಗ್ಗೆಯೂ ಓದಿದ್ದೆ.

ಬಿಕಿನಿ : ಏನು? ನೀಲಿ ಚಿತ್ರಗಳಲ್ಲಿ ಮುಸಲ್ಮಾನ ನಟಿಯೇ?

ಬುರ್ಖಾ : ಹೌದು. ಆದರೆ ಅವಳಿಗೆ ದೇವರು, ಧರ್ಮ ಅಂತಹವುಗಳ ಬಗ್ಗೆ ನಂಬಿಕೆ ಇರಲಿಲ್ಲ. ಒಂದು ತರಹ ನಿಸ್ತಂತ.

ಬಿಕಿನಿ : ಹೌದಾ... ಆದರೆ ದೇವರ ಬಗ್ಗೆ ನನಗೆ ನಂಬಿಕೆ ಇದೆ.

ಬುರ್ಖಾ : ಏನು?

ಬಿಕಿನಿ : ಅಂದರೆ .... ನಾನು ದೇವರ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ, ಆದರೂ ದೇವರು ಅದೆಲ್ಲೋ ಇದ್ದಾನೆ ಅಂತ ಅನ್ನಿಸುತ್ತೆ.

ಬುರ್ಖಾ : ನಮ್ಮನ್ನು ಸೃಷ್ಟಿಸಿದ್ದು ದೇವರು ಎಂದು ನಂಬಿದ್ದೀಯಾ?

ಬಿಕಿನಿ : ದೇವರು ಮನುಷ್ಯರನ್ನು ಸೃಷ್ಟಿಸಿದ. ಮನುಷ್ಯರು ಪ್ರತಿಮೆಗಳನ್ನು ಸೃಷ್ಟಿಸಿದರು. ಅಂದಹಾಗೆ ಪ್ರತಿಮೆಗಳಾದ ನಮ್ಮನ್ನು ಯಾವುದರಿಂದ ಸೃಷ್ಟಿಸಲಾಗಿದೆ?

ಬುರ್ಖಾ : ಜೇಡಿಮಣ್ಣು.

ಬಿಕಿನಿ : ಮನುಷ್ಯರು?

ಬುರ್ಖಾ : ಮಾಂಸ ಮತ್ತು ಮೂಳೆ.

ಬಿಕಿನಿ : ತಪ್ಪು, ಸರಿಯಾದ ಉತ್ತರ ಜೇಡಿಮಣ್ಣು. ಮನುಷ್ಯರನ್ನೂ, ಅವರ ಮೂಳೆಗಳನ್ನೂ ಜೇಡಿಮಣ್ಣಿನಿಂದಲೇ ಸೃಷ್ಟಿಸಲಾಗಿದೆ. ನಾವು ಅಂದರೆ ಮನುಷ್ಯರು ಮತ್ತು ಪ್ರತಿಮೆಗಳು ಎಲ್ಲಾ ಒಂದೇ.

ಬುರ್ಖಾ: ಒಂದು ರೀತಿಯಲ್ಲಿ ಮನುಷ್ಯರು ಪ್ರತಿಮೆಗಳಂತೆ ಅಲ್ಲವೇ? ನಮ್ಮಂತೆ ಅವರೂ ವಿವಿಧ ಭಂಗಿಗಳಲ್ಲಿ ನಿಂತು ಇತರರ ಮೆಚ್ಚುಗೆ ಗಳಿಸಲು ಯತ್ನಿಸುತ್ತಿರುತ್ತಾರೆ.

(ಹತ್ತಿರ ಬರುತ್ತಿರುವ ಹೆಜ್ಜೆ ಸದ್ದು ಕೇಳಿಸುತ್ತದೆ)

ಬಿಕಿನಿ : ಬೇಗ ನಡಿ! ಅವರು ವಾಪಸ್ ಬರುತ್ತಿದ್ದಾರೆ!

ಬುರ್ಖಾ : ನಿನ್ನ ಜೊತೆಗಿನ ಸಂಭಾಷಣೆ ಚೆನ್ನಾಗಿತ್ತು.

ಬಿಕಿನಿ : ಮುಂದೊಂದು ದಿನ ನಾವು ಜೊತೆಯಾಗಿ ಕಾಫಿ ಕುಡಿಯೋಣ.

ಬುರ್ಖಾ : ಆದರೆ ಪ್ರತಿಮೆಗಳು ಕಾಫಿ ಕುಡಿಯುವುದಿಲ್ಲ.

ಬಿಕಿನಿ : ಹಾಗೆನ್ನುವುದಾದರೆ ಪ್ರತಿಮೆಗಳಿಗೆ ಭಾವನೆಗಳೂ ಇರುವುದಿಲ್ಲ. ಅವು ಮಾತನಾಡುವುದಾಗಲಿ, ಆರೋಗ್ಯಕರ ಚರ್ಚೆಯನ್ನಾಗಲಿ ನಡೆಸುವುದಿಲ್ಲ.

ಬುರ್ಖಾ : ಕಲಾಭವನ ಮತ್ತೆ ಬಾಗಿಲು ಹಾಕಿದಾಗ ನಿನ್ನನ್ನು ಭೇಟಿಯಾಗುತ್ತೇನೆ.

ಅವರಿಬ್ಬರೂ ತಮ್ಮ ಮೂಲ ಭಂಗಿಗಳಲ್ಲಿ ತಟಸ್ಥರಾಗಿರುತ್ತಾರೆ. ಮುಖಗಳು ಭಾವರಹಿತವಾಗುತ್ತವೆ. ಹಲವು ಜನ ರಂಗವನ್ನೇರಿ ಅವರಿಬ್ಬರನ್ನು ನೋಡುತ್ತಾ ನಿಲ್ಲುತ್ತಾರೆ.

ಬೆಳಕು ಕ್ಷೀಣಿಸುತ್ತದೆ.



ಆಹಾರವೇ ಅಸ್ತ್ರವಾದಾಗ.....

ಕಳೆದ ವಾರ ಬಹುಶಃ 'ಲಂಕೇಶ್' ಒಂದನ್ನು ಬಿಟ್ಟು, ಇತರೆಲ್ಲ ಮಾಧ್ಯಮಗಳು ಬೋರ್ಲಾಗ್‌ನನ್ನು 'ಹಸಿರು ಕ್ರಾಂತಿಯ ಹರಿಕಾರ' ಎಂದು ಹಾಡಿ ಹೊಗಳಿದವು. ಸಾಮ್ರಾಜ್ಯಶಾಹಿ ಕಂಪನಿಗಳ ಅಜೆಂಡಾವನ್ನು ಜಾರಿಗೊಳಿಸಲು 'ಶ್ರಮಿಸಿದ' ಬೋರ್ಲಾಗ್‌ನ ಹಸಿರು ಕ್ರಾಂತಿಯ ಅಡ್ಡ ಪರಿಣಾಮಗಳು ಮೂವತ್ತು ವರ್ಷಗಳಿಂದ ರೈತಾಪಿ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಭಾರತದಲ್ಲಿ ಈ ಹಸಿರು ಕ್ರಾಂತಿಯ ಹರಿಕಾರನೆನಿಸಿದ ಮರಿ ಬೋರ್ಲಾಗ್ ಎಂ.ಎಸ್. ಸ್ವಾಮಿನಾಥನ್‌ರವರು ಎರಡನೇ ಹಸಿರು ಕ್ರಾಂತಿಯ ಕುರಿತು ಆಗಾಗ ಹಲಬುತ್ತಲೇ ಇರುತ್ತಾರೆ, ಸರ್ಕಾರಗಳಿಗೆ ...ಗಳನ್ನು ನೀಡುತ್ತಲೇ ಇರುತ್ತಾರೆ.

...ತಹದ ಜೈವಿಕ ವೈವಿಧ್ಯವನ್ನೇ ನಾಶ ಮಾಡಿದ ಹಸಿರು ಕ್ರಾಂತಿ ಒಂದು ಭ್ರಾಂತಿ ಎಂದು ಪ್ರೂವ್ ...ದ ಸ್ವಾಮಿನಾಥನ್ ಅವರಿಗೆ ತಮ್ಮ ರಿಸರ್ಚ್ ಫೌಂಡೇಷನ್‌ಗೆ ಅನುದಾನ ಗಿಟ್ಟಿಸುವ ತವಕವಷ್ಟೇ. ...ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಎನ್ನುವಂತೆ, ಸ್ವಾಮಿನಾಥನ್‌ಗೆ ಹಾನಿಕಾರಿ ಅಕ್ರಮಗಳನ್ನು ...ಸುವ ಉಮೇದು. ಬಂಡವಾಳಶಾಹಿ ನೆಂಟರು ಅದಕ್ಕೆ ಸಪೋರ್ಟು. 1982 ರಲ್ಲಿ ಕೇಂದ್ರ ಕ್ಯಾಬಿನೆಟ್‌ಗೆ ...ಕ ಸಲಹಾಗಾರರಾಗಿದ್ದ ಸ್ವಾಮಿ ದಿಢೀರನೆ ಆ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು. ಕೇಂದ್ರ ಯೋಜನಾ ...ದ ಉಪಾಧ್ಯಕ್ಷ ಸ್ಥಾನವನ್ನೂ ತೊರೆದಿದ್ದರು. ಕಾರಣ? ಇಂಟರ್‌ನ್ಯಾಷನಲ್ ರೈಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ...) ನ ಡೈರೆಕ್ಟರ್ ಜನರಲ್ ಹುದ್ದೆ ಅಲಂಕರಿಸಲು! ಅಮೆರಿಕದ ಎರಡು ಖಾಸಗಿ ಫೌಂಡೇಷನ್‌ಗಳಿಂದ ... ಈ ಸಂಸ್ಥೆ ... ರಾಷ್ಟ್ರಗಳ ರೈತಾಪಿಯ ಬದುಕಿಗೆ ಕೊಳ್ಳಿ ಇಡುತ್ತ ಬಂದಿದೆ.


...ರಿಕಾದ ಕೃಷಿ ಕಾರ್ಯದರ್ಶಿಯಾಗಿದ್ದ ಎರ್ಲ್ ಬುಚ್ ಎಂಬಾತ "ಆಹಾರವನ್ನು ಅಸ್ತ್ರವಾಗಿ ಬಳಸಬಹುದಾದರೆ, ...ಡಲು ನಮಗೆ ... ಇದೆ" ಎಂದು ಹೇಳಿದ್ದ. ಈಗ ಸ್ವಾಮಿನಾಥನ್‌ಗಳು, ಮನಮೋಹನ್ ಸಿಂಗ್‌ಗಳು ...ರುವುದು ಇದನ್ನೇ.

... ಪ್ರದೇಶದ ಮೀನುಗಾರರ ಬದುಕನ್ನೇ ಅತಂತ್ರಗೊಳಿಸುವ CRZ ಯೋಜನೆಯೂ ಸ್ವಾಮಿನಾಥನ್‌ಗಳ ..., ಈಗ ಈ ಮಹಾಶಯರನ್ನು ಶ್ರೀಲಂಕಾದ ಕೂರಿ ರಾಜಪಕ್ಸೆಯೂ ಕರೆದಿದ್ದಾನೆ. ಎಲ್.ಟಿ.ಟಿ.ಇ. ...ನ ಜಾಗದಲ್ಲಿ ಈತ ಕೃಷಿ ಯೋಜನೆ ಜಾರಿ ಮಾಡಬೇಕಂತೆ!

... ಮಾಡುವ ಇಂತಹ ತಜ್ಞರನ್ನು ನಾವು ಹೀರೋಗಳನ್ನಾಗಿ ಮಾಡಿಟ್ಟಿದ್ದೇವೆ.

ವಿಕಿಪೀಡಿಯಾವೋ, ವಿಕಿ 'ಪೀಡೆ'ಯೋ?

ಯಾರೂ ಬೇಕಾದರೂ ಬರೆಯಬಹುದಾದ, ತಿದ್ದಬಹುದಾದ, ಅಳಿಸಬಹುದಾದ ಆನ್‌ಲೈನ್ ವಿಶ್ವಕೋಶ ವಿಕಿಪೀಡಿಯಾ. ನಗರವಾಸಿ ಯುವಜನತೆ, ಅದರಲ್ಲೂ ವಿದ್ಯಾರ್ಥಿ ಸಮೂಹ ಮಾಹಿತಿಗಾಗಿ ಈ ವಿಕಿಪೀಡಿಯಾವನ್ನೇ ಅವಲಂಬಿಸಿದೆ. ಆದರೆ ಇಲ್ಲಿರುವ ಮಾಹಿತಿ ಪರಿಪೂರ್ಣ ನಿಖರವಾಗಿರುವುದಿಲ್ಲ. ಸುಮಾರು 35 ಮಿಲಿಯನ್ ಲೇಖನಗಳನ್ನು 2.6 ಮಿಲಿಯನ್ ಜನ ಬರೆದಿದ್ದಾರೆ. ಅಮೆರಿಕಾದ ಗೂಢಚರ್ಯ ಸಂಸ್ಥೆ ಸಿಐಎ ತನಗೆ ಬೇಕಾದಂತೆ ಹಲವು ಪುಟಗಳನ್ನು ಬರೆದಿದೆ. ಇನ್ನು ಕೆಲ ಮತಾಂಧರು ಸುಳ್ಳು ಮಾಹಿತಿಗಳನ್ನು ಬರೆಯುತ್ತಲೇ ಇದ್ದಾರೆ.



ಇದಕ್ಕೊಂದು ಲೇಟೆಸ್ಟ್ ಉದಾಹರಣೆ 'ಲಂಕೇಶ್ ಪತ್ರಿಕೆ' ಎಂಬ ಟೈಟಲ್ ಅಡಿ ಇರುವ ಪುಟ್ಟ ಟಿಪ್ಪಣಿಯ ತುಂಬಾ ಲಂಕೇಶರ ಕುರಿತು ಸುಳ್ಳುಗಳನ್ನೇ ಬರೆಯಲಾಗಿದೆ. ಲಂಕೇಶರು ನಕ್ಸಲೈಟರ ಸಿಂಪಥೈಸರ್ ಆಗಿದ್ದರಂತೆ! ಅವರು ತಮ್ಮನ್ನು 'ಕವಿ' ಎಂದು ಭ್ರಮಿಸಿದ್ದರಂತೆ! ತಮ್ಮ ಸಾಹಿತ್ಯವನ್ನು ಪ್ರಕಟ ಮಾಡಲು ಪತ್ರಿಕೆಯನ್ನು ಬಳಸಿಕೊಂಡರಂತೆ!

ಈ ರೀತಿ ಹಸಿ ಸುಳ್ಳುಗಳನ್ನು ಯಾವನೋ ಚಿಲ್ಲಿ ಬುದ್ಧಿಯವ ಬರೆಯುತ್ತಾನೆ. ವಿಕಿಪೀಡಿಯಾ ನಿರ್ವಾಹಕರಿಗೆ ಸುಳ್ಳು ಮಾಹಿತಿ ನೀಡುವ ಬಗ್ಗೆ ಖೇದವಿದ್ದಂತಿಲ್ಲ. ಈ ಹಿಂದೆ, ಜಾನ್ ಆಫ್ ಕೆನಡಿ, ರಾಬರ್ಟ್ ಕೆನಡಿಗಳ ಹತ್ಯೆಯಲ್ಲಿ ಮಾಜಿ ಪತ್ರಕರ್ತ ಸಿಗೆಂಥಲರ್ ಕೈವಾಡ ಇದೆ ಎಂದು ಬರೆಯಲಾಗಿತ್ತು. ಈ ಬರಹ ನಾಲ್ಕು ತಿಂಗಳುಗಳ ಕಾಲ ಚಾಲ್ತಿಯಲ್ಲಿತ್ತು. ಕೊನೆಗೆ ಜಾನ್ ಸಿಗೆಂಥಲರ್ ಟೈಮ್ಸ್ ಪತ್ರಿಕೆಗೆ ಲೇಖನ ಬರೆದ ಮೇಲೆ ವಿಕಿಪೀಡಿಯಾದ ಜಿಮ್ಮಿ ವೇಲ್ಸ್ ಎಚ್ಚರಗೊಂಡು ಕ್ಷಮೆ ಯಾಚಿಸಿದ್ದ.

ಈ ಹಿಂದೆ ಅಡ್ವಾನಿ ಸ್ವಿಸ್‌ಬ್ಯಾಂಕ್‌ನಲ್ಲಿ ಭಾರತೀಯ ರಾಜಕಾರಣಿಗಳು ... ಇಟ್ಟಿದ್ದಾರೆ ಎಂದು ಆರೋಪಿಸಿ, ಅದಕ್ಕೆ ದಾಖಲೆ ಕೇಳಿದಾಗ ವಿಕಿಪೀಡಿಯಾ ತೋರಿಸಿದ್ದರು. ಆಗ ಜನ ಬಿದ್ದು ಬಿದ್ದು ನಕ್ಕಿದ್ದರು. ಯಾಕೆಂದರೆ ವಿಕಿಪೀಡಿಯಾ ವಿಶ್ವಾಸಾರ್ಹ ವಿಶ್ವಕೋಶ ಅಲ್ಲ ಎಂಬುದು ಸಾಮಾನ್ಯ ಜನರಿಗೂ ಅರ್ಥವಾಗುತ್ತಿದೆ.

ಲಂಕೇಶ್ ಕುರಿತ ತಪ್ಪು ಮಾಹಿತಿಯ ವಿರುದ್ಧ ವಿಕಿಪೀಡಿಯಾಗೆ ದೂರು ದಾಖಲಿಸಿದ್ದೇವೆ.

-ಮಲ್ಲಿ

ಅನಾವರಣ


ಎಂಬ ಸದಾಶಯಗಳ ಸ್ವಗತ

'ಅನಾವರಣ' ಪತ್ರಕರ್ತ ಟಿ.ಎಸ್ ಷಣ್ಮುಖರವರ ಚೊಚ್ಚಲ ಕಾದಂಬರಿ ಅಥವಾ ಕಾದಂಬರಿ ಬರೆಯಲು ನಡೆಸಿರುವ ಮೊಟ್ಟಮೊದಲ ಪ್ರಯತ್ನ ಎಂದರೂ ನಡೆಯುತ್ತದೆ. ಕಾದಂಬರಿಯ ಮುನ್ನುಡಿಯಲ್ಲಿ ಅವರೇ ಹೇಳಿಕೊಂಡಿರುವಂತೆ ಬಹಳ ಅಳುಕಿನಿಂದಲೇ ಅವರು ಈ ಕಾದಂಬರಿಯನ್ನು ಬರೆದಿದ್ದಾರೆ. ಮೂಲತಃ ಪತ್ರಕರ್ತರಾಗಿರುವ ತಾವು ಕಾದಂಬರಿ ಬರೆದರೆ ಅದೊಂದು ವರದಿಯಾಗಿಬಿಡುವ ಅಪಾಯವಿದೆ ಎಂಬುದೇ ಷಣ್ಮುಖ ಅವರ ಅಳುಕು. ಅದೇನೇ ಇದ್ದರೂ ಕಾದಂಬರಿಯ ವಸ್ತು ಅವರನ್ನು ಬಹುವಾಗಿ ಕಾಡಿರುವುದರಿಂದಲೇ ಅವರು ಈ ಕಾದಂಬರಿ ಬರೆಯುವ ಸಾಹಸಕ್ಕೆ ಕೈ ಹಾಕಿ 15 ದಿನಗಳಲ್ಲಿ ಬರೆದು ಮುಗಿಸಿದ್ದಾರೆ!

ಈ ಕಾದಂಬರಿಯ ಹೆಗ್ಗಳಿಕೆ ಇರುವುದೂ ಸಹ ಕಥೆ ಹೇಳುವ ರೀತಿಯಲ್ಲಲ್ಲ. ಹಾಗೆ ನೋಡಿದರೆ ಒಂದು ಕಾದಂಬರಿಗೆ ಬೇಕಾಗಿರುವ ಬಂಧ, ಶಿಲ್ಪ, ಪಾತ್ರ ಪೋಷಣೆ, ಕಥಾವಿಕಾಸ ಇವುಗಳನ್ನು ಇಟ್ಟುಕೊಂಡು ನೋಡಿದರೆ ಷಣ್ಮುಖರವರು ಕಥನ ಕಲೆಯನ್ನು ರೂಢಿಸಿಕೊಂಡು ಈ ಕಾದಂಬರಿ ಬರೆದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎಂದೇ ಹೇಳಬಹುದು. ಆದರೆ 'ಅನಾವರಣ' ರೂಪದಲ್ಲಿ ಇರುವ ಈ ಎಲ್ಲಾ ಕೊರತೆಗಳ ನಡುವೆಯೂ ಮುಖ್ಯವಾಗುವುದು ಕಥಾವಸ್ತುವಿನಿಂದಾಗಿ. ಕಥೆಯ ವಸ್ತುವಾದ ನಕ್ಸಲ್ ಚಳವಳಿ ಅವರ ಅಂತಃಕರಣವನ್ನು ಬಹಳ ಕಾಲದಿಂದ ಕಾಡಿದೆ. ಒಬ್ಬ ಮಾನವೀಯ ಕಾಳಜಿಯುಳ್ಳ ಪತ್ರಕರ್ತರಾಗಿ ಅವರು ಈ ಕಾದಂಬರಿಯಲ್ಲಿ ಬರುವ ಹಲವು ಘಟನೆಗಳನ್ನು ವರದಿ ಮಾಡಿದ್ದಾರೆ. ಅಲ್ಲಿ ದಾಖಲಾಗುವ ಹಲವು ಹೋರಾಟಗಳಿಗೆ ಪರೋಕ್ಷವಾಗಿ ನೆರವಾಗಿದ್ದಾರೆ. ಅಂಥ ಹೋರಾಟಗಳು ತಮ್ಮದೇ ಕಾರಣಕ್ಕೋ ಅಥವಾ ಪ್ರಭುತ್ವ ದಮನಕ್ಕೋ ಪಕ್ಕಾಗಿ ಸ್ಥಗಿತಗೊಂಡಾಗ ಅಥವಾ ಹಿನ್ನಡೆ ಅನುಭವಿಸಿದಾಗ ಬೇಸರದ ನಿಟ್ಟುಸಿರಿಟ್ಟಿದ್ದಾರೆ. ಆಗೆಲ್ಲಾ ಪತ್ರಕರ್ತರಾಗಿ ತಾವು ಹೇಳಲಾಗದ ಹಲವು ವಿಷಯಗಳನ್ನು ಮತ್ತು ಮಾಡಲಾಗದ ಭಾಷಣಗಳನ್ನು ಈ ಕಾದಂಬರಿಯಲ್ಲಿ ಹರಿಯಬಿಟ್ಟಿದ್ದಾರೆ. ಆದ್ದರಿಂದಲೇ ಕಾದಂಬರಿಯ ಹಲವು ಕಡೆ - ಅದರಲ್ಲೂ ಪ್ರಾರಂಭದ ಕೆಲವು ಅಧ್ಯಾಯಗಳಲ್ಲಿ - ಸಂವಾದಗಳೆಲ್ಲಾ ಉಪದೇಶ ಮತ್ತು ಭಾಷಣಗಳ ರೂಪದಲ್ಲಿ ಓದುಗರ ತಾಳ್ಮೆಯನ್ನು ಪರೀಕ್ಷಿಸಿಬಿಡುತ್ತವೆ! ಅದೇನೇ ಇದ್ದರೂ ಅವೆಲ್ಲಾ ವಾಸ್ತವದಲ್ಲಿ ಮಾನವೀಯ ಅಂತಃಕರಣವುಳ್ಳ ಪತ್ರಕರ್ತರಾದ ಷಣ್ಮುಖರ ಸದಾಶಯಗಳ ಸ್ವಗತವೇ ಆಗಿದೆ!

'ಅನಾವರಣ' ಕರ್ನಾಟಕದ ನಕ್ಸಲೈಟ್ ಚಳವಳಿಯ ಬಗೆಗಿನ ಕಾದಂಬರಿ. ಆದ್ದರಿಂದಲೇ ಕಾದಂಬರಿಯ ನಾಯಕನ ಹೆಸರು 'ಸಾಕಿ'ಯಾಗಿರುವುದು ಕಾಕತಾಳೀಯವಲ್ಲ. ಸಾಕಿ ಎಂಬುದು ಕರ್ನಾಟಕದ ನಕ್ಸಲ್ ಚಳವಳಿಯ ನಾಯಕ ಮತ್ತು ಕರ್ನಾಟಕದ ಮಾವೋವಾದಿ ಪಕ್ಷದ ಕಾರ್ಯದರ್ಶಿಯಾಗಿದ್ದ ಸಾಕೇತ್ ರಾಜನ್ ಅವರ ಕಾವ್ಯನಾಮ. (ಈಗಾಗಲೇ ಅದೇ ಹೆಸರಿನಲ್ಲಿ ಅವರು ಬರೆದಿರುವ ಕರ್ನಾಟಕದ ಇತಿಹಾಸದ ಬಗೆಗಿನ ಗ್ರಂಥ 'ಮೇಕಿಂಗ್ ಹಿಸ್ಟರಿ' ಅಪಾರ ವಿದ್ವತ್ ಮನ್ನಣೆಯನ್ನೂ ಗಳಿಸಿಕೊಂಡಿದೆ.) ಇಷ್ಟು ಮಾತ್ರವಲ್ಲದೆ ಕಾದಂಬರಿಯಲ್ಲಿ ತುಂಗಭದ್ರಾ ಉಳಿಸಿ ಹೋರಾಟ, ಕುದುರೆಮುಖ ನ್ಯಾಷನಲ್ ಪಾರ್ಕ್, ಆದಿವಾಸಿಗಳ ಎತ್ತಂಗಡಿ ಸಮಸ್ಯೆ ಭೂಮಾಲೀಕರ ಶೋಷಣೆ, ಬಡ ಆದಿವಾಸಿ-ದಲಿತರನ್ನು ಶತಮಾನಗಳಿಂದ ಒಂದೇ ಕುಟುಂಬದ ಭೂಮಾಲೀಕರು ಶೋಷಿಸುತ್ತಿರುವುದರ ದಾರುಣ ಚಿತ್ರಣ ಎಲ್ಲವೂ ಬರುತ್ತದೆ.


ಇಂಥಾ ಒಂದು ಆದಿವಾಸಿಗಳ ಹಾಡಿಗೆ ನಕ್ಸಲ್ ನಾಯಕರು ಬಂದು ಭೂಮಿಗಾಗಿ ಚಳವಳಿ ಕಟ್ಟುವುದರ ಚಿತ್ರಣವೇ 'ಅನಾವರಣ'ದ ವಸ್ತು. ಇಂದು ಹೊಸದಾಗಿ ಕಥೆ-ಕಾದಂಬರಿ ಬರೆಯುತ್ತಿರುವ ನವಪೀಳಿಗೆಯ ಲೇಖಕರಿಗೆ ಜನತೆಯ ಹೋರಾಟಗಳು ಸೃಜನಶೀಲ ಅಭಿವ್ಯಕ್ತಿಯ ವಸ್ತುಗಳೇ ಆಗದಿರುವ ಹಿನ್ನೆಲೆಯಲ್ಲೂ ಈ ಕಾದಂಬರಿ ಅದರ ವಸ್ತುವಿನ ಕಾರಣಕ್ಕಾಗಿಯೇ ಪ್ರಜ್ಞಾವಂತ ಓದುಗರ ಗಮನ ಸೆಳೆಯುತ್ತದೆ. ಶತಶತಮಾನಗಳಿಂದಲೂ ಭೂಮಾಲಿಕರ ಶೋಷಣೆಗೆ ಸಿಕ್ಕಿರುವ ಇಂಥಾ ಆದಿವಾಸಿಗಳ ಹಾಡಿಗಳಿಗೆ ಈಗಲೂ ಸರ್ಕಾರಿ ಸೌಲಭ್ಯಗಳು ದಕ್ಕಿಲ್ಲ. ಶಾಲೆ, ಆಸ್ಪತ್ರೆ, ಕುಡಿಯುವ ನೀರು ಇತ್ಯಾದಿಗಳನ್ನು ಅವರು ಕಂಡೂ ಇಲ್ಲ, ಕೇಳಿಯೂ ಇಲ್ಲ. ಆದರೆ 60 ವರ್ಷಗಳ ಸ್ವತಂತ್ರ ಭಾರತದ ವೈರುಧ್ಯ ಕೇವಲ ಅಷ್ಟು ಮಾತ್ರವಲ್ಲ, ಭಾರತದಲ್ಲಿ ಕಮ್ಯುನಿಸ್ಟ್ ಚಳವಳಿಯನ್ನೂ ಒಳಗೊಂಡು ಹಲವು ಬಗೆಯ ಸಮಾಜವಾದಿ ಚಳವಳಿ ಪ್ರಾರಂಭಗೊಂಡು ಎಂಟು ದಶಕಗಳೇ ಕಳೆದಿದ್ದರೂ ನಕ್ಸಲ್ ಚಳವಳಿ ಕಾಲಿಡುವವರೆಗೆ ಆದಿವಾಸಿಗಳ ಹಾಡಿಗೆ ಸ್ಪರ್ಶಿಸುವ ಹೋರಾಟಗಾರರೂ ಕಾಲಿಟ್ಟಿರಲಿಲ್ಲ ಎಂಬುದೂ ಅಷ್ಟೇ ಸತ್ಯ. ಇದನ್ನೇ 'ಅನಾವರಣ' ಕಾದಂಬರಿಯ



ಅನಾವರಣ-ಕಾದಂಬರಿ
ಲೇಖಕರು : ಟಿ.ಎಸ್.ಷಣ್ಮುಖ
ಪುಟಗಳು : 153 ಬೆಲೆ : 80/-
ಪ್ರಕಾಶಕರು : ಚಾರ್ವಾಕ ಪ್ರಕಾಶನ
ವಿಶ್ವನಾಥನಹಳ್ಳಿ, ಕಾಳಘಟ್ಟ ಅಂಚೆ
ಹೊಳಲ್ಕೆರೆ ತಾ., ಚಿತ್ರದುರ್ಗ ಜಿಲ್ಲೆ.

ಆದಿವಾಸಿ ಪಾತ್ರಗಳು ಸಹ ಪರೋಕ್ಷವಾಗಿ ದೂರುತ್ತವೆ.

ಉರಿಮೀಸೆ ತಿಮ್ರಾಯ ಕುಟುಂಬದ ಶೋಷಣೆಗೆ, ಕೊಲೆ ಅತ್ಯಾಚಾರಗಳಂಥ ದಮನಗಳಿಗೆ ಹೆದರಿ ಬೆದರಿ ಬದುಕುತ್ತಿದ್ದ ಆದಿವಾಸಿಗಳಿಗೆ ನಕ್ಸಲ್ ನಾಯಕರಾದ ಫಾತಿಮಾ ಮತ್ತು ಸಾಕಿ ಹಾಗೂ ಇನ್ನಿತರರು ಧೈರ್ಯ ತುಂಬಿ ಅಕ್ರಮವಾಗಿ ಅವನು ವಶಪಡಿಸಿಕೊಂಡಿದ್ದ ಭೂಮಿಯನ್ನು ಪಡೆದುಕೊಳ್ಳಲು ಕಾನೂನುಬದ್ಧವಾದ ಹೋರಾಟವನ್ನೇ ಕಟ್ಟುತ್ತಾರೆ. ಆದರೆ ಕಾಗದಪತ್ರಗಳು, ಕಾನೂನು ಮತ್ತು ನ್ಯಾಯಗಳು ಆದಿವಾಸಿಗಳ ಪರವಾಗಿದ್ದರೂ ಈ ದೇಶದ ಆಡಳಿತ ಯಂತ್ರಾಂಗ ತಿಮ್ರಾಯನಂಥವನ ಕಣ್ಣ ಸನ್ನೆಗೆ ತಕ್ಕಂತೆ ನಡೆಯುವುದರಿಂದ ಆದಿವಾಸಿಗಳಿಗೆ ಕೊನೆಗೂ ನ್ಯಾಯ ಸಿಕ್ಕುವುದಿಲ್ಲ. ಹೋರಾಟಕ್ಕೆ ಕುಮ್ಮಕ್ಕಾಗಿದ್ದ ಫಾತಿಮಾರಂಥ ನಾಯಕಿಯ ಮೇಲೆ ಪೊಲೀಸರು ಸುಳ್ಳು ಕೇಸುಗಳನ್ನು ಹೊರೆಸಿ ಎನ್‌ಕೌಂಟರ್‌ನಲ್ಲಿ ಕೊಂದ ಸೂಚನೆಯನ್ನು ಕಾದಂಬರಿ ಕೊಡುತ್ತದೆ. ಅದೇರೀತಿ ತಮ್ಮ ಹಕ್ಕಿಗೆ ಯಾವುದೇ ರಾಜಿ ಇಲ್ಲದೆ ಹೋರಾಟ ಮಾಡುತ್ತಿದ್ದ ಮಾದಜ್ಜ ಹಾಗೂ ಇನ್ನಿತರ ಆದಿವಾಸಿಗಳ ಮೇಲೆ ಕೊಲೆ ಮೊಕದ್ದಮೆಯಂಥ ಸುಳ್ಳು ಕೇಸುಗಳನ್ನು ದಾಖಲಿಸಿ ಜೈಲಿಗೆ ದೂಡಲಾಗುತ್ತದೆ. ಹೆದರಿ ತತ್ತರಿಸುತ್ತಿದ್ದ ಇನ್ನುಳಿದ ಆದಿವಾಸಿ ಕುಟುಂಬಗಳಿಗೆ ಚುನಾವಣಾ ಪ್ರಚಾರದ ಭಾಗವಾಗಿ ಹಣ, ಬಟ್ಟೆ ಇನ್ನಿತರ ವಸ್ತುಗಳನ್ನು ಹಾಗು ಬೆದರಿಕೆಯನ್ನೂ ಹೇರಿ ತಿಮ್ಮರಾಯಿ ಮತ್ತೆ ಅವರನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾನೆ. ಹೀಗಾಗಿ ನಕ್ಸಲ್ ನಾಯಕ ಸಾಕಿ ಮತ್ತವನ ತಂಡ ಈ ತಿಮ್ಮರಾಯಿಯನ್ನು ಕೊಂದು ಹಾಕುವ ಸೂಚನೆಯೊಂದಿಗೆ ಕಾದಂಬರಿ ಅಂತ್ಯವಾಗುತ್ತದೆ.



ಷಣ್ಮುಖ

ಕಾದಂಬರಿಯ ಉದ್ದಕ್ಕೂ ಬರಗೂರು ರಾಮಚಂದ್ರಪ್ಪನವರ 'ಶಬರಿ'ಯ ಛಾಯೆ ಢಾಳಾಗಿರುವುದು ಕಾಣುತ್ತದೆ. ಅಂತಿಮವಾಗಿ ಆದಿವಾಸಿಗಳ ಹೋರಾಟ ಯಶಸ್ವಿಯಾಯಿತೇ ಎಂಬ ಪ್ರಶ್ನೆ ಹಾಗೇ ಉಳಿಯುತ್ತದೆ. ಭೂಮಾಲಿಕ ತಿಮ್ರಾಯಿಯು ಕೊಲೆ ಆದಿವಾಸಿಗಳ ಹೋರಾಟಕ್ಕಿದ್ದ ಅಡ್ಡಿಯನ್ನು ನಿವಾರಿಸಿತೋ ಅಥವಾ ಪೊಲೀಸ್ ದಮನದ ರೂಪದಲ್ಲಿ ಇನ್ನಷ್ಟು ಅಡ್ಡಿಗಳನ್ನು ಇನ್ನಷ್ಟು ಬೆದರಿಕೆಗಳನ್ನು ಒಡ್ಡಿತೋ ಎಂಬ ವಿವರಣೆಯನ್ನು ಲೇಖಕರು ಓದುಗರಿಗೇ ಬಿಟ್ಟುಬಿಟ್ಟಿದ್ದಾರೆ. ಇದಕ್ಕೆ ಕಾರಣ ವಿದೆ. ಪ್ರಭುತ್ವ ಹಿಂಸೆಯನ್ನು ಹತ್ತಿಕ್ಕಲು ಕ್ರಾಂತಿಕಾರಿ ಪ್ರತಿಹಿಂಸೆ ಅನಿವಾರ್ಯವೋ ಅಲ್ಲವೋ ಎಂಬ ತಾತ್ವಿಕ ಜಿಜ್ಞಾಸೆಯಲ್ಲಿ ಪಾಲ್ಗೊಳ್ಳಲು ಲೇಖಕರು ಪ್ರಜ್ಞಾಪೂರ್ವಕವಾಗಿ ನಿರಾಕರಿಸಿರುವುದರಿಂದಲೇ ಈ ಗೊಂದಲಗಳು ಕಾದಂಬರಿಯಲ್ಲಿ ಉಳಿದುಕೊಳ್ಳುತ್ತವೆ.

ಷಣ್ಮುಖರವರು ಪತ್ರಕರ್ತರಾಗಿ ನಕಲ್ ಚಳವಳಿಯ ಒಳಹೊರಗನ್ನು ಕನ್ನಡದ ಇತರ ಲೇಖಕರಿಗಿಂತ ಇನ್ನೂ ಹತ್ತಿರದಿಂದ ನೋಡಿದ್ದಾರೆ. ಅಲ್ಲದೆ ಕಾದಂಬರಿಯ ಪ್ರಾಕಾರ ಲೇಖಕನಿಗೆ ಇನ್ನೂ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡುವುದರಿಂದ ಷಣ್ಮುಖರು ತಮ್ಮ ತಾತ್ವಿಕ ಗೊಂದಲವನ್ನು ಮೀರಿ ಯಾವುದಾದರೂ ಒಂದು ನಿಲುವನ್ನು ತೆಗೆದುಕೊಂಡಿದ್ದರೆ 'ಅನಾವರಣ'ಕ್ಕೆ ಇನ್ನೂ ವಿಶಾಲವಾದ ಭಿತ್ತಿ ಪ್ರಾಪ್ತವಾಗುತ್ತಿತ್ತು. ಹೀಗಾಗಿಯೇ ಈವರೆಗೆ ಸಾಕೇತ್ ರಾಜನ್ ಎನ್ಕೌಂಟರ್ ನಂತರ ಕನ್ನಡದಲ್ಲಿ ನಕ್ಸಲರ ಕುರಿತಾಗಿ ಬಂದ ಹಲವು ಸಣ್ಣಕಥೆಗಳು ಮತ್ತು 'ಶಬರಿ'ಯಂಥ ಕಾದಂಬರಿಗಳು ತೋರಿರುವ ಮಿತಿಯನ್ನು 'ಅನಾವರಣ'ವೂ ದಾಟುವುದಿಲ್ಲ. ನಾನು ಮೇಲೆ ಉಲ್ಲೇಖಿಸಿದ ಆ ಎಲ್ಲಾ ಕಥೆಗಳ ಮತ್ತು ಕಾದಂಬರಿಗಳ ಲೇಖಕರಿಗೆ ನಕ್ಸಲೈಟ್ ಚಳವಳಿಯ ಬಗ್ಗೆ ಪತ್ರಿಕಾ ವರದಿಗಳಿಗಿಂತ ಹೆಚ್ಚಿನ ತಿಳಿವಳಿಕೆಯೇನೂ ಇಲ್ಲ. ಮತ್ತು ತಮ್ಮ ಕಣ್ಣೆದುರೇ ನಡೆಯುತ್ತಿರುವ ಒಂದು ಜೀವನ್ಮರಣದ ಹೋರಾಟದ ಬಗ್ಗೆ ಸೃಜನಶೀಲ ಕುತೂಹಲದಿಂದಲೂ ಹೆಚ್ಚಿನ ತಿಳಿವಳಿಕೆಯನ್ನು ಪಡೆದುಕೊಳ್ಳುವ ಪ್ರಯತ್ನವನ್ನು ಬಹುಪಾಲು ಕನ್ನಡದ ಲೇಖಕರು ಮಾಡಿಲ್ಲ. ಬರಗೂರು ರಾಮಚಂದ್ರಪ್ಪನವರು ಇದಕ್ಕೆ ಅಪವಾದವಾದರೂ ಅವರ 'ಶಬರಿ' ಕಾದಂಬರಿಯೂ ಸಹ ನಕ್ಸಲ್ ಚಳವಳಿಯ ಬಗ್ಗೆ ರೋಮ್ಯಾಂಟಿಕ್ ಚಿತ್ರಣಕ್ಕಿಂತ ಹೆಚ್ಚೇನನ್ನೂ ಕಟ್ಟಿಕೊಡುವುದಿಲ್ಲ. ಅಲ್ಲದೆ ಈ ಎಲ್ಲವೂ ನಕ್ಸಲರನ್ನು ಒಂದು ಬಗೆಯ ದುರಂತ ನಾಯಕರಂತೆ ಚಿತ್ರಿಸುತ್ತವೆ. ಷಣ್ಮುಖರವರು ಕನ್ನಡದ ಈ ಸಿದ್ಧಮಾದರಿಯನ್ನು ಮುರಿಯಬಹುದಾಗಿತ್ತು. ಆದರೆ ದುರದೃಷ್ಟವಶಾತ್ ಆ ಪ್ರಯತ್ನಕ್ಕೆ ಅವರು ಕೈ ಹಾಕಿಲ್ಲ.

ನಕ್ಸಲೈಟ್ ಚಳವಳಿ ಸಹ ಒಂದು ಸಾಮಾಜಿಕ ಬದಲಾವಣೆಯ ಉದ್ದೇಶವುಳ್ಳ ಚಳವಳಿ. ನಕ್ಸಲ್ ಚಳವಳಿಯಾಗಲೀ ಅಥವಾ ಇತರ ಚಳವಳಿಯಾಗಲೀ ಅಲ್ಲಿರುವ ಕಾರ್ಯಕರ್ತರು ಸಹ ರಾಗ, ಭಾವಗಳುಳ್ಳ ಮನುಷ್ಯರು. ಅಲ್ಲೂ ಮನುಷ್ಯ ಸಂಬಂಧಗಳಿವೆ. ಕೋಪ-ತಾಪ, ಪ್ರೀತಿ-ಅನುಕಂಪಗಳಿವೆ. ಅವೆಲ್ಲವನ್ನೂ ಮೀರಿಸುವ ತ್ಯಾಗಗಳಿವೆ. ಸಾಮಾನ್ಯ ಮನುಷ್ಯರನ್ನು ಅಂಥ ದೊಡ್ಡ ತ್ಯಾಗಕ್ಕೆ ಸಿದ್ಧವಾಗುವಂತೆ ಮಾಡುವ ಪ್ರಕ್ರಿಯೆಯಲ್ಲಿ ಅವರ ಭಾವಾಲೋಕದಲ್ಲಿ ನಡೆಯುವ ತಳಮಳಗಳೇನು? ಅವರು ಎದುರಿಸುವ ತಲ್ಲಣಗಳೇನು? ಅವರ ಸಂತೋಷ-ಹಾಸ್ಯ-ದುಃಖಗಳ ಅಭಿವ್ಯಕ್ತಿ ಏನು? ಇಂಥಾ ಪ್ರಶ್ನೆಗಳನ್ನು ಇಟ್ಟುಕೊಂಡು ಪಾತ್ರಗಳನ್ನು ಅನ್ವೇಷಿಸಿದರೆ ಮಾತ್ರ ಹೋರಾಟಗಾರರನ್ನು ರಕ್ತಮಾಂಸಗಳಿರುವ ಮನುಷ್ಯರಂತೆ ಚಿತ್ರಿಸಲು ಸಾಧ್ಯ. ('ಅನಾವರಣ'ದ ಮೊದಲ ಕೆಲವು ಅಧ್ಯಾಯಗಳಲ್ಲಿ ನಕ್ಸಲ್ ನಾಯಕನ ಖಾಸಗಿ ಜೀವನವನ್ನೂ ಮತ್ತು ನಕ್ಸಲ್ ಚಳವಳಿಯೊಳಗಿನ ಅಭಿಪ್ರಾಯಭೇದಗಳನ್ನೂ ಚಿತ್ರಿಸುವ ಪ್ರಯತ್ನವಿದೆ. ಆದರೆ ಅವೆಲ್ಲವೂ ರೋಮ್ಯಾಂಟಿಕ್ ನೆಲೆಯನ್ನೂ ಮತ್ತು ಪತ್ರಿಕಾ ವರದಿ ನೀಡಬಹುದಾದ ಮೇಲ್‌ಸ್ತರದ ತಿಳಿವಳಿಕೆಯ ನೆಲೆಯನ್ನು ಮೀರಿ ಬೆಳೆಯುವುದೇ ಇಲ್ಲ.) ಆ ಸಾಹಿತ್ಯಿಕ ಮತ್ತು ತಾತ್ವಿಕ ದೃಷ್ಟಿಕೋನವಿಲ್ಲದಿರುವುದರಿಂದಲೇ ಹೋರಾಟಗಾರರನ್ನು ಒಂದು ಬಗೆಯ ಟ್ರಾನ್ಸ್‌ನಲ್ಲಿರುವ, ಹಿಪ್ನಾಟಿಕ್ ಆಗಿರುವ ಅಥವಾ ಯಾವುದೇ ಸಂವೇದನೆಗಳಿರದ ಕಾರ್ಡ್‌ಬೋರ್ಡ್ ಪಾತ್ರಗಳಂತೆ ಚಿತ್ರಿಸುವುದೇ ಹೆಚ್ಚಾಗಿದೆ.

ಆದರೆ ಮ್ಯಾಕ್ಸಿಂ ಗಾರ್ಕಿಯವರ 'ತಾಯಿ', ನಿಕೋಲಾಯ್ ಆಸ್ಟ್ರವ್‌ಸ್ಕಿಯವರ 'ಅಗ್ನಿದೀಕ್ಷೆ', ಶೋಲೋಕೋವ್‌ರವರ 'ವರ್ಜಿನ್ ಸಾಯಿಲ್ ಅಪ್‌ಟರ್ನ್ಡ್', ಚೀನಾ ಕ್ರಾಂತಿಯನ್ನು ಕಟ್ಟಿಕೊಡುವ 'ರೆಡ್ ಕ್ರಾಗ್', 'ಸಾಂಗ್ ಆಫ್ ಯೂಥ್' ಮತ್ತು ಮಾರ್ಕ್ವೆಜ್‌ರವರ 'ಕ್ಲಾಂಡೆಸ್ಟೀನ್ ಇನ್ ಚಿಲಿ', ನಿರಂಜನರ 'ಚಿರಸ್ಮರಣೆ', ತೆಲುಗಿನ ಅಲ್ಲಂ ರಾಜಯ್ಯನವರ 'ಆತಡು', ಅಷ್ಟೇ ಏಕೆ ವ್ಯಾಸರಾಯ ಬಲ್ಲಾಳರ 'ಬಂಡಾಯ' ಹಾಗೂ ಇನ್ನಿತ್ಯಾದಿ ಕಾದಂಬರಿಗಳು ಹೋರಾಟಗಾರರನ್ನೇ ವಸ್ತುವಾಗಿರಿಸಿಕೊಂಡೂ ಶ್ರೇಷ್ಠ ಕಾದಂಬರಿಗಳಾಗುವುದು ಮನುಷ್ಯನೊಳಗಿರುವ ಭಾವಲೋಕದ ರೂಪಾಂತರದ ಅನ್ವೇಷಣೆಯನ್ನು ಮಾಡುವುದರಿಂದಲೇ ಎಂಬುದು ನನ್ನ ಖಚಿತ ಅಭಿಪ್ರಾಯ.

ಷಣ್ಮುಖರವರ ಮುಂದಿನ ಸಾಹಿತ್ಯ ಕೃಷಿ ಈ ಮೇಲಿನ ಕೃತಿಗಳಿಂದಲೂ ಪ್ರೇರಣೆ ಪಡೆಯಲಿ.

■ ಶಿವಸುಂದರ್



ಜಪಾನ್ ಪ್ರಥಮ ಮಹಿಳೆಯ

ಐಲುಪೈಲುಗಳು

ಆಕೆಯ ಹೆಸರು ಮಿಯುಕಿ ಹಟೊಯಾಮ. ಪ... ತಾನೆ ಜಪಾನ್ ದೇಶದ ಪ್ರಧಾನಮಂತ್ರಿಯಾಗಿ ಆಯ್ಕೆ... ಯುಕಿಯೋ ಹಟೊಯಾಮ ಅವರ ಹೆಂಡತಿ. ನೋಡುವ... ದೇಶದ ಪ್ರಥಮ ಮಹಿಳೆಗಿರಬೇಕಾದ ಗಾಂಭೀರ್ಯ ಅ... ಮುಖದಲ್ಲಿ ಎದ್ದು ಕಾಣುತ್ತದೆ. ಆದರೆ, ಆಕೆ ಬಾಯ್ತೆರೆ... ನಮ್ಮ ಉತ್ತರ ಕರ್ನಾಟಕದ ಅತ್ಯಂತ ಹಿಂದು... ಹಳ್ಳಿಯೊಂದರಲ್ಲಿ ಹೊರಗಿನ ಪ್ರಪಂಚದ ಅರಿವೇ ಇಲ್ಲದ... ಬದುಕುವ, ಪ್ರಪಂಚ, ವಿಜ್ಞಾನ, ತಂತ್ರಜ್ಞಾನಗಳ ಬಗ್ಗೆ ಒಂದಿ... ಗೊತ್ತಿರದ ಅಮಾಯಕಳಂತೆ ಮಾತನಾಡುತ್ತಾಳೆ. ಇ... ಸ್ಪಷ್ಟವಾಗಿ ಹೇಳಬೇಕೆಂದರೆ ನಮ್ಮ ಹಳ್ಳಿಯ ಮೂಢನಂಬಿಕೆ... ಅನಕ್ಷರಸ್ಥ ಮಹಿಳೆಯರು ತಮ್ಮ ಮೈಮೇಲೆ ದೆವ್ವವೋ... ದೇವರೋ ಬಂದಾಗ ಆಡುವಂತೆಯೇ ಆಡುತ್ತಾಳೆ. ಅದ... ಕೇವಲ ಮುಗ್ಧತೆ ಎನ್ನಬೇಕೋ, ಅರೆಹುಚ್ಚುತನ ಎನ್ನಬೇಕೋ... ಅಥವ ಪೂರ್ತಿ ಹುಚ್ಚುತನ ಎನ್ನಬೇಕೋ ಗೊತ್ತಿಲ್ಲ.

ಆಕೆಯ ಕೆಲವು ಮಾತುಗಳನ್ನು, ವರ್ತನೆಗಳನ್ನು ಟೀವಿಗ... ನೋಡಿದವರಿಗೆ ಇದು ಚೆನ್ನಾಗಿ ಅರ್ಥವಾಗುತ್ತೆ. "ನಾ... ಸೂರ್ಯನನ್ನು ತಿನ್ನುತ್ತೇನೆ" ಎಂದು ಆಕಾಶದತ್ತ ಮ... ಮಾಡಿ ಸೂರ್ಯನನ್ನು ಚಪಾತಿಯಂತೆ ಚೂರು ಚೂ... ಮಾಡಿಕೊಂಡು ತಿನ್ನುತ್ತಿರುವಂತೆ ಆಡಿ ತೋರಿಸುತ್ತಾಳೆ. "ಅ... ನನಗೆ ಅಗಾಧ ಶಕ್ತಿಯನ್ನು ಕೊಡುತ್ತದೆ. ನನ್ನ ಗಂಡ ಕ... ಇತ್ತೀಚೆಗೆ ನನ್ನಂತೆಯೇ ಸೂರ್ಯನನ್ನು ತಿನ್ನಲಾರಂಭಿಸಿದ್ದಾ... ಎಂದು ಬಹಳ ವಿಶ್ವಾಸದಿಂದ ಹೇಳುತ್ತಾಳೆ.

Very Strange Things I've Encounter... ಎಂಬ ಪುಸ್ತಕದಲ್ಲಿ ಆಕೆ "ಇಪ್ಪತ್ತು ವರ್ಷಗಳ ಹಿಂದೆ ನಾ... ಏಕಾಂಗಿಯಾಗಿ ಮಲಗಿದ್ದಾಗ ಯಾವುದೋ ಪರಲೋ... ಜೀವಿಗಳು (ಬಾಹ್ಯಾಕಾಶದ ಕಾಲ್ಪನಿಕ ಜೀವಿಗಳು) ನನ್ನ... ಅಪಹರಿಸಿಕೊಂಡು ಹೋಗಿದ್ದವು... ನನ್ನ ದೇ... ನಿದ್ರೆಯಲ್ಲಿದ್ದಾಗ ನನ್ನ ಆತ್ಮ ತ್ರಿಕೋನಾಕಾರದ ಗುರು... ಸಿಗದ ಹಾರುವ ವಸ್ತುವೊಂದರಲ್ಲಿ ಬಾಹ್ಯಾಕಾಶದ... ಪಯಣಿಸುತ್ತಿತ್ತು. ಅಂತಿಮವಾಗಿ ಅದು ಸೌರಮಂಡಲ... ಶುಕ್ರ ಗ್ರಹವನ್ನು ತಲುಪಿತು" ಎಂದು ಬರೆದಿದ್ದಾಳೆ. ಕೊ... "ಶುಕ್ರ ಗ್ರಹ ತುಂಬಾ ಸುಂದರವಾದ ಜಾಗ. ಹಚ್ಚ ಹಸಿರಾಗಿ... ಎಂದೂ ಸೇರಿಸುತ್ತಾಳೆ!

ಆಕೆಯ ಗಂಡನ ಸಹಪಾಠಿಗಳು ಇದನ್ನು ... "ಮಿಯುಕಿ ಪರಲೋಕದ ಜೀವಿಯನ್ನೇ ಮದುವೆಯ... ಭೂಮಿಗೆ ಕರೆದುಕೊಂಡು ಬಂದಿದ್ದಾಳೆ" ಎಂದು ಯುಕಿಯೋ... ಹಟೊಯಾಮ ಅವರಿಗೆ ಛೇಡಿಸುವುದುಂಟು. ವಾಸ್ತವದ... ಈ ಪುಸ್ತಕ ಕಳೆದ ವರ್ಷವೇ ಪ್ರಕಟಗೊಂಡಿತ್ತಾದರೂ ಅಷ್ಟ... ಯಾರ ಗಮನವನ್ನೂ ಸೆಳೆದಿರಲಿಲ್ಲ. ಈಗ ಆಕೆಯ ಗ... ಚುನಾವಣೆಯಲ್ಲಿ ಗೆಲ್ಲುತ್ತಿದ್ದಂತೆಯೇ ಅವಳೂ ಮಾಧ್ಯಮ... ಆಕರ್ಷಣೆಗೆ ಒಳಗಾದಳು. ಚುನಾವಣೆಯ ಸಮಯದ... ಕೇವಲ ಲೆಕ್ಕಾಚಾರ, ಸೋಲು-ಗೆಲುವಿಗೆ ಕಾರಣಗಳು ಅದ... ಇದೂ ಅಂತ ಮಾಮೂಲಿ ಬೋರ್ ಹೊಡೆಸುವ ಸುದ್ದಿಗ... ಇರುವ ಹೊತ್ತಿನಲ್ಲಿ ಆಕೆ ಸೂರ್ಯನನ್ನು ತಿನ್ನುವ ಮೂ... ರೋಚಕತೆಗಾಗಿನ ಮಾಧ್ಯಮಗಳ ಹಸಿವನ್ನು ಒಂದಿಷ್ಟು ಮಟ... ನೀಗಿಸಿದ್ದಾಳೆ.

ಆಕೆಗೆ ಇನ್ನೊಂದು ಕನಸಿದೆ. ಹಾಲಿವುಡ್‌ನಲ್ಲಿ ನಾಯ... ಯಾಗಿ ನಟಿಸಿ ಒಂದು ಸಿನೆಮಾ ಮಾಡಬೇಕಂತೆ. ಟಾ... ಕ್ರೂಯಿಸ್ ಅವರೇ ಹೀರೋ ಆಗುತ್ತಾರಂತೆ. ಅವರೇ ಯ... ಹೀರೋ ಆಗಬೇಕು ಎಂದು ಪ್ರಶ್ನಿಸಿದರೆ "ಆತ ಹಿಂದಿ... ಜನ್ಮದಲ್ಲಿ ಜಪಾನಿಯಾಗಿದ್ದ. ಆವಾಗ ನಾನು ಅವನ... ಭೇಟಿಯಾಗಿದ್ದೆ" ಎನ್ನುತ್ತಾಳೆ.

ಆಕೆಯ ಗಂಡ ಕಂ ಜಪಾನ್ ಪ್ರಧಾನಿ ಯುಕಿಯೋ... ಹಟೊಯಾಮ ಕೂಡ ಹೆಂಡತಿಯ ಐಲುಪೈಲುಗಳಿಂ... ಒಂದಿಷ್ಟೂ ಬೇಸರಗೊಳ್ಳುವುದಿಲ್ಲ. "ನಾನು ಮನೆ... ಹೋದಾಕ್ಷಣವೇ ಏನೋ ಒಂದು ರೀತಿಯ ಸಮಾಧಾ... ವಾಗುತ್ತದೆ. ಆಕೆ ಒಂದು ರೀತಿಯಲ್ಲಿ ನನ್ನಲ್ಲಿ ಶಕ್ತಿ-ಉತ್ಸಾ... ಗಳನ್ನು ತುಂಬಿಸಿಬಿಡುತ್ತಾಳೆ" ಎಂದು ಹೆಂಡತಿಯನ್ನು ತಾ... ಹೊಗಳುತ್ತಾರೆ.

ಇಂಥ ಪ್ರಧಾನಿಯನ್ನು, ಇಂಥ ಪ್ರಥಮ ಮಹಿಳೆಯ... ಪಡೆದ ಜಪಾನಿಯರು ನಿಜಕ್ಕೂ ಭಾಗ್ಯವಂತರು... ಪರಲೋಕದ ಜೀವಿಗಳೇ ಈಗ ಆಡಳಿತದ ಚುಕ್ಕಾ... ಹಿಡಿದಿದ್ದಾರೆ. ಜಪಾನ್ ದೇಶವನ್ನು, ಜಪಾನಿಯರನ್ನು... ದೇವರೇ ಕಾಪಾಡಬೇಕು

ನೇತ್ರಾವತಿಯಲ್ಲಿ ಸಿಕ್ಕ ಎರಡು ಶವ

...ಮಂಗಳೂರು-ಬೆಂಗಳೂರು ಹೆದ್ದಾರಿಯಲ್ಲಿ ಬಂಟ... ನಂತರ ಸಿಗುವ ಮುಖ್ಯ ಊರು ಉಪ್ಪಿನಂಗಡಿ. ...ಹೆದ್ದಾರಿಯಲ್ಲಿ ಬಂಟವಾಳ ಮತ್ತು ಘಟ್ಟದ ತಪ್ಪಲಿನ ...ಗಳ ನಡುವೆ ಇರುವ ಒಂದೇ ಒಂದು ಪೋಲಿಸ್ ...ಉಪ್ಪಿನಂಗಡಿಯದಾಗಿದ್ದು ಅದು ಒಳ್ಳೆಯ ಆಮದನಿ ...ಠಾಣೆ ಎಂದು ಹೆಸರು ಮಾಡಿದೆ. ಅದು ಬಟ್ಟರೆ ...ರಿನ ಬಗ್ಗೆ ಹೆಚ್ಚಿಗೆ ಹೇಳುವಂತಹದ್ದು ಏನೂ ...ಉಪ್ಪಿನಂಗಡಿ ಪೇಟೆಯಿಂದ ಒಂದು ಕಿ.ಮೀ. ...ಕೈ ಸುಬ್ರಹ್ಮಣ್ಯ ಕ್ರಾಸ್ ರೋಡ್ ಬಳಿ ನೇತ್ರಾವತಿ ...ಅಡ್ಡವಾಗಿ ಕಟ್ಟಿದ ಕಿರುಸೇತುವೆ ಇದೆ. ನೇತ್ರಾವತಿ, ...ಸುಮಾರು ಎರಡು ಫರ್ಲಾಂಗ್ ಹೆದ್ದಾರಿಗೆ ...ಸಮಾಂತರವಾಗಿ ಹರಿದು ನಂತರ ಉತ್ತರಕ್ಕೆ ತಿರುಗುತ್ತದೆ. ...ತಿರುವಿಗೆ ಸಮೀಪದಲ್ಲಿ ಕುಮಾರಾಧಾರಾ ನದಿ ...ನೇತ್ರಾವತಿಯನ್ನು ಕೂಡಿಕೊಳ್ಳುತ್ತದೆ. ಅಲ್ಲೇ ಹತ್ತಿರದಲ್ಲಿ ...ತಟದ ಮೇಲೆ ಪ್ರಾಚೀನವಾದ ಸಹಸ್ರಲಿಂಗೇಶ್ವರ ...ನವಿದೆ. ಸೇತುವೆಗೆ ಹತ್ತಿರದಲ್ಲಿ ಡಾಂಬರು ರಸ್ತೆಯಿಂದ ...ತೀರದವರೆಗೆ ಸುಮಾರು 200 ಮೀಟರ್ ದೂರದ ...ರಸ್ತೆ ಇದೆ. ಬೇಸಿಗೆಯಲ್ಲಿ ನದಿಯಿಂದ ಮರಳು ...ವ ಲಾರಿಗಳಿಗಾಗಿ ಮಾಡಿದ ರಸ್ತೆ ಅದು. ನದಿ ...ಗದಲ್ಲಿ ದಟ್ಟವಾದ ಮರ, ಬಿದಿರು ಹಿಂಡಲುಗಳ ... ಭಾರೀ ಗಾತ್ರದ ಬಂಡೆಯೊಂದನ್ನು ಸುತ್ತುವರಿದು ...ಯುತ್ತದೆ. ಉಪ್ಪಿನಂಗಡಿ ಪೇಟೆಯ ಕುರೂಪ ...ಗಳನ್ನು ಮರೆಸುವಂತಹ ತಾಣ ಅದು. ಮೊನ್ನೆ ... ಸೆಪ್ಟೆಂಬರ್ 9 ರ ಬುಧವಾರ ರಾತ್ರಿ ಕಳೆದ ...ಮ 2 ಗಂಟೆಯ ಸುಮಾರಿಗೆ, ಇಬ್ಬರು ತರುಣರು- ...ಮದ್ ಅಸೀಫ್ (19) ಮತ್ತು ಮೊಹಮದ್ ...ಫ (28)-ಅದೇ ಜಾಗದಲ್ಲಿ ನದಿಯಲ್ಲಿ ಮುಳುಗಿ ...ಕಳೆದುಕೊಂಡಿದ್ದಾರೆ.

...ಸೀಫ್ ಮತ್ತು ಮುಸ್ತಾಫ, ಆ ರಾತ್ರಿ ಧರ್ಮಸ್ಥಳ ...ಡ ನೆಲ್ಯಾಡಿಯಿಂದ ಮಂಗಳೂರಿಗೆ ಹೋಗು... ಅವರು ಪ್ರಯಾಣಿಸುತ್ತಿದ್ದ ಕ್ವಾಲಿಸ್ ಗಾಡಿಯನ್ನು ...ಗೆಯ ತರುಣ ಮೊಹಮದ್ ಸೊಹೈಲ್ ಡ್ರೈವ್ ...ತ್ತಿದ್ದರು. ಅವರ ಜೊತೆ ಗಾಡಿಯಲ್ಲಿ ಭದ್ರಾವತಿಯ ...ಪೀರ್ ಮತ್ತು ಧಾರವಾಡ ಮೂಲದ ಜಾವೇದ್ ...ಇದ್ದರು. ಈ ತಂಡ ನೆಲ್ಯಾಡಿಯಲ್ಲಿ ಖರೀದಿಸಿದ ... ಹಸು ಮತ್ತು ಕರುವನ್ನು ಮಂಗಳೂರಿಗೆ ...ತ್ತಿತ್ತು. ಗಾಡಿ ಬಜಪೆಯ ಶಂಸುದ್ದೀನ್ ಎಂಬ ...ವಾರು ವ್ಯಾಪಾರಿಯದ್ದಾಗಿದ್ದು, ನದಿಯಲ್ಲಿ ಮುಳುಗಿ ...ಲ್ಲಿ ಒಬ್ಬನಾದ ಅಸೀಫ್ ಅವರ ಕಿರಿಮಗ. ಅವರ ... ಆವತ್ತು ಹೆದ್ದಾರಿಯಲ್ಲಿ ಉಪ್ಪಿನಂಗಡಿ ಸಮೀಪಿಸು... ಒಂದು ಸ್ಕಾರ್ಪಿಯೋ ಅದನ್ನು ಬೆನ್ನಟ್ಟಿ ಬರು... ಅವರಿಗೆ ಗೊತ್ತಾಯಿತು. ಅವರು ನೇತ್ರಾವತಿಯ ...ಸೇತುವೆಯನ್ನು ತಲುಪಿದಾಗ ಸೇತುವೆಗೆ ಅಡ್ಡವಾಗಿ ... ಇಂಡಿಕಾ, ಒಂದು ಆಮ್ನಿ ಮತ್ತು ಒಂದು ...ನಿಂತಿದ್ದವು.

...ಮತ್ತು ಮುಂದೆ ಹೋಗುವ ಹಾಗಿರಲಿಲ್ಲ; ಹಿಂದೆ ...ಯುವ ಹಾಗೂ ಇರಲಿಲ್ಲ. ಡಾಂಬರು ರಸ್ತೆಯಿಂದ ...ಕಡೆಗೆ ಹೋಗುವ ಮಡ್ ರೋಡನ್ನು ಕ್ವಾಲಿಸ್ ...ಕೊಂಡಿತು. ಅಷ್ಟರಲ್ಲಿ ಸೇತುವೆಗೆ ಅಡ್ಡ ಇರಿಸಿದ್ದ ...ಗಳಿಂದ ಜನ ಇಳಿಯುತ್ತಿರುವುದೂ ಅವರಿಗೆ ... ಕ್ವಾಲಿಸ್‌ನಿಂದ ಎಲ್ಲರೂ ಹೊರಗೆ ಹಾರಿ ...ು. ಅವರ ಪೈಕಿ ಒಬ್ಬರು ಮಾತ್ರ-ಭದ್ರಾವತಿಯ ...ಪೀರ್ - ಪೊಲೀಸರ ಕೈಗೆ ಸಿಕ್ಕಿಬಿದ್ದರು. ಉಳಿದ ನಾಲ್ವರು ರಾತ್ರಿಯ ಕತ್ತಲಲ್ಲಿ ನದಿಯ ನಡುವೆ ನಾಪತ್ತೆಯಾದರು. ಜಾವೆದ್ ಮತ್ತು ಸೊಹೈಲ್ ಈಜಿ ದಡ ಸೇರಿ ಪರಾರಿಯಾದರು. ಅಸಿಫ್ ಅವರ ಶವ ಸೆಪ್ಟೆಂಬರ್ 11 ರ ಶುಕ್ರವಾರ ಮುಸ್ಸಂಜೆಯ ಹೊತ್ತಿಗೆ, ಅಂದರೆ ಘಟನೆ ನಡೆದ ಸುಮಾರು 52 ಗಂಟೆ ನಂತರ, ಸಹಸ್ರಲಿಂಗೇಶ್ವರ ದೇವಸ್ಥಾನದ ಬಳಿ ನದೀ ದಡದಲ್ಲಿ ಸಿಕ್ಕಿತು. ಮುಸ್ತಾಫ ಅವರ ಶವ ಸೆಪ್ಟೆಂಬರ್ 12ರ ಶನಿವಾರ ಬೆಳಿಗ್ಗೆ ಬಂಟವಾಳ ಸಮೀಪ ಪತ್ತೆಯಾಯಿತು.

ಉಪ್ಪಿನಂಗಡಿ ಪೊಲೀಸರು ಹಾಗೂ ದ.ಕ. ಜಿಲ್ಲಾ ಎಸ್.ಪಿ.ಯವರ ಪ್ರಕಾರ ಸೆಪ್ಟೆಂಬರ್ 9ರ ರಾತ್ರಿ, ನೇತ್ರಾವತಿ ಕಿರುಸೇತುವೆಯ ಬಳಿ ನಡೆದದ್ದು ಸಂಪೂರ್ಣವಾಗಿ ಪೊಲೀಸು ಕಾರ್ಯಾಚರಣೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾನುವಾರು ಸಾಗಿಸುವವರ ಮೇಲೆ ಮಾಮೂಲಾಗಿ ಹಲ್ಲೆ ನಡೆಸುವ ಯಾವ ಸಂಘಟನೆಯೂ ಅದರಲ್ಲಿ ಪಾಲುಗೊಂಡಿರಲಿಲ್ಲ ಎಂದು ಸಹ ಪೊಲೀಸರು ಸ್ಪಷ್ಟಪಡಿಸುತ್ತಾರೆ. ಆದರೆ ಘಟನೆಯಲ್ಲಿ ಬಂಧಿತವಾಗಿ 7 ದಿನ ಕಸ್ಟಡಿಯಲ್ಲಿದ್ದು ಜಾಮೀನಿನ ಮೇಲೆ ಹೊರಬಂದಿರುವ ದಾದಾಪೀರ್ ಹೇಳುವ ಪ್ರಕಾರ ಸೇತುವೆಗೆ ಅಡ್ಡ ಇರಿಸಿದ್ದ 3 ಗಾಡಿಗಳು ಪೊಲೀಸು ವಾಹನಗಳಲ್ಲ, ದ.ಕ. ಜಿಲ್ಲಾ ಎಸ್.ಪಿ. ಹೇಳುವ ಪ್ರಕಾರ ಉಪ್ಪಿನಂಗಡಿ ಪೊಲೀಸರಿಗೆ ಯಾರಿಂದಲೋ ಸುಳಿವು ಸಿಕ್ಕಿ ಅವರು ಈ ಕಾರ್ಯಾಚರಣೆ ನಡೆಸಿದ್ದಾರೆ. ಈ "ಸುಳಿವು ಕೊಟ್ಟವರು" ತಮ್ಮ ಜನರೊಡನೆ ಸ್ಥಳದಲ್ಲೂ ಹಾಜರಿದ್ದರು ಎಂಬ ಬಲವಾದ ಗುಮಾನಿಯಿದೆ. ಆಸೀಫ್ ಮತ್ತು ಮುಸ್ತಾಫ ಅವರ ಆಕಸ್ಮಿಕ ಮರಣಕ್ಕೆ ಪೊಲೀಸರನ್ನು ಹೊಣೆ ಮಾಡುವುದು ಸರಿಯಲ್ಲ ಎಂದು ಎಸ್.ಪಿ. ಹೇಳಿದ್ದಾರೆ.

ಆದರೆ ಘಟನೆ ನಡೆದ ನಂತರ ನಾಪತ್ತೆಯಾದವರನ್ನು ಹುಡುಕಲು ಪೊಲೀಸರು ಎರಡು ದಿನ ಯಾವ ಪ್ರಯತ್ನವನ್ನೂ ನಡೆಸಲಿಲ್ಲ. ಮೃತರ ಬಂಧು ಬಳಗದವರು, ಉಪ್ಪಿನಂಗಡಿ ಪೊಲೀಸರನ್ನು ಆ ಬಗ್ಗೆ ವಿನಂತಿ ಮಾಡಿಕೊಂಡಾಗ "ಠಾಣೆಯಲ್ಲಿ ಸಾಕಷ್ಟು ಸಿಬ್ಬಂದಿಯಿಲ್ಲ" ಎಂದು ಹೇಳಿ ಸಬ್ ಇನ್ಸ್‌ಪೆಕ್ಟರ್ ತಮ್ಮ ಜವಾಬ್ದಾರಿಯಿಂದ ಕಳಚಿಕೊಂಡಿದ್ದಾರೆ. ಪೊಲೀಸರ ಈ ನಿಷ್ಕ್ರಿಯತೆಯಲ್ಲಿಯೇ ಮೃತರ ಶವ ಪತ್ತೆಯಾಗಲು ಯಾಕೆ ಅಷ್ಟು ತಡವಾಯಿತು ಎಂಬ ಪ್ರಶ್ನೆಗೆ ಉತ್ತರವಿದೆಯೆ? ಮೃತರ ಪೈಕಿ ಕಿರಿಯವನಾದ ಅಸೀಫ್‌ನ ಶವ ಘಟನೆ ನಡೆದ ಎರಡು ದಿನಗಳ ನಂತರ ಪತ್ತೆಯಾದಾಗ ಮೊದಲು ಅದನ್ನು ಗುರುತಿಸಿದ್ದು ಅವರ ಅಣ್ಣ ಶಾಹೀದ್. ಶಾಹೀದ್ ಹೇಳುವ ಪ್ರಕಾರ, "ತನ್ನ ತಮ್ಮನ ಶವ ಅಷ್ಟು ಹೊತ್ತು ನೀರಿನಲ್ಲಿದ್ದರೆ ಅದು ವಿಪರೀತ ಬಾತುಕೊಂಡಿರಬೇಕಾಗಿತ್ತು. ಆದರೆ ಅಸೀಫ್ ಶವ ಹಾಗಿರಲೇ ಇಲ್ಲ, ಶವದ ಹಣೆಯಲ್ಲಿ ಗಾಯದ ಹಸಿ ಗುರುತು ಮತ್ತು ಕುತ್ತಿಗೆಯಲ್ಲಿ ರಕ್ತ ಹೆಪ್ಪು ಗಟ್ಟಿ ನೀಲಿಗೆ ತಿರುಗಿದ್ದು ಕಾಣಿಸುತ್ತಿತ್ತು, ಮುಖ ಮತ್ತು ಬಾಡಿ ಫ್ರೆಶ್ ಆಗಿತ್ತು, ಅಸೀಫ್‌ನಿಗೆ ಈಜು ಬರುತ್ತಿತ್ತು ಎಂದು ಸಹ ಶಾಹೀದ್ ಹೇಳುತ್ತಾರೆ. ಘಟನೆ ನಡೆದ ಜಾಗದಲ್ಲಿ, ನದಿಯ ಹರಿವು, ಈಜು ಬಲ್ಲವ ಮುಳುಗಿ ಸಾಯುವಷ್ಟು ಸೆಳವಿನದ್ದಲ್ಲ. ಈ ಎಲ್ಲ ಕಾರಣಗಳಿಂದ ಘಟನೆಯ ಬಗ್ಗೆ ಪೊಲೀಸರು ಕೊಡುವ ವಿವರಣೆ ಕಟ್ಟುಕತೆಯಂತೆ ಭಾಸವಾಗುತ್ತದೆ. ಆದರೆ ಆ ರಾತ್ರಿಯ ಕತ್ತಲಲ್ಲಿ, ನಿರ್ಜನವಾದ ಸ್ಥಳದಲ್ಲಿ ಸಂಭವಿಸಿದ ಘಟನೆಗೆ ಪ್ರತ್ಯಕ್ಷ ಸಾಕ್ಷಿಗಳು ಪೊಲೀಸರು ಮಾತ್ರ.

ಇದೇ ಏಪ್ರಿಲ್ 1 ರಂದು ಕುಂದಾಪುರ ಸಮೀಪ ಕಂಡ್ಲೂರಿನಲ್ಲಿ ಕರಾಣಿ ಮತೀನ್ ಎಂಬ ಯುವಕ, ಅವನ ಮನೆಯ ಸಮೀಪದಲ್ಲೇ ಹರಿಯುವ ಹೊಳೆಯಲ್ಲಿ ನಡುರಾತ್ರಿ, ಮುಳುಗಿ ಸತ್ತದ್ದರ ಬಗ್ಗೆಯೂ ಕುಂದಾಪುರ ಪೊಲೀಸರು ಇಂತಹದ್ದೇ ವಿವರಣೆ ನೀಡಿದ್ದರು. ಆ ಘಟನೆಗೆ ಅವರು ಮಾತ್ರ ಪ್ರತ್ಯಕ್ಷದರ್ಶಿಗಳಾಗಿದ್ದರು; ಕಂಡ್ಲೂರು ಹೊಳೆಯ ಬದಿಯಲ್ಲಿ ಮತೀನ್ ತನ್ನ ಗಾಡಿ ತೊಳೆಯುತ್ತಿದ್ದ. ಅದರಲ್ಲಿ ಆತ ಜಾನುವಾರು ಸಾಗಿಸಿದ್ದ ಎಂಬ ಸಂದೇಹದ ಮೇಲೆ ಕುಂದಾಪುರ ಪೊಲೀಸರು ಅವನನ್ನು ಹುಡುಕಿಕೊಂಡು ಅಲ್ಲಿಗೆ ಹೋಗಿದ್ದರು; ಆದರೆ ಅವರಿಂದ ತಪ್ಪಿಸಿಕೊಳ್ಳಲು ಮತೀನ್ ಹೊಳೆಗೆ ಹಾರಬೇಕಾದದ್ದಿರಲಿಲ್ಲ.



ಆಸೀಫ್‌ನ ಮೃತದೇಹ...

ಉಪ್ಪಿನಂಗಡಿಯ ಬಳಿ, ನೇತ್ರಾವತಿ ನದಿ ದಡದಲ್ಲಿ ಆ ರಾತ್ರಿ ನಡೆದ ಘಟನೆಯ ಬಗ್ಗೆ ತಮ್ಮ ವಿವರಣೆ ನೀಡುತ್ತ ದ.ಕ. ಜಿಲ್ಲಾ ಎಸ್.ಪಿ. ಅಸೀಫ್, ಮುಸ್ತಾಫ ಮತ್ತು ಇತರರು ಜಾನುವಾರು ಸಾಗಿಸುತ್ತಿದ್ದ ಕ್ವಾಲಿಸ್ ಗಾಡಿ, ಕದ್ದ ಮಾಲು ಎಂದು ಹೇಳಿದ್ದಾರೆ. ಈ ಗಾಡಿಯ ಮಾಲೀಕ ಶಂಸುದ್ದೀನ್, ತಾವು ಕೆಲವು ತಿಂಗಳ ಹಿಂದೆ ಕಾಪುವಿನ ರಜಾಕ್ ಎಂಬವರಿಂದ ಗಾಡಿಯನ್ನು ಖರೀದಿಸಿದ್ದಾಗಿಯೂ, ಆ ಬಗ್ಗೆ ಮಂಗಳೂರಿನ ಶ್ರೀರಾಮ್ ಫೈನಾನ್ಸ್‌ನಲ್ಲಿ ಎತ್ತಿದ ಸಾಲದ ಕಂತನ್ನು ಈಗಲೂ ಕಟ್ಟುತ್ತಿರುವುದಾಗಿಯೂ, ಗಾಡಿ ಖರೀದಿಯ ಬಗ್ಗೆ ತನ್ನ ಬಳಿ ಎಲ್ಲ ಡಾಕ್ಯುಮೆಂಟ್‌ಗಳೂ ಇವೆ ಎಂದೂ ಹೇಳುತ್ತಾರೆ.

ಘಟನೆಯಲ್ಲಿ ಪೊಲೀಸರು ಈವರೆಗೆ ಬಂಧಿಸಿರುವ ಏಕಮಾತ್ರ ವ್ಯಕ್ತಿ ದಾದಾಪೀರ್‌ನ ಮೇಲೂ ಕಳ್ಳತನದ ಆರೋಪವಿದೆ. ಅವರ ವಿರುದ್ಧ ಪೊಲೀಸರು ಕರ್ನಾಟಕ ಗೋಸಂರಕ್ಷಣಾ ಕಾಯ್ದೆಯ ಸೆಕ್ಷನ್ 4,5 ಮತ್ತು 8, (ಎಮ್ಮೆ, ಹಸು ಮತ್ತು ಕರುಗಳನ್ನು ನಿಷ್ಕಾರಣವಾಗಿ ಕೊಲ್ಲುವುದು, ಪೂರ್ವಾನುಮತಿ ಇಲ್ಲದೆ ಜಾನುವಾರುಗಳನ್ನು ಕೊಲೆಗಾಗಿ ಸಾಗಿಸುವುದು) ಪ್ರಾಣಿ ಹಿಂಸೆ ನಿಷೇಧ ಕಾಯ್ದೆಯ ಸೆಕ್ಷನ್ 11B ರ ಜೊತೆ ಕ್ರಿಮಿನಲ್ ಕಾಯಿದೆ ಸೆಕ್ಷನ್ 379 (ಕಳ್ಳತನ) ... ದಾಖಲಿಸಿದ್ದಾರೆ. ದಾದಾಪೀರ್ ... ಭದ್ರಾವತಿ ... ಯುವರಾದರೂ ಈಗ ಬಜಪೆಯಲ್ಲಿ ... ಅವರಿಗೆ ಮದುವೆಯಾಗಿದ್ದು ಎರಡು ಮಕ್ಕಳು ... ಅವರಿಗೆ ಹೆಣ್ಣು ಕೊಟ್ಟ ಮಾವ ಇಬ್ರಾಹಿಂ ... ಕೊಂಜಾರು ಶಾಂತಿ ಗುಡ್ಡೆಯಲ್ಲಿ ಮನೆ ಮಾಡಿಕೊಂಡಿದ್ದಾರೆ. ಇಬ್ರಾಹಿಂಗೆ ಮೂವರು ಹೆಣ್ಣು ಮಕ್ಕಳಿದ್ದು ಅವರಲ್ಲಿ ಇಬ್ಬರಿಗೆ ಮದುವೆಯಾಗಿದೆ. ಮೊನ್ನೆಯ ಘಟನೆಯಲ್ಲಿ ನದಿಯಲ್ಲಿ ಮುಳುಗಿ ಸತ್ತ ಮುಸ್ತಾಫ, ಇಬ್ರಾಹಿಂ ಅವರ ಮೊದಲನೆಯ ಅಳಿಯ. ಇಬ್ರಾಹಿಂ ವೃತ್ತಿಯಲ್ಲಿ ಲಾರಿ ಡ್ರೈವರ್. ಆದರೆ ಅವರೇ ಹೇಳುವ ಪ್ರಕಾರ ಕಳೆದ ಮೂರು ತಿಂಗಳಿನಿಂದ ಅವರಿಗೆ ಟ್ರಿಪ್ ಸಿಗುತ್ತಿಲ್ಲ. ಮುಸ್ತಾಫ ಅವರಿಗೆ ಎರಡು ಮಕ್ಕಳಿದ್ದು ಅವರ ಮನೆ ಕೊಂಜಾರು ಶಾಂತಿ ಗುಡ್ಡೆಯಲ್ಲಿ ಇಬ್ರಾಹಿಂ ಮನೆ ಸಮೀಪವೇ ಇದೆ.

ನಾವು ಅಲ್ಲಿಗೆ ಹೋದಾಗ ಮನೆಯಲ್ಲಿ ಗಂಡಸರು ಯಾರೂ ಇರಲಿಲ್ಲ; ಮುಸ್ತಾಫ ಅವರ ಅಣ್ಣನ ಹೆಂಡತಿ ಮಾತ್ರ ಇದ್ದು ಅವರು ಬೀಡಿ ಕಟ್ಟುತ್ತಿದ್ದರು. ಘಟನೆಯಲ್ಲಿ ಮೃತನಾದ ಇನ್ನೊಬ್ಬ ತರುಣ ಅಸೀಫ್‌ನ ಅಣ್ಣ ಶಾಹೀದ್ ಮಂಗಳೂರಿನ ಸಾಹುಕಾರರೊಬ್ಬರ ಲಾರಿಯಲ್ಲಿ ಡ್ರೈವರ್ ಆಗಿದ್ದು ಕಡೂರು ಮಂಗಳೂರು ನಡುವೆ ರೆಗ್ಯುಲರ್ ಎಳನೀರು ಟ್ರಿಪ್ ಮಾಡುತ್ತಾರೆ. ಅಸೀಫ್‌ನ ಇನ್ನೊಬ್ಬ ಅಣ್ಣ ದಾವೂದ್ ಮಂಗಳೂರಿನ ಪ್ಲೈವುಡ್ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಾರೆ. ಮುಸ್ತಾಫ, ಆಸೀಫ್, ದಾದಾಪೀರ್, ಜಾವೇದ್ ಮತ್ತು ಸೊಹೈಲ್ ಜಾನುವಾರು ಕಳ್ಳರೋ? ಅವರು ಜಾನುವಾರು ಸಾಗಿಸುತ್ತಿದ್ದ ಕ್ವಾಲಿಸ್ ಗಾಡಿ ಕಳವು ಮಾಡಿದ್ದೋ? ಆ ಬಗ್ಗೆ ನಾವು ಖಚಿತವಾಗಿ ಏನೂ ಹೇಳಲಾರೆವು. ಆದರೆ ಕೊಂಜಾರು ಶಾಂತಿಗುಡ್ಡೆಯಲ್ಲಿರುವ ಮೃತರ ಮನೆಗಳಿಗೆ ಹೋದರೆ, ಆ ಮನೆಯವರು ಒಂದಲ್ಲ ಒಂದು ಉದ್ಯೋಗ ಮಾಡಿಕೊಂಡಿರುವುದರ ಜೊತೆಗೆ ಕಡುಬಡವರಾಗಿರುವುದೂ ಮನವರಿಕೆಯಾಗುತ್ತಿದೆ. ಅಥವಾ ಬಡತನವೂ ಕಳ್ಳತನಕ್ಕೆ ಒಂದು ಪುರಾವೆಯೋ?

ಆಸೀಫ್ ಮತ್ತು ಮುಸ್ತಾಫ ಅವರ ಅಕಾಲ ಮರಣ ಆಕಸ್ಮಿಕವೋ ಅಥವಾ ಕೊಲೆಯೊ ಎಂಬ ಬಗ್ಗೆಯೂ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಆ ಘಟನೆಯ ಕುರಿತು ಪೊಲೀಸರ ವಿವರಣೆ ನೂರಕ್ಕೆ ನೂರು ಸತ್ಯ ಎಂದು ಭಾವಿಸಿದರೂ ಆ ತರುಣರಿಬ್ಬರ ಸಾವು ಅನಿವಾರ್ಯವಾಗಿತ್ತೆ ಎಂಬ ಪ್ರಶ್ನೆಯನ್ನು ಮಾತ್ರ ನಾಗರಿಕ ಸಮಾಜ ಕೇಳಲೇಬೇಕು. ಈ ತರುಣರು ತಾವಾಗಿ ನದಿಯಲ್ಲಿ ಮುಳುಗಿ ಸತ್ತರು ಎಂದೇ ಇಟ್ಟುಕೊಂಡರೂ ಅದು ಅವರ ಆಯ್ಕೆ ಆಗಿರಲಿಲ್ಲ; ಅದು ಆಕಸ್ಮಿಕವೂ ಅಲ್ಲ.

ಈ ದುರಂತದ ಹಿಂದೆ ಕರ್ನಾಟಕದ ಸಮಕಾಲೀನ ರಾಜಕೀಯದ ಒತ್ತಡಗಳಿವೆ. ಅಸೀಫ್, ಮುಸ್ತಾಫ ಮತ್ತು ಇತರರು ಆವತ್ತು ತಮ್ಮ ಕ್ವಾಲಿಸ್ ಗಾಡಿಯಲ್ಲಿ ಜಾನುವಾರುಗಳನ್ನು "ಅಮಾನುಷವಾಗಿ" ಸಾಗಿಸುತ್ತಿದ್ದರು ಎಂದು ಮಾಧ್ಯಮಗಳು ವರದಿ ಮಾಡಿವೆ. ಅಸಿಫ್ ಮತ್ತು ಮುಸ್ತಾಫ ಅವರ ಅಕಾಲ ಮರಣ, ಮನುಷ್ಯ ಸಮಾಜಕ್ಕೆ ಒಪ್ಪುವಂತಹದ್ದೆ? ಈ ದುರ್ಘಟನೆಯ ಬಗ್ಗೆ ಉಪ್ಪಿನಂಗಡಿಯ ಜನರಲ್ಲಿ ತೀವ್ರ ಸಂತಾಪವಿದೆ; ಸಂದೇಹವೂ ಇದೆ. ಆದರೆ ಇಲ್ಲಿ ಪ್ರತಿಭಟನೆಯ ಸೊಲ್ಲೂ ಕೇಳಿಸದಂತೆ ಪೊಲೀಸರು ನೋಡಿಕೊಂಡಿದ್ದಾರೆ. ಇಲ್ಲಿನ ಸಂಸದರಿಗೆ ಇಬ್ಬರು ತರುಣರ ಸಾವು ಕಾನೂನು ಸುವ್ಯವಸ್ಥೆಯ ಪ್ರಶ್ನೆಯಾಗಿ ಮಾತ್ರ ಕಂಡಿದೆ.

ಇದು ಅಮಾನುಷವಲ್ಲವೆ?

● ಜಿ. ರಾಜಶೇಖರ

ಧಿಕ್ಕಾರವಿರಲಿ

● ಕಲಿಗಣನಾಥ ಗುಡದೂರು

...ಸೇವಕರ ಅಂಜಿಸಿ, ಪೂಜೆಗೊಳುವ,
... ಧರ್ಮಗಳ ಹೆಸರಲಿ ಮನಸುಗಳ
...ಗೊಳಿಸುವ ದರಿದ್ರ ದೇವರುಗಳಿಗೆ
...ವಿರಲಿ

...ರ ಶ್ರಮಜೀವಿಗಳ ಶಕ್ತಿಯನೂ
... ಕದ್ದು ಮಾರಿ ಮುಕುಳಿ, ಬಾಯಿಯೆಸ್ಥಡ
...ಕೊಳುವ ತಿರಬೋಕಿ ಸಿರಿವಂತರಿಗೆ
...ವಿರಲಿ

ನೋಟಿನಿಂದಲೇ ಓಟು ಖರೀದಿಸಿ
ಪ್ರಜಾಪ್ರಭುತ್ವವೆಂಬ ಹುಚ್ಚು ಕೋತಿಗೆ
ಹೆಂಡ ಕುಡಿಸಿ ಆಟವಾಡಿಸುವ ಠಕ್ಕ
ರಾಜಕಾರಣಿಗಳಿಗೆ ಧಿಕ್ಕಾರವಿರಲಿ

ಜನರ ರಕ್ಷಕರೆಂಬ ಮುಖವಾಡ ಧರಿಸಿ
ಜನನಾಯಕರನೇ ಕಾಯುವ ನಾಲಾಯಕ್ಕು
ನಾಲ್ಕು ನಾಯಿಗಳಿಗೆ ಧಿಕ್ಕಾರವಿರಲಿ

ಹಬ್ಬ ಹರಿದಿನ, ಜಾತ್ರೆ, ಯಾತ್ರೆಯ ಹೆಸರಲಿ
ಹಸಿರ ಮೇಯುವ, ಬರಿಮೈಯಲಿದ್ದೂ
ಬಟ್ಟೆ ಉಟ್ಟವರ ಮಾನ ಕಳೆಯುವ ಮುಂಡ
ಪೂಜಾರಿಗಳಿಗೆ ಧಿಕ್ಕಾರವಿರಲಿ

ಜನರ ನೋವಿಗೆ ಕೋವಿಯಾದ ಜೀವಗಳ
ಸಾಯಿಸುವ, ಹೋರಾಟದ ಬಗ್ಗೆ ನಗೆಬುಗ್ಗೆಯುಕ್ಕಿಸುವ
ನರರಾಕ್ಷಸರಿಗೆ, ರಕ್ತದ ರುಚಿಗೆ ಉಪ್ಪು, ಖಾರ ಬೆರೆಸಿ
ಚಪ್ಪರಿಸುವ ಚರಿತ್ರಹೀನರಿಗೆ ಧಿಕ್ಕಾರವಿರಲಿ

ಸುತ್ತ ನೂರೆಂಟು ದುಃಖ, ದುಮ್ಮಾನವಿದ್ದರೂ
ಸಂಸಾರದ ನೊಗಕೆ ಕೊರಳೊಡ್ಡಿ ಕುರುಡಾದವರಿಗೆ,
ಶಕ್ತಿಯಿದ್ದೂ ಅಸಹಾಯಕರಂತೆ ನಟಿಸುವ
ನನ್ನಂಥವರಿಗೂ ದೊಡ್ಡ ಧಿಕ್ಕಾರವಿರಲಿ.



ವಿದ್ಯಾಕ್ರಮದಲ್ಲೇ ವ್ಯತ್ಯಾಸ ಎಷ್ಟು ಸರಿ?

"ಇಂದು ಶಿಕ್ಷಣ ಕ್ಷೇತ್ರದಲ್ಲಿ ಮಾತೃಭಾಷಾ ಮಾಧ್ಯಮದ ಕುರಿತು ಮಾತ್ರ ಚರ್ಚೆಯಾಗುತ್ತಿದೆಯೇ ಹೊರತು ಇತರ ಪಠ್ಯಕ್ರಮಗಳ ಕುರಿತು ಶಿಕ್ಷಣ ತಜ್ಞರು ಗಮನಹರಿಸಿದಂತೆ ಕಾಣಿಸುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಉಳ್ಳವರು ಮತ್ತು ಕಡಿಮೆ ಉಳ್ಳವರ ನಡುವೆ ಗೆರೆ ಎಳೆಯುವಂತಹ ಒಂದು ಪ್ರಯತ್ನ ಯಾರ ಗಮನಕ್ಕೂ ಬಾರದಂತೆ ನಡೆಯುತ್ತಲೇ ಇದೆಯೇನೋ ಎಂಬ ಅನಿಸಿಕೆ ನನ್ನದು.

ವಿದೇಶೀಯರು ಈ ದೇಶಕ್ಕೆ ಕಾಲಿಟ್ಟ ಬಳಿಕ ಇಲ್ಲಿನ ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ದಲಿತರು ಅಕ್ಷರದ ಮುಖ ಕಾಣುವಂತಾದುದು ನಿಜ. ಅವರೆಗೂ ಅಕ್ಷರವೆಂಬುದು ಸಂಸ್ಕೃತ ಮತ್ತು ವೇದಪಾಠಗಳಿಗೆ ಮಾತ್ರ ಸೀಮಿತಗೊಂಡಿದ್ದದ್ದು ಬ್ರಿಟಿಷರು ಜನಸಾಮಾನ್ಯರ ಆಡು ಭಾಷೆ ಕನ್ನಡವನ್ನೇ ಎಲ್ಲ ಜನರಿಗೆ ಪರಿಚಯಿಸಿದ ಬಳಿಕ ಶಿಕ್ಷಣವೆಂಬುದು ಸರ್ವರಿಗೂ ಎಟಕುವಂತಾಯಿತು. ಅವರು ಇಂಗ್ಲಿಷ್ ಮಾಧ್ಯಮದಲ್ಲೇ ಶಿಕ್ಷಣ ನೀಡಲಾರಂಭಿಸಿದರೂ ರಾಜ್ಯಭಾಷೆಯನ್ನು ಮೂಲೆಗೊತ್ತರಿಸಲಿಲ್ಲ. ಹೀಗಾಗಿಯೇ ಹೈಸ್ಕೂಲ್ ತರಗತಿಗಳಲ್ಲಿ ನನ್ನ ಅಣ್ಣಂದಿರು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಮುಂದುವರಿಸಿದರೂ ಕನ್ನಡ ಭಾಷೆಯಲ್ಲೂ ಅಷ್ಟೇ ಪರಿಣತಿ ಪಡೆದು ಹಳೆಗನ್ನಡ, ಹೊಸಗನ್ನಡ ಎಲ್ಲವನ್ನೂ ಅರಗಿಸಿಕೊಂಡಿದ್ದರು.

ಜನಸಾಮಾನ್ಯರಿಗಾಗಿ ಈ ಶಿಕ್ಷಣ ಪದ್ಧತಿ ಮುಂದುವರಿದರೂ ಬಿಳಿಯರ ಮಕ್ಕಳಿಗಾಗಿ ಅಂದು ಊಟಿ, ಕೊಡೈಕೆನಾಲ್, ಡೆಹರಾಡೂನ್ ಮುಂತಾದೆಡೆಗಳಲ್ಲಿ ವಿಶೇಷವಾದ ರೆಸಿಡೆನ್ಶಿಯಲ್ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಸಮಾಜದ ಶ್ರೀಮಂತರ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಯಿತು. ಬಿಳಿಯರು ಇಲ್ಲಿಂದ ಕಾಲ್ತೆಗೆದರೂ ಈ ಶಾಲೆಗಳು ಶ್ರೀಮಂತರ ಮಕ್ಕಳಿಗಾಗಿ ಮುಂದುವರಿದವು. ಎಕ್ರೆಗಟ್ಟಲೆ ಕಾಫಿತೋಟವನ್ನು ಹೊಂದಿದವರ ಮಕ್ಕಳು, ಅಂದಿನ ರಾಜಮಹಾರಾಜರ ಮಕ್ಕಳು, ಟಾಟಾ, ಬಿರ್ಲಾರಂತಹ ವಾಣಿಜ್ಯೋದ್ಯಮಿಗಳು, ಬೃಹತ್ ಕೈಗಾರಿಕೋದ್ಯಮಿಗಳು, ಕೇಂದ್ರ ಸರ್ಕಾರದ ಮಂತ್ರಿಗಳು ಮತ್ತು ಇನ್ನಿತರ ಆಗರ್ಭ ಶ್ರೀಮಂತರ ಮಕ್ಕಳು ಈ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಾದರು. ರಕ್ಷಣಾ ಇಲಾಖೆ, ಆಡಳಿತ ಸೇವೆ ಮುಂತಾದೆಡೆಗಳಲ್ಲಿ ಇವರು ಸುಲಭವಾಗಿ ಪ್ರವೇಶ ಪಡೆಯುವ ಸಾಮರ್ಥ್ಯ ಪಡೆದುಕೊಂಡರು.

ಬಿಳಿಯರು ಜನಸಾಮಾನ್ಯರಿಗಾಗಿ ಆಯಾ ರಾಜ್ಯ ಭಾಷೆಗಳಲ್ಲಿ ಶಿಕ್ಷಣವನ್ನಾರಂಭಿಸಿದ ಕಾರಣ ಇಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲರಿಗೂ ಏಕರೂಪದ ಶಿಕ್ಷಣ ದೊರೆಯತೊಡಗಿತು. ಇಲ್ಲಿ ಶಿಕ್ಷಣ ಪಡೆದವರೂ ಇಂಜಿನಿಯರ್, ಡಾಕ್ಟರ್, ಆಡಳಿತಾಧಿಕಾರಿ ಮುಂತಾದ ಉದ್ಯೋಗ ಪಡೆಯಲು ಸಾಧ್ಯವಾಯಿತು. ಇಂತಹ ವೃತ್ತಿಪರ ಕಾಲೇಜುಗಳು ಸರ್ಕಾರದ ಆಡಳಿತದಲ್ಲಿದ್ದು ಪ್ರತಿಭೆ ಮತ್ತು ಆಯಾ ಜಾತಿ, ಧರ್ಮದ ಜನಸಂಖ್ಯೆಗನುಗುಣವಾಗಿ ಆ ಸಮುದಾಯದ ಪ್ರತಿಭಾವಂತರಿಗೆ ಈ ಶಿಕ್ಷಣ ಸೌಲಭ್ಯ ದೊರೆಯತೊಡಗಿತು.

ಬ್ರಿಟಿಷರು ಈ ದೇಶದಿಂದ ಕಾಲ್ತೆಗೆಯುತ್ತಿದ್ದಂತೆ ನಿಯಮಗಳು ಬದಲಾಗತೊಡಗಿದವು ಹಾಗೂ ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳು ಹುಟ್ಟತೊಡಗಿದವು. ಆರ್ಥಿಕವಾಗಿ ಮುಂದುವರಿದವರು ಈ ಶಾಲೆಗಳತ್ತ ಮುಖ ಮಾಡತೊಡಗಿದರು. ಪ್ರಾರಂಭದಲ್ಲಿ ಈ ಶಾಲೆಗಳಲ್ಲಿ ಚೆನ್ನಾಗಿ ತರಬೇತಿ ಪಡೆದ ಶಿಕ್ಷಕರಿದ್ದು ಇಂಗ್ಲಿಷ್ ಮಾಧ್ಯಮ ಮತ್ತು ಕನ್ನಡ ಪಾಠಗಳನ್ನೂ ಚೆನ್ನಾಗಿ ಕಲಿಸುವ ವ್ಯವಸ್ಥೆ ಇತ್ತು, ವರ್ಷಗಳುರುಳಿದಂತೆ ಈ ಶಾಲೆಗಳು ಹಣ ಗಳಿಸುವ ಸಂಸ್ಥೆಗಳಾಗಿ ಬದಲಾಗತೊಡಗಿದವು. ಒಂದು ತರಗತಿಯಲ್ಲಿ ಎಪ್ಪತ್ತಕ್ಕಿಂತ ಅಧಿಕ ವಿದ್ಯಾರ್ಥಿಗಳಿದ್ದು ಇವರಿಗೆ ಶಿಕ್ಷಣ ನೀಡಲು ಸಮನಾಗಿ ಇಂಗ್ಲಿಷೂ ತಿಳಿಯದ, ಶಿಕ್ಷಕ ತರಬೇತಿ ಪಡೆಯದ ಶಿಕ್ಷಕರನ್ನು ನೇಮಕ ಮಾಡಲಾಗುತ್ತಿತ್ತು, ಹೀಗಾಗಿ ಶಿಕ್ಷಣದ ಗುಣಮಟ್ಟವೂ ಕಳೆಪೆಯಾಗತೊಡಗಿತು. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಮಕ್ಕಳ ಪರಿಣತಿ ಅಷ್ಟಕಷ್ಟೆ ಎಂಬಂತಾಯಿತು. ಸರ್ಕಾರೀ ಆಡಳಿತದ ಕನ್ನಡ ಮಾಧ್ಯಮ ಶಾಲೆಗಳು ಆರ್ಥಿಕವಾಗಿ ತೀರಾ ಹಿಂದುಳಿದವರದಾಗಿದ್ದು ಅಲ್ಲಿಯೂ ಶಿಕ್ಷಣದ ಗುಣಮಟ್ಟ ಕಳೆಪೆಯಾಯಿತು.

ಸ್ವಾತಂತ್ರ್ಯ ದೊರೆತ ಬಳಿಕ ಸರ್ಕಾರ ಕೇಂದ್ರ ಸರ್ಕಾರದ ಉದ್ಯೋಗಿಗಳ ಮಕ್ಕಳಿಗೆಂದು ಕೇಂದ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಿತು. ಇಲ್ಲಿ ಏನೇನೂ ಖರ್ಚು ಇಲ್ಲದಿದ್ದರೂ ಜನಸಾಮಾನ್ಯರ ಮಕ್ಕಳಿಗೆ ಪ್ರವೇಶವಿಲ್ಲ, ಕೇಂದ್ರ ಸರ್ಕಾರದ ಉದ್ಯೋಗದಲ್ಲಿರುವವರಲ್ಲಿ 75 ಶೇಕಡಾ ಜನರು ಮೇಲ್ಜಾತಿಯವರಾಗಿದ್ದಾರೆಂಬುದನ್ನು ಬೇರೆ ಹೇಳಬೇಕಾಗಿಲ್ಲವಲ್ಲ? ಕೇಂದ್ರೀಯ ವಿದ್ಯಾಲಯದ ಸಿಲೆಬಸ್ ಸಾಮಾನ್ಯ ಶಾಲೆಗಳಿಗಿಂತ ಭಿನ್ನವಾಗಿದ್ದು (CBSE) (Central Board of Secondary Education) ಪಠ್ಯಕ್ರಮ ಈ ಶಾಲೆಗಳಲ್ಲಿವೆ. ಇಲ್ಲಿ ಹೈಸ್ಕೂಲ್ ತರಗತಿಗಳಲ್ಲೇ ಗಣಿತ ಮತ್ತು ವಿಜ್ಞಾನವನ್ನು ಅರೆದು ಕುಡಿಸಲಾಗುತ್ತಿದೆ. ಹೀಗಾಗಿ ಇವರು ಪದವಿ ಪೂರ್ವ ತರಗತಿಗಳಲ್ಲಿ ಗಣಿತ ಮತ್ತು ವಿಜ್ಞಾನದಲ್ಲಿ ಹಿಂದೆ ಬೀಳುವ ಸಾಧ್ಯತೆ ಕಡಿಮೆ. ನಮ್ಮ ಸರ್ಕಾರೀ ಪಠ್ಯಕ್ರಮದಲ್ಲಿ ಕಲಿತ ಮಕ್ಕಳಿಗೆ, ಅವರು ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆದಿದ್ದರೂ ಕಳಪೆ ಗುಣಮಟ್ಟದ ಶಿಕ್ಷಣದಿಂದಾಗಿ ಮತ್ತು ಸಾಮಾನ್ಯ ಪಠ್ಯಕ್ರಮದಿಂದಾಗಿ ಗಣಿತ ಮತ್ತು ವಿಜ್ಞಾನ ಇವರಿಗೆ ಕಬ್ಬಿಣದ ಕಡಲೆಯಾಗುತ್ತದೆ. ಹೀಗಾಗಿ ಬಹಳಷ್ಟು ವಿದ್ಯಾರ್ಥಿಗಳು ಪದವಿಪೂರ್ವ ತರಗತಿಗಳಲ್ಲಿ ಅನುತ್ತೀರ್ಣರಾಗುತ್ತಾರೆ. ಪ್ರತಿಭೆ ಇದ್ದರೂ ಸಮನಾದ ತರಬೇತಿ ಇಲ್ಲದೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವುದೂ ಕಷ್ಟವಾಗುತ್ತದೆ. ಈ



ವಿದ್ಯಾರ್ಥಿಗಳಿಗೆ CBSE ವಿದ್ಯಾರ್ಥಿಗಳೊಡನೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ.

ಹೀಗಾಗಿ ಪದವಿ ಪೂರ್ವ ತರಗತಿಗಳಲ್ಲಿ ಈ ವಿದ್ಯಾರ್ಥಿಗಳು ವಿಜ್ಞಾನ ಮತ್ತು ಗಣಿತ ತರಗತಿಗೆ ಪ್ರವೇಶ ಕೇಳಿದರೆ ಪ್ರಾಂಶುಪಾಲರು, ಗಣಿತದ ಪುಸ್ತಕವನ್ನು ತಮ್ಮ ಬಳಿ ಇಟ್ಟುಕೊಂಡು ಈ ವಿದ್ಯಾರ್ಥಿಗಳಿಗೆ ತೋರಿಸುತ್ತಾ "ಇದನ್ನು ಕಲಿಯಲು ನಿಮ್ಮಿಂದ ಸಾಧ್ಯವಾಗದು. ಆದುದರಿಂದ ನೀವು ವಾಣಿಜ್ಯ ಅಥವಾ ಕಲಾ ವಿಭಾಗಕ್ಕೆ ಅರ್ಜಿ ಹಾಕಿ" ಎಂದು ಅವರನ್ನು ನಿರುತ್ಸಾಹಗೊಳಿಸುತ್ತಾರೆ. ಗಣಿತ ಪುಸ್ತಕ ನೋಡಿಯೇ ಮಕ್ಕಳು ಬೆಚ್ಚಿ ಬೀಳುತ್ತಾರೆ! ಸಿಬಿಎಸ್ಇ ಅಥವಾ ಐಸಿಎಸ್ ಸಿಲೆಬಸ್‌ನಲ್ಲಿ ಎಸ್‌ಎಸ್‌ಎಲ್‌ಸಿ ತೇರ್ಗಡೆಯಾದವರಿಗೆ ಇಲ್ಲಿ ಗಣಿತ ಮತ್ತು ವಿಜ್ಞಾನಕ್ಕೆ ಪ್ರವೇಶ ನೀಡಲಾಗುತ್ತದೆ. ಹೈಸ್ಕೂಲಿನಲ್ಲಿ ಈ ಗಣಿತ ಮತ್ತು ವಿಜ್ಞಾನವನ್ನು ಅರಗಿಸಿಕೊಂಡ ಮಕ್ಕಳಿಗೆ ಈ ಪಾಠಗಳು ಏನೂ ತೊಂದರೆ ಕೊಡದೆ ಪದವಿ ಪೂರ್ವದ ಎರಡು ವರ್ಷದ ಕೊನೆಯಲ್ಲಿ ಇವರು 1… ಫಲಿತಾಂಶ ಮತ್ತು ಕೆಲವು ರ್‍ಯಾಂಕುಗಳೊಡನೆ ತೇರ್ಗ… ಕಾಲೇಜಿಗೆ ಖ್ಯಾತಿ ತರುತ್ತಾರೆ. ಮುಂದಿನ ವರ್ಷ … ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಜಿ ಹಾಕುತ್ತಾರೆ… ಸಿಬಿಎಸ್ಇ ಗುಟ್ಟು ತಿಳಿದುಕೊಂಡ ಹೆತ್ತವರು ಅಂತಹ ಶಾಲೆಗಳನ್ನು ಹುಡುಕಿಕೊಂಡು ಹೋಗು… ಅಲ್ಲಿ ಪ್ರವೇಶಕ್ಕೆ ೨೫,೦೦೦ ಲಕ್ಷದವರೆಗೂ … ಶುಲ್ಕ ನೀಡಬೇಕಾಗಿದ್ದರೂ ತಮ್ಮ ಮಕ್ಕಳನ್ನೂ ಅಲ… ತರಗತಿಗೆ ಸೇರಿಸುತ್ತಾರೆ. ಹಣವಂತರೂ ಇ… ಸಮಸ್ಯೆಯಾಗಿರುವುದಿಲ್ಲ, ಮುಂದೆ ಇವರು ಇಂಜಿನಿ… ಡಾಕ್ಟರ್, ಆಡಳಿತಾಧಿಕಾರಿ ಅಥವಾ ಇನ್ನಾವುದಾ… ದೊಡ್ಡ ಉದ್ಯೋಗ ಪಡೆಯುವುದು ಇವರ ಗುರಿ. ವಾ… ಮತ್ತು ಕಲಾ ತರಗತಿಗೆ ಸೇರಿದವರು ಹೇಗಾ… ಒಂದು ಪದವಿ ಪಡೆದು ಎಲ್ಲೋ ಒಂದು ಗು… ಕಾವಲುಗಾರ ಅಥವಾ ನಿರುದ್ಯೋಗಿಗಳಾಗಿ … ಕಳೆಯುತ್ತಾರೆ. ಉಳ್ಳವರು ಮತ್ತು ಕಡಿಮೆ ಉ… ನಡುವೆ ವಿದ್ಯಾಕ್ರಮದಲ್ಲೇ ವ್ಯ… ಪ್ರಾರಂಭವಾಗಿದೆ. ಇಂದಿನ ದು… ವೆಚ್ಚದಿಂದಾಗಿ ಆರ್ಥಿಕವಾಗಿ ಹಿಂದುಳಿದ… ಉನ್ನತ ವ್ಯಾಸಂಗಕ್ಕೆ ಅವಕಾಶವೇ ಇಲ್ಲ…

ಈಗ CBSE ಮತ್ತು ICSE ಪಠ್ಯ… ಶಾಲೆಗಳು ಅಲ್ಲಲ್ಲಿ ಹುಟ್ಟಿಕೊಳ್ಳುತ್ತಿವೆ. ಹ… ವರ್ಷಗಳ ಹಿಂದೆ ಇಂಗ್ಲಿಷ್ ಮಾಧ್ಯಮ ಶಾ… ಪ್ರವೇಶಕ್ಕೆ ಉಂಟಾಗಿದ್ದ ಪರದಾಟದಂತೆ ಈ ಶಾಲೆಗಳ ಪ್ರವೇಶಕ್ಕೆ ನೂಕುನು… ಪ್ರಾರಂಭವಾಗಿದೆ. ಹಳ್ಳಿಯ ಹಿಂದು… ಮಕ್ಕಳನ್ನು ಉತ್ತಮ ಶಿಕ್ಷಣದ… ವಿಮುಖಗೊಳಿಸುವಂತಹ ಹೊಸ ಪರಿಪಾ… 'ನಲಿ-ಕಲಿ' ಎಂಬ ಹೆಸರಿ… ಪ್ರಾರಂಭವಾಗಿದೆಯೆಂದು ಕೇಳಿದ… ಪಠ್ಯಪುಸ್ತಕಗಳಿಲ್ಲದೆ, ಬರಹವಿಲ್ಲದೆ … ಕೈಗೊಂದು ಕಾರ್ಡು ನೀಡಿ ಶಿಕ್ಷಣ ನೀಡುವ … ಪದ್ಧತಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. CB… ಮತ್ತು ICSE ಇಂಗ್ಲಿಷ್ ಮಾಧ್ಯಮಗಳಿಂದ ಜನ… ಹಿಂತಿರುಗಿಸುವ ಒಂದು ಯೋಜನೆ ಇದಾಗಿರಬಹು… ತಮ್ಮ ಮಕ್ಕಳಿಗೆ ಸ್ಪರ್ಧಿಗಳು ಕಮ್ಮಿಯಾಗಲಿ … ಆಶಯವೂ ಈ ಯೋಜನೆಯ ಹಿಂದಿರಬಹುದೇ…


ಈಗ CBSE ಪಠ್ಯಕ್ರಮದಲ್ಲೂ ಹೊಸ ಯೊ… ಆರಂಭವಾಗುತ್ತಿದೆ. ಓದನ್ನು ಮುಂದುವರಿಸಲಿಚ್ಛಿಸುವ… ಮಾತ್ರ ಪರೀಕ್ಷೆಗೆ ಕುಳಿತುಕೊಂಡರೆ ಸಾಕು. ಪ… ಐಚ್ಛಿಕ ಎಂಬುದು ಈ ಯೋಜನೆ. ಪರ… ಐಚ್ಛಿಕವೆಂದಾದರೆ ಕಮ್ಮಿ ಪ್ರತಿಭಾವಂತರು ಓದಿನಲ್ಲಿ … ಹಿಂದುಳಿದು ಅಷ್ಟಕ್ಕೇ ಶಿಕ್ಷಣವನ್ನು ನಿಲ್ಲಿಸುತ್ತಾರೆ. ಉ… ವಿದ್ಯಾಭ್ಯಾಸಕ್ಕೆ ಸ್ಪರ್ಧೆಗಳು ಕಮ್ಮಿಯಾಗುವುದು ಈ ಪ… ಇಲ್ಲದ ಶಿಕ್ಷಣದ ಉದ್ದೇಶವೇ?

● ಸಾರಾ ಅಬೂಬಕ…

'ಸುಂದರ'ವಾಗಿ ವಿಕಾರವಾಗುತ್ತಿರುವ ಬೆಂಗಳೂರು!

►►►2

ಆದರೆ ಈ ರೀತಿ ಜನರನ್ನು ಹೊರಗಟ್ಟುವ ಸೌಂದರ್ಯ ನಿಜಕ್ಕೂ ಸೌಂದರ್ಯವೇ! ಹಾಗಿದ್ದಲ್ಲಿ ಈ ಸೌಂದರ್ಯ ಯಾರಿಗಾಗಿ? ಸೌಂದರ್ಯವೆಂಬುದು ಯಾವತ್ತೂ ನೋಡುಗರ ಕಣ್ಣಲ್ಲಿ ಇರುತ್ತದೆ ಎಂದು ಹೇಳಲಾಗುತ್ತದೆ. ಈ ನೋಡುಗನೆಂದರೆ ಎಸಿ ಕಾರುಗಳಲ್ಲಿ ಸಂಚರಿಸುವ, ಮಲ್ಟಿಪ್ಲೆಕ್ಸ್‌ಗಳಲ್ಲಿ ಐಸ್‌ಕ್ರೀಂ ತಿಂದು ಸಿನಿಮಾ ನೋಡಿ, ರಾತ್ರಿ ಬೆಂಗಳೂರಿನ ಬೀದಿಗಳಲ್ಲಿ ಜಾಲಿ ರೈಡ್ ಮಾಡುವ ನಾಗರಿಕರು ಮಾತ್ರವೇ? ಬೆಂಗಳೂರಿನ ಜನಸಂಖ್ಯೆಯ ಶೇ.10ರಷ್ಟೂ ಇಲ್ಲದ ಈ ಮಂದಿಯ "ಸೌಂದರ್ಯ" ಪ್ರಜ್ಞೆಯೇ ಬೆಂಗಳೂರಿನ ನಾಗರಿಕರೆಲ್ಲರ "ಸೌಂದರ್ಯ" ಪ್ರಜ್ಞೆ ಹೇಗಾಗುತ್ತದೆ? ಬೆಂಗಳೂರು ಈ ವರ್ಗಕ್ಕೆ ಮಾತ್ರ ಸೇರಿದ್ದಲ್ಲ, ನಗರದ ಶೇ.30ರಷ್ಟು ಜನತೆ ಯಾವ ನಾಗರಿಕ ಸೌಲಭ್ಯವೂ ಇಲ್ಲದ ಸ್ಲಂಗಳಲ್ಲಿ ವಾಸಿಸುತ್ತಾರೆ. ಉಳಿದ ಶೇ.30ರಷ್ಟು ಜನ ತಿಂಗಳ ಸಂಬಳದಲ್ಲಿ ಕಂತಿನ ಜೀವನ ನಡೆಸುತ್ತಾರೆ. ಬೆಳಗಾಗುವ ಮುನ್ನವೇ ಸೀಮೆಎಣ್ಣೆಗೆ ಮೈಲುಗಟ್ಟಲೇ ಕ್ಯೂ ನಿಲ್ಲುವ, ಸರ್ಕಾರಿ ಆಸ್ಪತ್ರೆಯಲ್ಲಿ ಜ್ವರದಿಂದ ಕೆಮ್ಮುತ್ತಲೇ ತಮ್ಮ ಪಾಳಿಗಾಗಿ ತಾಸುಗಟ್ಟಲೇ ಕಾಯುವ, ಕೆಲಸಕ್ಕೆಂದು ಹೋಗುವಾಗ ನೂಕುನುಗ್ಗಲಿನಲ್ಲಿ ನಗರ ಸಾರಿಗೆ ಬಸ್ಸಿನಲ್ಲಿ ಸೀಟಗಿರಲಿ ಕಾಲಿಡಲು ಜಾಗ ಸಿಗದೇ ಪರದಾಡುವ ಅಥವಾ ಸೈಕಲ್‌ಗಳಲ್ಲೋ ಬರಿ ನಡಿಗೆಯಿಂದಲೋ ರಾಜಧಾನಿಯ ರಸ್ತೆಗಳನ್ನು ಸವೆಸುತ್ತಾ ಕೆಲಸಕ್ಕೆ ಹೋಗುವ, ತರಕಾರಿಯಿಂದ ಹಿಡಿದು ಮನೆಯ ಎಲ್ಲಾ ಆಗತ್ಯಗಳಿಗೂ ಸಸ್ತಾ ದರದಲ್ಲಿ ದೊರಕುವ ಬೀದಿಬದಿ ವ್ಯಾಪಾರಿಗಳನ್ನೇ ಅವಲಂಬಿಸಿರುವ ನಗರದ ಶೇ.60ರಷ್ಟು ಜನತೆಯ "ಸೌಂದರ್ಯ" ಪ್ರಜ್ಞೆಯೂ ರಾಜಧಾನಿಯ ರಾಜಕುವರರ,



ಕುಬೇರಪುತ್ರರ ಸೌಂದರ್ಯ ಪ್ರಜ್ಞೆಯಂತೆ ಇರಲು ಸಾಧ್ಯವೇ?

'ಟೋಟಲ್'ಗಳಲ್ಲಿ, 'ಬಿಗ್‌ಬಜಾರ್'ಗಳಲ್ಲಿ ಅಥವಾ ದೊಡ್ಡದೊಡ್ಡ ಮಾಲ್‌ಗಳಲ್ಲಿ ವ್ಯಾಪಾರ ಮಾಡುವ ಅಥವಾ ಶಾಪಿಂಗ್‌ಅನ್ನು ಒಂದು ಹಾಬಿ ಮಾಡಿಕೊಂಡಿರುವ ವರ್ಗಕ್ಕೆ, ಸಂಜೆಯ ಹೊತ್ತು ಬರ್ಮುಡಾ, ಗಾಗಲ್ಸ್ ಧರಿಸಿ ಬಿಸಿನೆಸ್ ಡಿಸ್ಟ್ರಿಕ್ಟ್‌ನಲ್ಲಿ ಅಥವಾ ಎಂ.ಜಿ. ರಸ್ತೆಯಲ್ಲಿ ಫುಟ್‌ಪಾತಿನಲ್ಲಿ ವಾಯುವಿಹಾರ ನಡೆಸುವ ವರ್ಗಕ್ಕೆ ಬೀದಿಬದಿ ವ್ಯಾಪಾರ ನಿಷೇಧ ನಗರದ ಸೌಂದರ್ಯವನ್ನು ವೃದ್ಧಿಸುವ ಕ್ರಮ ಎನಿಸಬಹುದು. ಆದರೆ ತಮ್ಮ ಜೀವನಾಗತ್ಯಗಳಿಗೇ ಬೀದಿಬದಿಯ ವ್ಯಾಪಾರವನ್ನು ಮತ್ತು ಆ ವ್ಯಾಪಾರಿಯನ್ನು ನೆಚ್ಚಿಕೊಂಡಿರುವವರಿಗೆ ಇದು ಖಂಡಿತಾ ತಮ್ಮ ಬದುಕಿನ ಆಧಾರಗಳನ್ನೇ ಕಿತ್ತುಕೊಳ್ಳುವ ಕ್ರಮವಾಗುತ್ತದೆ. ನಗರದ ಮುಖ್ಯ ಬೀದಿಗಳಲ್ಲಿ ಸೈಕಲ್ ಅಥವಾ ಆಟೋ ನಿಷೇಧ; ಕಾರು, ಬೈಕುಗಳಲ್ಲಿ ಓಡಾಡುವ ಶ್ರೀಮಂತ ವರ್ಗದವರಿಗೆ ನಗರದ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವ ಕ್ರಮವಾಗಿ ಕಾಣಬಹುದು. ಆದರೆ ದಿನೇದಿನೇ ಹೆಚ್ಚುತ್ತಿರುವ ಬಸ್ ಪ್ರಯಾಣ ದರವನ್ನು ತೆರಲಾಗದೆ ಸೈಕಲ್‌ಅನ್ನು ಆಶ್ರಯಿಸಿರುವ, ಹೊಟ್ಟೆಪಾಡಿಗೆ ಆಟೋವನ್ನೇ ನೆಚ್ಚಿಕೊಂಡಿರುವವರ ಪಾಲಿಗೆ ಇದು ಅವರ ಬದುಕಿನ ಆಧಾರಗಳನ್ನೇ ಕಿತ್ತುಕೊಳ್ಳುವ ಕ್ರಮವಲ್ಲವೇ?

ಕಾರಿನ ಜನರ ಸೌಂದರ್ಯದ ಮಾನದಂಡ ಕಾಲಿನ ಜನರ ಮಾನದಂಡ ಒಂದೇ ಆಗಿರಲು ಸಾಧ್ಯವಿಲ್ಲವಲ್ಲವೇ?

ಒಂದು ವರ್ಗದ "ಸೌಂದರ್ಯ" ಪ್ರಜ್ಞೆ ಬಹುಸಂಖ್ಯಾತ ವರ್ಗದ ಜೀವನಾಗತ್ಯಗಳನ್ನೇ ಕಸಿದುಕೊಳ್ಳುತ್ತಿದರೆ ಯಾವುದು ಮುಖ್ಯವಾಗಬೇಕು? ಅದರಲ್ಲೂ ಒಂದು ಪ್ರಜಾಪ್ರಭುತ್ವ ದೇಶದಲ್ಲಿ ಸರ್ಕಾರ ಶ್ರೀಮಂತ ವರ್ಗದ ಸೌಂದರ್ಯ ಪ್ರಜ್ಞೆಯನ್ನು ನೀತಿ ಮಾಡಿಕೊಳ್ಳಬೇಕೋ? ಜನತೆಯ ಬದುಕಿನ ಅಗತ್ಯಗಳನ್ನು ಆದ್ಯತೆ ಮಾಡಿಕೊಳ್ಳಬೇಕೋ? ಹೀಗಾಗಿ "ನಗರ ಸೌಂದರ್ಯ" ಎನ್ನುವ ಪರಿಕಲ್ಪನೆಯ ಹಿಂದೆ ಇದು ಯಾರ ನಗರ? ಯಾರ ಸೌಂದರ್ಯ ಪ್ರಜ್ಞೆ? ಎಂಬ ಪ್ರಶ್ನೆಗಳನ್ನು ಹೂತುಹಾಕಲಾಗಿದೆ. ಏಕೆಂದರೆ ಇದರ ಹಿಂದೆ ಬಹುಸಂಖ್ಯಾತ ಶ್ರೀಸಾಮಾನ್ಯನ ಬದುಕನ್ನು ಹೂತುಹಾಕುವ ಯೋಜನೆಗಳೇ ಅಡಗಿವೆ.

ಎಲ್ಲಕ್ಕಿಂತ ಹೆಚ್ಚಾಗಿ ಒಂದು ಪ್ರಜಾಪ್ರಭುತ್ವದ "ಸೌಂದರ್ಯ"ವಿರುವುದು ಜನರ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ, ಅದಕ್ಕೆ ಮುಕ್ತ ಅವಕಾಶವಿದ್ದಲ್ಲಿ ಪ್ರಜಾತಂತ್ರ ಅರಳಿರುತ್ತದೆ. ಹಾಗಾಗಲು ಜನ ಮಾತಾಡಬೇಕು. ಜೀವಂತ ಪ್ರಜಾತಂತ್ರದಲ್ಲಿ ಜನ… ಬೀದಿಯ ಮೇಲೇ ಇರುತ್ತಾರೆ. ಯಾವ ರಾಜಧಾನಿಯ ಬೀದಿಯಲ್ಲಿ ಜನತೆಗೆ ಪ್ರವೇಶವಿಲ್ಲವೋ ಅಲ್ಲಿ ಪ್ರಜಾತಂತ್ರ ಸತ್ತಿದೆ ಎಂದರ್ಥ. ಎಲ್ಲಿ ಜನತೆಯ ಧಿಕ್ಕಾರದ ಘೋಷಣೆಯನ್ನು ಕರ್ಕಶ ಎಂದು ಪರಿಗಣಿಸಲಾಗುತ್ತದೋ, ಎಲ್ಲಿ ಜನರ ಮೆರವಣಿಗೆಯನ್ನು ಜೀವಂತ ಪ್ರಜಾತಂತ್ರದ ಮೆರವಣಿಗೆಯೆಂದು ಭಾವಿಸದೆ ತೊಂದರೆ ಎಂದ… ಭಾವಿಸಲಾಗುತ್ತದೋ ಅಲ್ಲಿ "ಸುಂದರವಾಗಿ" ಪ್ರಜಾಸತ್ತೆಯ ಕೊಲೆ ನಡೆಯುತ್ತಿದೆ ಎಂದರ್ಥ. ಏಕೆಂದರೆ ಮೌನವಾದ ಜನತೆ ಮತ್ತು ಕಿವುಡು ಸರ್ಕಾರ ಎರಡೂ ಫ್ಯಾಸಿಸಂಗೆ ಮುನ್ನುಡಿ ಬರೆಯುತ್ತವೆ.

ಬೆಂಗಳೂರು ಸುಂದರವಾಗುತ್ತಿಲ್ಲ, ವಿರೂಪಗೊಳ್ಳುತ್ತಿದೆ. ಏಕೆಂದರೆ ಇಲ್ಲಿ ಪ್ರಜಾತಂ… ಆತ್ಮಸೌಂದರ್ಯದ ಕೊಲೆಯಾಗುತ್ತಿದೆ.

...ಡಜು ಲಂಚ ತಗತರೆ ಅಂದ್ರೆ ಕೋರ್ಟ್ಗ್ಯಂಗ್ಲ ಹೋಗದು

...ನ್ತೇನು ಯಲ್ಲಾ ಮುಗಿದೇ ಹೋಯ್ತು ಎನ್ನುವಷ್ಟರಲ್ಲಿ ...ಕೊಂಡು ಬಂದ ಅದ್ದಮಳೆ, ಹಳ್ಳ-ಕೊಳ್ಳ ದಡಕಟ್ಟ ...ವಂತೆ ಬಾರಿಸಿದ್ದರಿಂದ ಭೂಮಿ ಸದ್ದಡಗಿದಂತಾ ...ಜೊತೆಗೆ ಪೈರು ನಳನಳಿಸತೊಡಗಿದ್ದವು. ಆದರೆ ...ಸರಿಯಾಗಿ ಇವೆಲ್ಲಾ ನಡೆಯಬೇಕಿತ್ತು ಎಂಬುದು ...ವನ ಕೊರಗಾಗಿತ್ತು.

...ನನು ಬಗಿಸಿದಂತೆ ಎಲ್ಲಿ ನ್ಯಡದತ್ತು ಮಾವ" ...ಉಗ್ರಿ.

...ನನು ಬಗಿಸಿದಂಗೆ ನ್ಯಡನಿದ್ರೆ ಆ ಬೆರಗ ...ಬೇಕಾಗಿತ್ತು ನೀನು. ಊರು ಸುತ್ತ ವಲ ...ಡವ್ರು" ಎಂದ ಕಾಳಮಾವ.

...ಗ್ಲ ಏನು ಆಗಿಲ್ಲ ತಗೊ. ಇನ್ನೊಂದು ಮೂರು ...ಂಧ್ರು ಸಾಕು. ಗ್ಯಟನ್ನಾದೂ ಅಂತ್ಲೆಯ" ಎಂದ

...ಸಿ ಸಡಿ ಹಬ್ಬದಲ್ಲೇ ಮಳೆ ಬಂದು ಅಂತಾ ...ಬರಲಿಲ್ಲಾ ಆಲವೆ" ಎಂದ ಸೀರ.

...ದತಿನ್ನಕ್ಕೆ ಹಾತೊರಿಯೊ ಜನ ಬಂದೋದ್ರು ...ಆದ್ರೆ ನಿಜವಾದ ನಂಟ್ರು ಬರಲಿಲ್ಲ" ಎಂದ

...ಜವಾದ ನಂಟ್ರು, ಸುಳ್ಳು ನಂಟ್ರು ಅಂತ ಬ್ಯಾರೆ ...?" ಎಂದಳು ಜುಮ್ಮಿ.

...ಣ ಕಣೆ. ನಿಜವಾದ ನಂಟ್ರು ಸಮಂದ ...ಗದಿಲ್ಲ, ಆಕಸ್ಮಾತ್ ಜಗಳಾಡಿಕಂಡು ದೂರಾದ್ರು

...ಮ ಲು ಸೀ ಮೆ ...ಟ್ಟೆಪುರಾಣ

▶ ಬಿ. ಚಂದ್ರೇಗೌಡ

...ದು ಕಾಯ್ತಾ ಇರತರೆ. ಯಾವಾಗಾರ ಹುಡಿಕ್ಯಂಡು ...ಅದೇ ಸುಳ್ಳು ಸಮಂದ ಅಂಗಿರದಿಲ್ಲ."

...ಗ್ ಬುಡು ಯಾವ ಸಮಂದವ್ರೂ ಇಲ್ಲದ ...ಕ್ಕ-ಬತ್ತರೆ" ಎಂದ ಸೀರ.

...ದು ನಿಜ ಬುಡು. ಇವತ್ತು ಹಬ್ಬ ಹರಿದಿನಕೆ ...ಗೆ ಬೇಕಾದ ಸ್ನೇಹಿತ್ರು ಬರ್ತರೆ ವರತೂ ...ಕರೆಲ್ಲಿ ಬಂದರೂ?" ಎಂದ ಉಗ್ರಿ.

...ಗ ಪಿತ್ರ ಪಕ್ಷಕೆ ಎಲ್ಲೆಲ್ಲಿಂದ ಜನ ಬರರೂ ... ಮೂಡ್ಲುಕೊಪ್ಪಲಿಂದ ರಾಮಯ್ಯ ಬರೋನು. ...ಯಿಂದ ಪಾಪಣ್ಣ ಬರೋನು. ಇನ್ನ ಗ್ಯಂಡೆ ...ಮರಿ, ಬೋರ, ಸಿದ್ದ ಅವುರ್ಯಲ್ಲ ಹಿಂಡುಗಟ್ಟಿ ...ರೋರು. ಬಂದು ನಾಕು ಐದುಮನೆ ಉಣ್ಣೋರು. ...ನಿದ್ದರೆ ಈಗ" ಎಂದ ಕಾಳಮಾವ ದಶಕಗಳ ...ನ್ನೆಗಿ ಅಲ್ಲೇ ಅಲೆಯತೊಡಗಿದ.

...ಗ ಈಗಿನಂಗೆ ಬಸ್ಸೆಲ್ಲಿದ್ದೊ? ಯಲ್ಲ ನ್ಯಡಕಂಡೇ ಬರೋರು" ಎಂದ ಸೀರ.

"ಯರಡು ಮರಿ ಬಾಡು ಯಟಗತಿರಲಿಲ್ಲ ಆಗ. ತಿರಗ ಇನ್ನೊಂದು ಕೂದು ತಿಂದು ಹೋಗರು. ಸುಮ್ಮನೆ ಹೋಯ್ತಿರಲಿಲ್ಲ ಆಗ. ಮುಂದು ಮಾಡೋ ಮದುವೆ ಸುದ್ದಿ, ಹೆಣ್ಣು ಗಂಡೆಲ್ಲವೆ, ಹಳೆ ದ್ಯಾವ್ರುದಾರ ನ್ಯಾಯ ಉಳದಿದ್ರೆ ಅದ್ನೂ ಮಾತಾಡಿಬುಟ್ಗೊಗರು."

"ನ್ಯಾಯಗಳು ಬಗೆಹರಿತಿದ್ದೆ ಹಬ್ಬಹರಿದಿನದ ಲ್ಲಲ್ಲವೆ. ಆಗೆಲ್ಲಿ ಕೋಟು ಕಛೇರಿ ಇದ್ವೋ?" ಎಂದ ಸೀರ.

"ಕೋರ್ಟು ಕಛೇರಿ ಇದ್ವೊ ಕಣಮಾವ. ಆದ್ರೆ ಇವತ್ತವಲ್ಲಾ ಅಂಗಿರ್ಲಿಲ್ಲ."

"ಇವತ್ತೇನಾಗಿದ್ದವುಲ?" ಎಂದಳು ಜುಮ್ಮಿ.

"ಜಡಜು ಲಂಚ ತಗತಾ ಅವುನಂತೆ."

"ಜಡಜಿ ಲಂಚ ತಗತನೆ ಅಂದ್ರೆ ಕೋರ್ಟ್ಗ್ಯಂಗ್ಲ ಹೋಗದು" ಎಂದ ಕಾಳ ಮಾವ ಅಚ್ಚರಿಗೊಂಡ.

"ನಾನು ನಂಬತಿರಲಿಲ್ಲ ಕಣಮಾವ. ಅವುನ್ಯಾರೋ ವಬ್ಬ ಜಡಜು ಲಂಚ ತಗಂಡು ಭಾರಿ ಆಸ್ತಿ ಮಾಡ್ಯವುನೆ, ಅವುನ್ನ ಮನಿಗೆ ಕಳಿಸಿ ಅಂತ ಲಾಯರ್ಯಲ್ಲ, ಗಲಾಟೆ ಮಾಡ್ತಾಯಿದ್ದರಂತೆ."

"ಅಲ್ಲಾ, ಜಡಜೇ ಲಂಚ ತಗಂಡ್ರೆ ಇನ್ನ ನಾವ್ಯಾಕೆ ಕೋರ್ಟ್‌ಗಂಟ ಹೋಗಬೇಕು? ನ್ಯಾಯನ್ನೊ, ಅನ್ಯಾಯನೊ ಇಲ್ಲೇ ಬಗೆಹರಿಸಿಗಳದು ವಳ್ಳೇದೇನಪ್ಪ" ಎಂದ ಸೀರ.


"ವಳ್ಳೆದೇನಪ್ಪ ಅಂತಿಯಲ್ಲೊ, ಇನ್ನಮ್ಯಾಲೆ ಯಾವುದೇ ಕಾರಣಕ್ಕು ನಾವು ಕೋರ್ಟಿಗೆ ಹೋಗಬಾರ್ದು. ಯಾಕಪ್ಪ ಅಂದ್ರೆ ದುಡ್ಡಿರನು ನ್ಯಾಯ ಕೊಂಡಕತ್ತನೆ, ದುಡ್ಡಿಲ್ಲದೋನು ಜೈಲಿಗೋ ಯ್ತನೆ" ಎಂದ ಉಗ್ರಿ.

"ನಾವು ಯಾವತ್ತು ಕೋರ್ಟಿಗೋಗಿ ದ್ದವುಲ? ನಾನು ಹುಟ್ಟಿದ್ದ ಕೋರ್ಟು ಬಾಗಲಿಗೂ ಹೋಗಿಲ್ಲ. ನಮ್ಮೊರು ಹೋಗಕ್ಕೂ ಬುಟ್ಟಿಲ್ಲ. ಆ ಲಾಯಿರಿ ಅನ್ನೊನ ಮಕವ ಇವತ್ತಿಗೂ ನೋಡಿಲ್ಲ ಗೊತ್ತೆ" ಎಂದ ಕಾಳಮಾವ.

"ಅಲ್ಲಾ, ಜಡಜು ಅನ್ನೋನು ದೇವರ ಸಮಾನ ಅಂತ ನಾವು ತಿಳಕಂಡಿದ್ರೆ ಇವುರು ತಾಲೋಕ್ ಆಫೀಸ್ ಗುಮಾಸ್ತನಂತೆ ಲಂಚ ತಿಂತರೆ ಅಂದ್ರೆ ಯಂಗೆ ಅಂತ" ಎಂದ ಸೀರ ತಲೆ ಮೇಲೆ ಕೈಹೊತ್ತು ಕುಳಿತ.

"ಅದ್ಯಂಗೆ ಅಂದ್ರೆ ಉತ್ತರನೂ ನಿನ್ನ ಮಾತಿನಲ್ಲೇ ಅದೆಲ್ಲೊ ಮಾವ. ತಾಲೂಕ್ ಆಫೀಸ್ ಗುಮಾಸ್ತ ಸುಮ್ಮಸುಮ್ಮನೆ ಲಂಚ ಕೇಳ್ತನಾ. ಯಾವುದೊ ಕ್ಯಲಸ ಮಾಡಿಕೊಡ್ತನೆ, ಕೈಯೊಡ್ಡತನೆ. ಅಂಗೆ ಜಡಜುಗಳು ಜೈಲಿಗೆ ಕಳಸಬೇಕಾದೋರಿಗೆ ಬೇಲ್‌ಕೊಡ್ತನೆ, ಆಕ್ಸಿಡೆಂಟ್ ಕೇಸಲ್ಲಿ ಸತ್ತೋರಿಗೆ ಪರಿಯಾರ ಹೇಳುವಾಗ ನನಿಗಿಷ್ಟು ಕೊಡಿ ನಿಮಗಿಷ್ಟು ಅಂತನೆ. ಹಿಂಗೆ ಅವುರು ಯವಾರ ಕುದುರುಸ್ತರೆ."

"ಅವುರು ಯಾಕಂಗೆ ಮಾಡ್ತರೆ ಗೊತ್ತೇನೊ ಉಗ್ರಿ" ಎಂದು ವಾಟಿಸ್ಸೆ ಬಂದ.



"ನೀನೆ ಹೇಳ್ಳ, ಪೊಟ್ ಲಾಯಿರಿ ಇದ್ದಂಗಿದ್ದಿ" ಎಂದಳು ಜುಮ್ಮಿ.

"ಸಾಮಾನ್ಯವಾಗಿ ಕೆಲವು ಜಡಜಗಳು, ಯಲ್ಲಾ ಜಡಜಗಳು ಅಲ್ಲ, ಅವುರಲ್ಲು ಪಾಪ ತುಂಬ ಆನೆಸ್ಟಾಗಿರೋರು ಅವುರೆ. ಜಾಸ್ತಿನೆ ಅವುರೆ ಅಂತ ಹೇಳಬವುದು. ದೇಸ ಉಳದಿರೋದೆ ಅವುರಿಂದ. ಆದ್ರೆ ಇವತ್ತೇನಾಗ್ಯದವ್ವಾ ಅಂದ್ರೆ ಖಂಡಗ ಹಾಲಿಗೆ ಒಂತೊಟ್ಟು ವಿಷ ಸಾಕು. ಯಾರೊ ಕೆಲವು ಜಡಜಿ ಮಾಡಿರೊ ಕ್ಯಲಸದಿಂದ ಇವತ್ತು ಇಡೀ ದೇಶದ ನ್ಯಾಯಾಂಗದ ಮರಿಯಾದಿ ಹರಾಜಾಗಿ ಹೋಗ್ಯದೆ. ಎನಿಹೌ ಕೆಲವು ಜಡಜು ಯಾಕ್ ಲಂಚ ತಗತರೆ ಅಂದ್ರೇ, ಅವುರು ಲಾಯರ್ ಡೆವಲಪ್ಪಾಗದ ಕಣ್ಣಾರ ನೋಡ್ತರೆ. ಅವುರು ನೋಡನೋಡತಿದ್ದಂತೆ ಲಾಯರ್‌ಗಳು ಲಕ್ಷಾಂತ್ರಪಾಯಿ ಮನೆಕಟ್ಟತರೆ. ಹೊಸಾ ಕಾರ್ ತಗತರೆ. ದಿನ ಬಾರಿಗೋಯ್ತರೆ. ಇದನ್ಯಲ್ಲ ನೋಡ್ತಯಿರೋ ಜಡಜು, ಅದೂ ಬರೀ ಸಂಬಳದಲ್ಲೇ ಬದುಕೊ ಜಡಜು, ಏನು ಮಾಡ್ತನೆ ಅಂದ್ರೇ, ಆ ದಿಕ್ಕನಲ್ಲಿ ಯೋಚನೆ ಮಾಡ್ತನೆ. ಅವುನಿಗೆ ಕ್ಯಟ್ಟ ಹೆಂಡತಿ ಇದ್ರೆ ಮುಗದೇಹೋಯ್ತು. ಅವುನತ್ರಕೋದ ಯಲ್ಲಾ ಕೇಸು ಡೀಲಾಯ್ತದೆ. ಇಲ್ಲ ಖುಲಾಸೆ ಆಯ್ತವೆ. ಇಲ್ಲ ನಿರಪರಾದಿಗಳು ಜೈಲಿಗೋಯ್ತರೆ" ಎಂದ ವಾಟಿಸ್ಸೆ.

"ನೀನೇಳದು ನೋಡಿದ್ರೆ ಹೆದ್ರಿಕಾಯ್ತದಲ್ಲಾ" ಎಂದ ಕಾಳಮಾವ.

"ಇಷ್ಟಕ್ಕೆ ಹೆದ್ರಿಕಂಡ ದ್ವಡಪ್ಪ, ವಬ್ಬ ಜಡಜು ವೂಾಡಿರೊ ಕ್ಯಲಸ ಕೇಳಿದ್ರೆ, ನೀನು ಅವುರ ಸುದ್ದಿಗೋಗದಿಲ್ಲ"

"ಅಂತ ಕ್ಯಲಸ ಯಾರು ಮಾಡಿದ್ರಪ್ಪ?" ಎಂದಳು ಜುಮ್ಮಿ.

"ಗುಲ್ಬರ್ಗಾ ರಾಯಚೂರು ಕಡೆ ವಬ್ಬ ಜಡಜು ಕೋರ್ಟ್‌ನಲ್ಲಿ ಕುಂತಿದ್ನಂತೆ. ಆಗ ವಬ್ಬ ಸಾಬಿಯ ಯಳಕಂಡು ಬಂದ್ರಂತೆ. ಅವುನ ಮಾಡಿದ್ದ ಅಪರಾಧಕೆ ಬೇಲ್‌ಕೊಡಬವುದಿತ್ತಂತೆ. ಆದ್ರೆ ಬೇಲ್ ಕೊಡದೆ ಜೈಲಿಗೆ ಕಳಿಸಿದನಂತೆ. ಯಾಕಪ್ಪ ಅಂದ್ರೆ ಅಪರಾಧಿ ಹೆಡತಿ ಅಷ್ಟು ಸುಂದರವಾಗಿದ್ದಂತೆ. ಅವುನನ್ನ ಜೈಲಿಗಾಕಿದ ಜಡಜು ಏನು ಮಾಡಿದ ಗೊತ್ತೇ? ರಾತ್ರಿ ಹೊತ್ತಲಿ ಹೋಗಿ ಆ ಸಾಬಿ ಹೆಡತಿಯ ಹಿಡಕಳಕ್ಕೋದ."

"ಅಯ್ಯೋ ರಾಮ, ಅವುನಿಗೇನು ಬಕ್ಲ ಕೇಡು."

"ಇರಕ್ಕ ಹೇಳ್ತಿನಿ ಆತರ ಮಾಡಬ್ಯಾಡ. ಆ ಸಾಬಿ ಹೆದ್ರಿ ಕೂಗಿಬುಟ್ಳು. ಜನ ಓಡಿಬಂದ್ರು. ಜಡಜಿಯ ಹಿಡಕಂಡು ಚಚ್ಚಿ ಮ್ಯರವಣಗೆ ಮಾಡಿದ್ರು. ಪೊಲೀಸ್‌ನೋರು ಬಂದು ನೋಡ್ತರೇ ಕೋರ್ಟ್‌ನಲ್ಲಿ ತೀರ್ಪು ಕೊಡೊ ಜಡಜು. ಜನಗಳ ಕೈಲಿ ಜಬ್ಬಿಸಿಗಂಡು ನಿಂತವುನೇ."

"ಸುಳ್ಳೊ ನಿಜವುಲ ನೀನೇಳ್ತಾಯಿರದು?"

"ನಾನ್ಯಾಕಕ್ಕ ಸುಳ್ಳೆಳಲಿ? ಪೇಪ್ರಲ್ಲಿ ಬಂದಿದ್ದ ಓದಿ ಗೆಪ್ತಿ ಮಡಿಕಂಡು ಹೇಳ್ತಾಯಿದ್ದಿನಿ" ಎಂದ ವಾಟಿಸ್ಸೆ.

"ಬ್ರಾಂಬ್ರು ಇಂಗ್ಯಲ್ಲ ಮಾಡ್ತಿರಲಿಲ್ಲ ಕಂಡ್ಯ. ಈ ಬ್ಯಾರೆ ಜಾತಿ ಜನ ಯಾವತ್ತು ಜಡ್ಜುಗ ಳಾದ್ರೊ ಅವತ್ತಿಂದ ಇಂತವ್ಯಲ್ಲ ನ್ಯಡಿಯಕ್ಕೆ ಸುರುವಾದೊ" ಎಂದ ಕಾಳ ಮಾವ.

"ನಮ್ಮ ದೊಡ್ಡಪ್ಪನ ಮೂಡನಂಬಿಕೆ ನೋಡಪ್ಪ ಯಂಗದೆ. ದ್ವಡಪ್ಪಾ, ಈ ವಿಷಯದಲ್ಲಿ ಬ್ರಾಂಬ್ರು, ಬೂದಿಬಡುಕ್ರು ಅಂತ ಬರದಿಲ್ಲ, ನರಮನುಸ್ರು ಯಾವ ಟೈಮಲ್ಲಿ ಏನು ಮಾಡ್ತರೆ ಅಂತ ಹೇಳಕ್ಕೆ ಬರದಿಲ್ಲ. ನಾನೇಳಿದ ಮ್ಯಾಟ್ರು ಬಗ್ಗೆ ನೀನೇನಾರ ಒಂದು ತೀರಮಾನ ಹೇಳು."

"ತೀರಮಾನ ಇನ್ನೇನ್ಲ? ಇನ್ನ ಮ್ಯಾಲೆ ಕೋರ್ಟಿಗೆ ಹೋಗದೆ ಅಲ್ಲ, ಏನಿದ್ರು ಊರಲ್ಲಿ ಬಗೆಹರಿಸಿಕೋಬೇಕು."

"ಸಿವಿಲ್ ಮ್ಯಾಟ್ರ ನೀನು ಊರಲ್ಲೇ ಬಗೆಹರುಸ್ತಿ ಆದ್ರೆ ಕ್ವಲೆಗಿಲೆ ಕೇಸ್ ಏನು ಮಾಡ್ತಿ?"

"ನಮ್ಮೂರಲ್ಲಿ ಯಾರು ಕ್ವಲೆ ಮಾಡಕೋದರ್ಲ? ಇದುವರಿಗೂ ಅಂತ ಕ್ಯಲಸ ಇಲ್ಲಿ ನ್ಯಡದಿಲ್ಲ, ನ್ಯಡಿಯದು ಬ್ಯಾಡ. ಒಂದು ಜಮೀನು ವಿಷಯನೆ ಆಗ್ಲಿ, ವಡದಾಟ, ಲ್ಯಾವದೀವಿ, ವರದಕ್ಷಿಣೆ ಇವುನ್ಯಲ್ಲ ನಾವೇ ಬಗೆಹರಿಸಿ ಕೋಬೇಕು."

"ಸಿರಿಗ್ಯರೆ ಮಠದ ಸ್ವಾಮಿಯಂಗೆ ನಾವು ರೂರಲ್ ಕೋರ್ಟು ಮಾಡಿಕಬೇಕು ಕಣ ಮಾವ" ಎಂದ ಉಗ್ರಿ.

"ಸಿರಿಗ್ಯರೆ ಸ್ವಾಮಿ ಊಟ ಕೊಡ್ತನೆ, ನಾವು ಕೊಡಕ್ಯಾದತೆ?"


"ಅವುನು ಊಟ ಏನು ಅವುರಪ್ಪನ ಮನೆದ ಕೊಟ್ನನೆ?

"!?"

'ಸಾಕ್ಷಿ'


...ಮೊನ್ನೆ ಇಬ್ಬರು ಬಂದರು. ಅವರಲ್ಲೊಬ್ಬ ಆಗಲೇ ಪುಸ್ತಕದ ...ಾರಿಯಾಗಿದ್ದು ಕಳ್ಳನೆಂದು ಕೆಟ್ಟ ಹೆಸರು ಮಾಡಿದವ, ಇನ್ನೊಬ್ಬ ...ಯುಕ ಹುಡುಗ. ಅವರು ಬಂದಿದ್ದು 'ಸಾಕ್ಷಿ' ಎಂಬ ತ್ರೈಮಾಸಿಕ ...ಗೆ 'ನಿಧಿ' ಸಂಗ್ರಹಿಸಲು. ಗೋಪಾಲಕೃಷ್ಣ ಅಡಿಗರು ಸಂಪಾದಿಸುತ್ತಿದ್ದ ...ತಕಾಲಿಕವೆಂದು ಹೆಸರಿಟ್ಟುಕೊಂಡು ಯಾವಾಗೆಂದರೆ ಅವಾಗ ಬರುತ್ತಿದ್ದ ...ಜೀವಿಗಳ ಪತ್ರಿಕೆ ಇದು. ನನ್ನನ್ನು ಆಜೀವ ಸದಸ್ಯನಾಗೆಂದು ಕೇಳಿದರು.

ನಕ್ಕೆ.



"ಅಡಿಗರಿಗೆ ಕಾಯಿಲೆ. ಅವರನ್ನು ಸಂಪಾದಕರನ್ನಾಗಿ ಮಾಡಿದ್ದೀರಿ. ಆಜೀವ ಸದಸ್ಯತ್ವಕ್ಕಾಗಿ ಕೇಳಿಕೊಳ್ಳುತ್ತಿದ್ದೀರಿ. ನಿಯತಕಾಲಿಕವೆಂದು ಬೇರೆ ಹೇಳುತ್ತೀರಿ. ಈ ದೇಶದಲ್ಲಿ ಯಾವುದೂ ನಿಯತಕಾಲಕ್ಕೆ ನಡೆಯುವುದಿಲ್ಲ. ಸಾಕ್ಷಿ ಹಾಗೆ ನಡೆದ ಸಾಕ್ಷಿ ಕೂಡ ಇಲ್ಲ. ಈ ವರ್ಷದ ಚಂದಾ ತಗೊಂಡು ಹೋಗಿ. ಪ್ರಾಮಾಣಿಕವಾಗಿ ನಡೆಸ್ತಿರಲು ಪ್ರಯತ್ನಿಸಿ" ಅಂದೆ.


RELATIVITY!



ವಿಜ್ಞಾನ, ಅಂಕಗಣಿತ ಅಂದರೆ ಅನೇಕರಿಗೆ ನಡುಕ! ಐನ್‌ಸ್ಟೈನ್ ಹೆಸರು **Theory of Relativity** ಯೊಂದಿಗೆ ಇರುತ್ತದೆ. ಅದ್ಯಾವುದೋ ಅಮೂರ್ತ, ಕ್ಲಿಷ್ಟ ವಿಷಯವೆಂದು ಆ 'ಥಿಯರಿ'ಯ ತಂಟೆಗೇ ಹೋಗದೆ ತಲೆ ತಪ್ಪಿಸಿಕೊಳ್ಳುವವರೇ ಹೆಚ್ಚು. ಇದು ರಷ್ಯನ್ ಕಾದಂಬರಿಗಳ ತರಹ-ಒಂದೊಂದು ಸಾವಿರ, ಎರಡು ಸಾವಿರ ಪುಟ. ನೋಡಿದರೇ ಭಯವಾಗುತ್ತದೆ. ಒಮ್ಮೆ ಕಾರ್ಲ್ ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಬಗ್ಗೆ ಹೀಗೇ ಆಯಿತು. ನಾನು ಮಾರ್ಕ್ಸ್‌ನ ಮ್ಯಾನಿಫೆಸ್ಟೋ ಇತ್ಯಾದಿ ಓದಿ ಈ ದಾಸ್ ಕ್ಯಾಪಿಟಲ್‌ನ ಕೆಲವು ಭಾಗ ತಿರುವಿ ಹಾಕಿ ಸುಮ್ಮನಿದ್ದೆ. ನಾನು ಇದರ ಪಂಡಿತನೆಂದು ಹೇಳಿಕೊಂಡು ಓಡಾಡುವ ಅಗತ್ಯವೂ ಇರಲಿಲ್ಲ. ಒಮ್ಮೆ ಒಬ್ಬಳು ಈ ದಾಸ್ ಕ್ಯಾಪಿಟಲ್ ಓದಿ ಅರ್ಥ ಹೇಳುವುದಾಗಿ ಮುಂದೆ ಬಂದಳು. ಅವಳಿಂದ ತಪ್ಪಿಸಿಕೊಂಡದ್ದಾಯಿತು. ಮೊನ್ನೆ ಒಬ್ಬ 'ವಾರ್ ಅಂಡ್ ಪೀಸ್' ಕಾದಂಬರಿಯ ಬಗ್ಗೆ ಹೇಳಿದ- "ಈ ವರ್ಷ ಕೂಡ 'ವಾರ್ ಅಂಡ್ ಪೀಸ್' ಓದಬೇಕೆಂಬ ಆಸೆಯಳ್ಳೇ ಕಳೆದುಹೋಯಿತು! ಮುಂದಿನ ವರ್ಷ ಈ ಆಸೆ ಹಾಗೇ ಇರಲಿ!"

ಒಬ್ಬ ಐನ್‌ಸ್ಟೈನ್‌ನನ್ನು ನೋಡಿದಾಗ ಆತ **relativity** ಬಗ್ಗೆ ಕೇಳಿದ. ಐನ್‌ಸ್ಟೈನ್ ತುಂಬ ಪ್ರೀತಿಯ, ಸರಳ ಮನುಷ್ಯ. ತನ್ನ ಥಿಯರಿಯನ್ನು ವಿವರಿಸಿದ: "ನೀನು ನಿನ್ನ ಪ್ರೀತಿಯ ಹುಡುಗಿಯ ಜೊತೆ ಒಂದು ನಿಮಿಷ ಮಾತ್ರ ಇದ್ದರೆ ವೇಳೆ ಸಾಕಾಗಲಿಲ್ಲ ಅನ್ನಿಸುತ್ತೆ, ಆದರೆ ನೀನು ಕಾದ ಹೆಂಚಿನ ಮೇಲೆ ಆ ನಿಮಿಷ ಕೂತರೆ ತುಂಬ ಹೊತ್ತು ಅನ್ನಿಸುತ್ತೆ- ಅದೇ ನಿಮಿಷದ ಬಗ್ಗೆ **relativity!**"

ಡಿಸೆಂಬರ್ 8,1991



ಮುಟ್ಟಕ್ಕೇ ಬುಟ್ಟಿಲ್ಲ ಸಾ

ಅನಿಕ

ಎಚ್.ಎಲ್. ಕೇಶವಮೂರ್ತಿ

ರಾಷ್ಟ್ರೋತ್ಥಾನ ಪರಿಷತ್ತಿನವರು ಪ್ರಕಟಿಸಿರುವ ಪುಸ್ತಕಗಳನ್ನು ಕೊಂಡುಕೊಳ್ಳುವಂತೆ ಸರ್ಕಾರ ಎಲ್ಲ ಶಾಲೆಗಳಿಗೂ ಸುತ್ತೋಲೆ ಕಳುಹಿಸಿರುವುದನ್ನು ಇದು ಯಾರ 'ಉತ್ಥಾನ'ಕ್ಕಾಗಿ ಎಂದು ಕೆಲವು ಪ್ರಗತಿಪರರು ಎನ್ನಿಸಿಕೊಂಡವರು ಖಾರವಾಗಿ ಪ್ರಶ್ನಿಸಿದ್ದಾರೆ. ಪ್ರಾಯಶಃ ಈ ಪ್ರಕಟಣಾ ಸಂಸ್ಥೆ ಹದಿನೇಳು ಕೋಟಿ ರೂಪಾಯಿಗಳನ್ನು ಹೊಡೆದುಕೊಂಡಿತಲ್ಲ, ನಮಗೆ ಇಂತಹ ಸೌಭಾಗ್ಯ ಇಲ್ಲವಲ್ಲ ಎಂಬುದು ಅವರ ಹೊಟ್ಟೆ ಉರಿಸಿರಬಹುದು ಎಂದು ಭಾವಿಸಿದರೆ ಅದು ಅಲ್ಲವಂತೆ. ಸರ್ಕಾರ ಈ ಮೂಲಕ ಮಕ್ಕಳ ತಲೆಗೆ ಬೂಸಾ ತುಂಬುವ ಪ್ರಯತ್ನ ಇದು ಎಂಬುದು ಅವರ ಆರೋಪವಾಗಿದೆ. ಬೂಸಾ ಅಂದಾಗ ಬಸವಲಿಂಗಪ್ಪ ನೆನಪಿಗೆ ಬರುತ್ತಾರೆ. ಅವರು ಕನ್ನಡ ಸಾಹಿತ್ಯವೇ ಬೂಸಾ ಎಂದಿದ್ದರು. ಹಂಗೇ ಇವರೂ ಅನ್ನುತ್ತಿದ್ದಾರಾ ಅನ್ನೊ ಅನುಮಾನ ಬರುವುದು ಸಹಜ. ಇರಲಿ. ಮಕ್ಕಳ ಮಂಡೇಗೆ ಜ್ಞಾನ ತುರುಕಬೇಕು ಅಂತ ಇದ್ದಲ್ಲಿ ರಾಜ್ಯದಲ್ಲಿಯೇ ಇನ್ನೂ ಅನೇಕ ಪ್ರತಿಷ್ಠಿತ ಪುಸ್ತಕ ಪ್ರಕಟಣಾ ಸಂಸ್ಥೆಗಳಿದ್ದಾವಲ್ಲ ಅವರಿಂದ ಕೊಳ್ಳಬಹುದಾಗಿತ್ತು. ಇದು ಬೇಡ ಅಂದರೆ ಸರ್ಕಾರದ್ದೇ ಹಲವಾರು ಅಕಾಡೆಮಿಗಳಿದ್ದಾವಲ್ಲ ಅವುಗಳಿಂದಲಾದರೂ ಪಡೆಯಬಹುದಾಗಿತ್ತು ಎಂಬುದು ಅವರ ಸ್ಪಷ್ಟ ಅಭಿಪ್ರಾಯ. ಇವೆಲ್ಲವನ್ನು ಬಿಟ್ಟು ಸರ್ಕಾರದ ಈ ನಡೆ ದಾವಣಗೆರೆ ಆರೆಸ್ಸೆಸ್‌ನ ಚಿಂತಕ್ ಬೈಠಕ್ ವಾಸನೆ ಅವರ ಮೂಗಿಗೆ ಬಡಿದಿದೆ. ಹಿಂಬಾಗಿಲಿನಿಂದ ಅದರ ರಹಸ್ಯ ಕಾರ್ಯಸೂಚಿಯನ್ನು ಜಾರಿಗೊಳಿಸುವ ಹುನ್ನಾರ ಇದೆ ಎಂಬುದು ಅವರ ಗುಮಾನಿ.

ಇಂತಹ ಅನುಮಾನಗಳಿಗೆ ಯಾವುದೇ ಕಾರಣ ಇಲ್ಲ. ಪ್ರಾಥಮಿಕ ಶಾಲೆಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದು ಆ ಸಂಶಯ ಪಿಶಾಚಿಗಳಿಗೆ ತಿಳಿಯದೆ ಇರಬಹುದು. ಪರಂತು ರಾಜ್ಯದ ಆಡಳಿತವನ್ನೇ ತಮ್ಮ ಕೈಬೆರಳಲ್ಲಿ ಇದೆ. ಎಂದು ನಂಬಿರುವ ಯಡ್ಯೂರಪ್ಪನವರಿಗೆ ತಿಳಿದಿಲ್ಲ ಎಂಬುದು ಮೂರ್ಖತನದ ಮಾತಾದೀತು! ಸಮಿತಿ ರಚಿಸಿ ಅವರಿಂದ ಪುಸ್ತಕಗಳನ್ನು ಆಯ್ಕೆ ಮಾಡಿಸಲಿ, ಅಕಾಡೆಮಿಗಳಿಂದ ಕೊಂಡುಕೊಳ್ಳಲಿ, ಖಾಸಗಿಯವರಿಂದ ಪಡೆಯಲಿ ಎಲ್ಲದರ ಪ್ರಯೋಜನವೂ ಒಂದೇ. ಮಕ್ಕಳ ಮನಸ್ಸಿನ ಮೇಲೆ ಇದು ಯಾವುದೇ ಪರಿಣಾಮ ಬೀರುವುದಿಲ್ಲ ಎಂಬುದು ಅವರಿಗೆ ತಿಳಿದಿದೆ. 1930 ರ ಸುಮಾರಿಗೆ ಜ್ಞಾನ ತುಂಬಿಕೊಳ್ಳಲಿ ಎಂದು ಶಿವರಾಮ ಕಾರಂತರು ನಡೆಸಿದ ತರಗತಿಗಳಿಗೆ ಹಾಜರಾದ ಶಾಲಾ ಮಾಸ್ತರುಗಳ ಸಂಖ್ಯೆ.... ಬೆರಳೆಣಿಕೆಯಷ್ಟು ಅಂತೆ! ಆಗಲಾದರೋ 'ಬಡ ಶಾಲಾಮಾಸ್ತರು'- ಆಗಿದ್ದರು ನಿಜ. ಆರ್ಥಿಕವಾಗಿ ಬಡತನ ಇದ್ದರೂ ಜ್ಞಾನದಲ್ಲಿ ಬಡತನ ಬೇಡ ಎಂಬ ಅವರ ಬೋಧನೆಗೆ ಕವಡೆ ಕಿಮ್ಮತ್ತೂ ಸಿಗಲಿಲ್ಲವಂತೆ. ಈಗ ಪರಿಸ್ಥಿತಿ ಸುಧಾರಿಸಿದೆ. ಬಡಮಾಸ್ತರು ಎಂಬ ಕಳಂಕ ಇಲ್ಲವಾಗಿದೆ. ಆದರೆ ಕೈಲಿ ಹಣ ಓಡಾಡುತ್ತೆ ನೋಡಿ. ಬಹಳಷ್ಟು ಮಾಸ್ತರುಗಳಿಗೆ ಬಡ್ಡಿ ವ್ಯವಹಾರ ಮಾಡುವುದಕ್ಕೇ ಸಮಯ ಸಾಲದಾಗಿದೆ. ಹೀಗಾಗಿ ಶಾಲಾ ಪರಿಸ್ಥಿತಿ ಮಾತ್ರ ಹಾಗೇ ಉಳಿದಿದೆ.

ಸಣ್ಣ ಅನುಭವಕ್ಕೆ ಬಂದ ಒಂದು ಪ್ರಸಂಗವನ್ನು ಪ್ರಸ್ತಾಪಿಸಬೇಕು.

ಶಿಕ್ಷಣದ ಗುಣಮಟ್ಟ ಹೆಚ್ಚಿಸಲೆಂದು ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ಹಾಕುತ್ತಿದೆ. ಅದರಲ್ಲಿ ಒಂದು ಬ್ಲಾಕ್ ಬೋರ್ಡ್ ಯೋಜನೆ. ಅದರಲ್ಲಿ ಎಲ್ಲಾ ಶಾಲೆಗಳಿಗೂ ಪ್ರಯೋಗಶಾಲೆ ಸಾಮಗ್ರಿಗಳನ್ನು ಒದಗಿಸಲಾಗಿತ್ತು. ಇದಾದ ಕೆಲವು ದಿವಸಗಳ ನಂತರ ಎಲ್ಲ ವಿದ್ಯಾರ್ಥಿಗಳು ಎಷ್ಟು ಪಸಂದಾಗಿ ಪಾಠ ಕಲ್ತಿದಾರೆ ನೋಡೋಣ ಅಂತ ಒಂದು ಶಾಲೆಗೆ ಹೋಗಿದ್ದೆವು. ಶಾಲಾ ಅಧ್ಯಾಪಕರು ಎಂತಹ ಪ್ರಾಮಾಣಿಕರು ಅಂತೀರಿ. 'ನಿಮಗೆ ಎಲ್ಲ ಸಾಮಗ್ರಿ ಬಂದಿದಾವಾ' ಅಂತ ಕೇಳಿದ್ದಕ್ಕೆ 'ಬಂದವೆ ಸಾ' ಅಂದ್ರು. ಅವನ್ನು ನೋಡುವ ಕುತೂಹಲದಿಂದ 'ಅವತೋರ್ಸಿ' ಅಂದೊ. 'ಬಲ್ಲ ಸಾ ಬಲ್ಲ ಸಾ' ಅಂತ ಉತ್ಸಾಹದಿಂದ ಪಕ್ಕದ ಕೊಠಡಿಗೆ ಕರೆದುಕೊಂಡು ಹೋಗಿ ತೋರಿಸಿದರು. ಅವು ಹೇಗಿದ್ದವು ಅಂತೀರಿ ಅಲ, ಬರೋಬರಿ ಎಕ್ವಿಪ್‌ಮೆಂಟ್ಸು.....ತಂದಿದ್ದಾಗ ಹ್ಯಾಗಿದ್ದವೋ ಹಾಗೇ ಅದೇ ಪೆಟ್ಟಿಗೆಯಲ್ಲೇ ಭದ್ರವಾಗಿದ್ದವು! 'ಬಹಳ ಜೋಪಾನ ಮಾಡಿದೀರಿ ಮೇಷ್ಟ್ರೇ. ಹುಡುಗರಿಗೆ ಬಳಸಲು ಯಾವತ್ತಾದ್ರೂ ಕೊಟ್ಟಿದ್ರಾ' ಅಂತ ಕೇಳಿದೊ. 'ಮುಟ್ಟಕ್ಕೇ ಬುಟ್ಟಿಲ್ಲ ಸಾ' ಅಂದು ಮಾಸ್ತರು ಹೆಮ್ಮೆಯಿಂದ! 'ಯಾಕೆ ಮೇಷ್ಟ್ರೆ ಕೊಡ್ಲಿಲ್ಲ' ಅಂದದ್ದಕ್ಕೆ 'ಕೊಟ್ರೆ ಬುಟ್ಟಾವ ಸಾ... ಬಡ್ಡಾಕ್ಕುಡ್ತವೆ ಬಡ್ಡೆತ್ತವು' ಅಂದ್ರು! 'ಬಳಸುವಾಗ ಒಡೆದು ಹೋಗಬಹುದು. ಹೋಗ್ಲಿ ಬಿಡಿ. ಅದಕ್ಕೇನಂತೆ' ಎಂದದ್ದಕ್ಕೆ 'ಇನ್ಸೆಕ್ಷನ್ ಬಂದಾಗ ಎಲ್ಲವೆ ಅವು ಅಂದ್ರೆ ಏನ್ ತೋರುಸ್ಲಿ ಸಾ' ಅಂತ ಮರುಪ್ರಶ್ನಿಸಿದರು.

ಅವರ ತೊಳಲಾಟನೂ ಅರ್ಥವಾಗುವಂತಹದ್ದೆ. ವಿದ್ಯಾರ್ಥಿಗಳಿಗೆ ಕೊಟ್ಟರೆ ಒಡೆದು ಹಾಕಬಹುದು.



ಒಡೆದ ಪದಾರ್ಥದ ಹಣಕಟ್ಟು ಅಂದರೆ ಸರ್ಕಾರಿ ಶಾಲೆ ಹುಡುಗ ಎಲ್ಲಿಂದ ತಂದಾನು? ಬಲವಂತ ಮಾಡಿದರೆ ಶಾಲೆಗೆ ಬರುವುದನ್ನೇ ನಿಲ್ಲುಸ್ತವೆ. ಹುಡುಗ ಶಾಲೆಗೆ ಬರ್ಲಿ ಅಂದ್ರೆ ಮೇಷ್ಟ್ರೇ ಕೈಯ್ಯಿಂದ ಪೀಕಬೇಕು. ಇದಕ್ಕೆ ಅತ್ಯುತ್ತಮ ಪರಿಹಾರ ಅಂದರೆ ಬಂದಿರೊ ಸಾಮಗ್ರಿಗಳ ತಂಟೇಗೆ ಹೋಗದಿರೋದು! ಅದನ್ನು ಕಂಡುಕೊಂಡಿದ್ದರು ಮೇಷ್ಟರು!

ಇಂತಹದ್ದೇ ಮುಕ್ತಿ ರಾಷ್ಟ್ರೋತ್ಥಾನದ ಪುಸ್ತಕಗಳಿಗೂ ದೊರೆಯುತ್ತೆ ಎಂಬುದರಲ್ಲಿ ಸಂಶಯ ಬೇಕಿಲ್ಲ, ಇವು ಅವರ ಗೋಡೌನ್‌ನಿಂದ ಪ್ರತಿ ಶಾಲೆಯ ಕಬೋರ್ಡ್ ಸೇರಿ ಧೂಳು ತಿನ್ನುತ್ತಾ ಬಿದ್ದಿರ್ತವೆ. ಯಾಕೆಂದ್ರೆ, ಹುಡುಗರು ಉಪಯೋಗಿಸಿದರೆ ಹರಿದು ಹಾಳಾಗ್ತವಲ್ಲಾ, ಇನ್‌ಸ್ಪೆಕ್ಷನ್‌ನಲ್ಲಿ ತೋರುಸ್ಬೇಕಲ್ಲ ಅದಕ್ಕೆ! ಪರಿಸ್ಥಿತಿ ಹೀಗಿರುವಾಗ ರಹಸ್ಯ ಕಾರ್ಯ ಸೂಚಿ ಕುರಿತು ಅನುಮಾನಿಸುವ ಅಗತ್ಯ ಇಲ್ಲ.

ಯಡ್ಯೂರಪ್ಪನವರ ಧಾರಾಳತನ ಮೆಚ್ಚಬೇಕು. ಬಹಳಷ್ಟು ಸಲ ಈಗ ಆಕ್ಷೇಪ ಎತ್ತುವವರೆ ಸರ್ಕಾರ ಪುಸ್ತಕ ಪ್ರಕಾಶನಕ್ಕೆ ಸಹಾಯ ಮಾಡ್ತಿಲ್ಲವೋ ಅಂತ ಬಡ್ಕೊಳ್ತಿದ್ರು. ಏನೋ ಇಷ್ಟು ಗೋಗರಿತಿದಾರಲ್ಲ ಅಂತ ಸಹಾಯ ಮಾಡೋಕೆ ಹೊಂಟ್ರು ಯಡ್ಡಿ. ಈಗ ಯಾವುದೋ ಒಂದು ಸಂಸ್ಥೆಗೆ ಕೊಟ್ಟಿದ್ದಾರೆ ಅಂತ ಕೂಗಾಡ್ತಿದಾರೆ. ಆ ಸಂಸ್ಥೆ ಬರೀ ಕೆಟ್ಟ ಪುಸ್ತಕಾನೆ ಅಂತ ಪ್ರಕಟಿಸೋದು. ಒಳ್ಳೆದೋ ಕೆಟ್ಟದ್ದೊ ಅವು ಪುಸ್ತಕ ಅಲ್ವ. ಅವೆಂಥ ಪುಸ್ತಕಗಳು ಅಂತ ತೀರ್ಮಾನ ಹೇಳೋಕೆ ಯಡ್ಯೂರಪ್ಪನವರೇನು ಅವನ್ನು ಓದಿದ್ದರಾ. ಓದುತ್ತಾ ಕುಳಿತರೆ ಅಭಿವೃದ್ಧಿ ಮಂತ್ರ ಜಪಿಸೋಕೆ ಸಮಯ ಎಲ್ಲಿ ಸಿಗುತ್ತೆ ಹೇಳಿ. ಅದ್ಕೇ ಅವರ ಪರಿಚಯಸ್ಥರನ್ನು ಕೇಳಿರ್ತಾರೆ 'ಈ ಪುಸ್ತಕ ಹೆಂಗವೆ' ಅಂತಾವ. ಅವ್ರು 'ಭೇಷಾಗವೆ' ಅಂದಿರ್ತಾರೆ. 'ಹಂಗಾರೆ ತಗಳ್ಳಿ' ಅಂತ ಸುತ್ತೋಲೆ ಹೊರಡಿಸಿರ್ತಾರೆ. ಇಷ್ಟಕ್ಕೇ ರಹಸ್ಯ ಕಾರ್ಯಸೂಚಿ ಅಂದರೆ ಸಮಾನಾ ಅಂತ.

ಜಯಪ್ರದಾ ಕಣ್ಣೀರು!

ಇದು ಸಿನಿಮಾದಲ್ಲಿ ಅಲ್ಲ, ನಿಜಜೀವನದಲ್ಲಿ!

ಅದು ಹರಿದದ್ದು ನೆರೆಯಿಂದ ಪರಿತಪಿಸುತ್ತಿರುವ ತನ್ನ ಕ್ಷೇತ್ರದ ಜನರನ್ನು ನೋಡಲು ಹೋಗಿದ್ದಾಗ!

ಎಂತಹ ಕರುಣಾಮಯಿ ಈ ಜಯಪ್ರದಾ!

ಸ್ವಲ್ಪ ನಿಧಾನಿಸಿ. ಈಗಲೇ ತೀರ್ಮಾನ ಬೇಡಿ.

ಈ ಸಿನಿಮಾ ಜನ ಅಂದರೆ ಜನಕ್ಕೆ ಏನೋ ಒಂದು ಇದು. ಅವರು ಸಿನಿಮಾಗಳಲ್ಲಿ ಬಡವರಿಗೆ ಮಾಡೊ ಸಹಾಯವನ್ನ, ನ್ಯಾಯಕ್ಕಾಗಿ ಹೋರಾಡುವುದನ್ನ ನಿಜ ಜೀವನದಲ್ಲೂ ಮಾಡ್ತಾರೆ ಅನ್ನೊ ಭ್ರಮೆ. ಅವರ ದರ್ಶನ ಪಡೆಯೋದೆ ಒಂದು ಭಾಗ್ಯ ಅನ್ನೊ ನಂಬಿಕೆ. ನೋಡೋಕೆ ಸಾವಿರಾರು ಜನ ಸೇರ್ತಾರೆ. ಎಲ್ಲ ರಾಜಕೀಯ ಪಕ್ಷಗಳಿಗೂ ಇವರಂತಹವರ ಮೇಲೆ ಕಣ್ಣು. ಸಮಾಜವಾದಿ ಪಕ್ಷದವರು ಆಂಧ್ರದ ಜಯಪ್ರದಾ ಎಳ್ಕೊಂಡೋಗಿ ಉತ್ತರ ಪ್ರದೇಶದಲ್ಲಿ ಎಂಪಿ ಮಾಡಿದ್ರು. ಈ ಎಂಪಿಗೆ ಇತ್ತೀಚೆಗೆ ಇದ್ದಕ್ಕಿದ್ದಂತೆ ಉಮೇದು ಬಂತು. ತನ್ನ ಕ್ಷೇತ್ರದಲ್ಲಿ ನೆರೆ ಬಂದು ಜನಕ್ಕೆ ತೊಂದರೆ ಆಯ್ತಲ್ಲ ಅದ ಕಣ್ಣಿಂದ ನೋಡಬೇಕು ಅನ್ನುಸ್ತು. ಅಲ್ಲಿ ಹೋದಳು. ಹಾಳಾದ ರಸ್ತೇನೆ ನೆರೆಕಿತ್ತು ಬಿಸಾಕಿತ್ತು. ನಾನೆಷ್ಟು ಸಲ ಇಂತಹ ಸನ್ನಿವೇಶಗಳನ್ನು ಸಿನಿಮಾಗಳಲ್ಲಿ ಎದುರಿಸಿಲ್ಲ ಅಂತ ದೋಣೀಲೆ ಹೊರಟ್ಳು. ನೀರಿನ ಬರಟು ಹರಿವು ಆಕೆ ಜೀವಾನೇ ಕೈಗೆತಂತು. ಪಾರಾದರೆ ಸಾಕಲ್ಲ ಅಂತ ಹೆಂಗೋ ನಿಭಾಯಿಸಿದಳು. ಆಮೇಲೆ ರಸ್ತೆಯೇನೋ ಸಿಕ್ತು. ಆದರೆ ಕುದುಕಲು ರಸ್ತೆ, ಎತ್ತಿನಗಾಡಿ ಪ್ರಯಾಣ. ಹಳ್ಳಕ್ಕೆ ಒಂದು ಚಕ್ರ ಧಡಕ ಅಂತ ಇಳೀತಿದ್ದಂಗೆ ಅವಳ ಜೀವಾನೂ ಧಡಕ್ ಅಂತಿತ್ತು. ಪ್ರಯಾಣ ಮುಗಿಯೋ ಹೊತ್ತಿಗೆ ಆಕೆ ಮೈಕೈ ಎಲ್ಲ ಒಳಕಲ್ಲಲ್ಲಾಕಿ ಕುಟ್ಟಿದಂಗೆ ಆಯ್ತಂತೆ. ಆ ನೋವ ತದೀಲಾರದ ಅವಳ ಕಣ್ಣಲ್ಲಿ ನೀರು ಬಂತಂತೆ!


ಕಾರಣ ತಿಳೀತಲ್ಲಾ.....

ನೀತಿ: ಸಿನಿಮಾದೋರು ಜನಪ್ರತಿನಿಧಿಗಳಾದರೆ ಕಣ್ಣಲ್ಲಿ ನೀರು ಬರೋದು ಬಡವರ ಕಷ್ಟಕ್ಕಲ್ಲ, ತನಗಾದ ಹಿಂಸೆಗೆ.

ಒಂದು ಪತ್ರ

ಜನತಂತ್ರದ ಆಶಯಕ್ಕೆ ಪ್ರಭುತ್ವ ತಲೆ ಬಾಗಲೇಬೇಕು

ಜನತಾಂತ್ರಿಕ ವ್ಯವಸ್ಥೆಯಲ್ಲಿ ನ್ಯಾಯಾಂಗದ ಪಾ... ಅತ್ಯಂತ ಹಿರಿದಾದುದು. **Judicial activism** ಸದರಿ ಸಂದರ್ಭಗಳಲ್ಲಿ ಪ್ರಭುತ್ವದ ಹೊಣೆಗಾರಿ... ಮತ್ತು ಸಾಮಾಜಿಕ ಬದ್ಧತೆಗೆ ಒಂದು ಹೊ... ತಿರುವು ನೀಡಿದೆ. ಒಟ್ಟಿನಲ್ಲಿ ನ್ಯಾಯಾಂಗ ಸಾಮಾ... ಪ್ರಜೆಗೆ ಕಟ್ಟಕಡೆಯ ಆಶಾಕಿರಣ. ಆದ್ದರಿಂದ ನ್ಯಾಯಾಂಗ ಎಂಬ ವ್ಯವಸ್ಥೆಯ ಆಧಾರಸ್ತಂಭ ಮತ್ತು ದಿಕ್ಸೂಚಿಗಳಾದ ನ್ಯಾಯಾಧೀಶರ ವ್ಯಕ್ತಿತ್ವ ಮತ್ತು ಕ್ರಿಯೆಯಲ್ಲಿ ಉದಾತ್ತವಾದ ಆದರ್ಶಗಳನ್ನು ಬಯಸುವುದು ಲೋಕಹಿತದಿಂದ ತಪ್ಪಲ್ಲ.



ಭ್ರಷ್ಟಾಚಾರ ಪ್ರಸ್ತುತ ದಿನಗಳಲ್ಲಿ ನಮ್ಮ ವ್ಯವಸ್ಥೆಯನ್ನೇ ಕುಲಗೆಡಿಸುತ್ತಿರುವ ವೇಗವನ್ನು ನೋಡಿದರೆ ಮುಂದೊಂದು ದಿನ ನಾಗರಿಕ ಕ್ರಾಂತಿ **(Civilwar)** ಅನಿವಾರ್ಯವಾಗಬಲ್ಲದು. ಕ್ರಾಂತಿಯ ಸ್ವರೂಪವನ್ನು ಊಹಿಸುವುದು ಸುಲಭ ಸಾಧ್ಯವಲ್ಲ. ಇಂತಹ ಒಂದು ಸಂದರ್ಭದಲ್ಲಿ ನ್ಯಾಯಪಾಲನೆ ಮಾಡುವ ನ್ಯಾಯಾಧೀಶರು ಇಡೀ ವ್ಯವಸ್ಥೆಯಲ್ಲಿ ಪ್ರಧಾನ ಚಿಕಿತ್ಸಕರಾಗಿ ತಮ್ಮನ್ನು ಮರುಸ್ಥಾಪಿಸಿಕೊಳ್ಳುವ ತುರ್ತಿದೆ. ಈ ನೆಲೆಯಲ್ಲಿ ನ್ಯಾಯಾಂಗದ ಸಮಗ್ರ ಸ್ವಚ್ಛೀಕರಣದ ಅಗತ್ಯವಿದೆ. ಹಾಗೆಯೇ ನ್ಯಾಯಾಧೀಶರ ಚಾರಿತ್ರ್ಯದಲ್ಲೂ.

ಭಾರತದ ಸಂವಿಧಾನ ನಮ್ಮ ಜನತಂತ್ರದ ಆತ್ಮವಿದ್ದಂತೆ. ಈ ಆತ್ಮದಲ್ಲಿ ಸರ್ವರಿಗೂ ಸಮಾನತೆ ಇದೆ. ನ್ಯಾಯಾಂಗವೂ ಇದಕ್ಕೆ ಹೊರತಲ್ಲ. **No one is above the law** ಮತ್ತು **All are equal before the law** ಎಂಬ ಸಂವಿಧಾನದತ್ತ ಮೌಲ್ಯಗಳು ಮತ್ತು ಆ ಮೌಲ್ಯಗಳ ವ್ಯಾಪಕತೆಯ ಆವರಣವನ್ನು ಯಾರು ಮೀರುವಂತಿಲ್ಲ. ನ್ಯಾಯಾಧೀಶರುಗಳು ನ್ಯಾಯದಾನ ಪ್ರಕ್ರಿಯೆಯ ಸಲುವಾಗಿ ವಿಶೇಷ ಸವಲತ್ತುಗಳನ್ನು ಬಯಸಬಹುದೇ ಹೊರತು, ವಿಶೇಷ ವ್ಯಕ್ತಿಗಳ ನೆಲೆಯಲ್ಲಿ ಅಲ್ಲ. ಅವರು ಸಹ ಸಾಂವಿಧಾನಿಕ ಚೌಕಟ್ಟು ಮತ್ತು ಅದರ ಆದರ್ಶಗಳ ವ್ಯಾಪ್ತಿಯಲ್ಲೇ ತಮ್ಮನ್ನು ಗುರುತಿಸಿಕೊಳ್ಳಬೇಕಾಗಿದೆ.

ಪ್ರಶಾಂತ್ ಭೂಷಣ್‌ರವರ ಅಭಿಮತ ನಮ್ಮೆಲ್ಲರ ಅಭಿಮತವೂ ಹೌದು. ಜನತಂತ್ರದ ಆಶಯಕ್ಕೆ ಪ್ರಭುತ್ವ ತಲೆಬಾಗಲೇ ಬೇಕು. ಆ ವಿವೇಚನೆ ಆದಷ್ಟು ಬೇಗ ಪ್ರಭುತ್ವದ ಮನಸ್ಸಿನಲ್ಲಿ ಜಾಗೃತಗೊಳ್ಳಲಿ.

"ನ್ಯಾಯದ ದೀವಿಗೆ ಕತ್ತಲಲ್ಲಿ ಹೊರಹೊರಟರೆ, ಕತ್ತಲಿನ ಮಹತ್ವವೆಷ್ಟು?"-ಜೇಮ್ಸ್ ಬ್ರೈಸ್

-ವಿದ್ಯಾಧರ ರೈ ಎಂ.ಆರ್., ಮಡಿಕೇರಿ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ಅರುಣ್ ಸಿನಿ Bits

...ಳೆ' ತೊಡಿಸಿದ ನಿರ್ಮಾಪಕ!




...ಶಿವರಾಜ್ ಕುಮಾರ್ ಅಭಿನಯದ 'ಭಾಗ್ಯದ ಬಳೆಗಾರ' ಎಂಬ ...ರ್ ಬ್ಲಾಂಡ್ ಚಿತ್ರವೊಂದು ಬಿಡುಗಡೆಯಾಗಿ ಫ್ಲಾಪ್ ಕೂಡ ಆಗಿದೆ. ...ಬ ಪ್ರಕಾಶ್ ನಿರ್ದೇಶನದ ಈ ಚಿತ್ರವನ್ನು ನೋಡಿ ಜನ ಕಣ್ಣೀರಿಡಲಿಲ್ಲ ...ಬುದು ಎಷ್ಟು ಸತ್ಯವೋ, ಅಷ್ಟೇ ಸತ್ಯ ಈ ಚಿತ್ರಕ್ಕಾಗಿ ದುಡಿದ ತಂತ್ರಜ್ಞರು ಇವತ್ತೂ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ ಎಂಬುದು.

ತಂಗಿ ಸಿರೀಸ್‌ನ ಕಥೆಗಾರ ಅಜಯ್ ಕುಮಾರ್ ಮತ್ತು ಚಿತ್ರದ ನಿರ್ಮಾಪಕ ರಮೇಶ್ ಕಶ್ಯಪ್ ಇಬ್ಬರೂ ಸೇರಿ ಚಿತ್ರಕ್ಕೆ ಸಂಭಾಷಣೆ ಬರೆದಿದ್ದ ಮಳವಳ್ಳಿ ಸಾಯಿಕೃಷ್ಣ ಕ್ಯಾಮೆರಾಮನ್ ಎಂ.ಆರ್. ಸೀನು ಸೇರಿದಂತೆ ಬಹಳಷ್ಟು ಮಂದಿಗೆ ದುಡ್ಡು ಕೊಡದೇ ಸತಾಯಿಸುತ್ತಿದ್ದಾರಂತೆ.

ತಂತ್ರಜ್ಞರ ವಿಚಾರ ಬದಿಗಿರಲಿ, ನಿರ್ದೇಶಕ ಸಾಯಿಪ್ರಕಾಶ್ ಕೈಗೇ ಈ ಕಶ್ಯಪ ಗುರುಗಳು ಬಳೆ ತೊಡಿಸಿದ್ದಾರೆ ಅನ್ನೋದು ಮತ್ತೊಂದು ಸುದ್ದಿ. ಚಿತ್ರೀಕರಣ ...ರ್ಭದಲ್ಲಿ ರಮೇಶ್ ಕಶ್ಯಪ್ ಕೊಡುತ್ತಿದ್ದ ಕಾಟಕ್ಕೆ ಸ್ವತಃ ಸಾಯಿಯೇ 'ಕಣ್ಣೀರು' ಸುರಿಸುತ್ತಾ "ನೇನು ...ದಲ್ಲಿ ಎಂಭತ್ತು ಚಿತ್ರ ಡೈರೆಕ್ಟ್ ಚೇಸೇನು. ಕಶ್ಯಪ್‌ಗಾರು ನನ್ನನ್ನು ಮನೆಕಟ್ಟುವ ಮೇಸ್ತ್ರಿ ಥರಾ ಟ್ರೀಟ್ ...ಡಿ ಚಾನ ಬೇಜಾರ್ ಮಾಡ್ತಾರು" ಎಂದು ಈ ತೆಲುಗು-ಕನ್ನಡದಲ್ಲಿ ಬಿಕ್ಕಿಬಿಕ್ಕಿ ಅಳುತ್ತಿದ್ದರಂತೆ.

...ಗ್ತಿ ಸಿನಿಮಾಕ್ಕೆ ಲಾಡ್ ಕಾಸು?




...ನಾಗತಿಹಳ್ಳಿ ಚಂದ್ರಶೇಖರ್ ಸಂತೋಷ್ ಎಂಬ ಹುಡುಗನನ್ನು ಹೀರೋ ...ಡಿ 'ನೂರೂ ಜನ್ಮಕೂ' ಎಂಬ ಚಿತ್ರ ಸಿದ್ಧಪಡಿಸುತ್ತಿರುವುದು ಎಲ್ಲರಿಗೂ ... ಗೊತ್ತಾಗಿರುವ ವಿಚಾರ. ಆದರೆ ಈ ಚಿತ್ರದ ನಿರ್ಮಾಪಕರ್‍ಯಾರು ಎಂಬ ... ಮಾಧ್ಯಮದವರನ್ನು ಕಾಡುತ್ತಿತ್ತು.

...ನಂಬಲರ್ಹ ಮೂಲದ ಪ್ರಕಾರ ನಾಗ್ತಿಯ ಈ ಹೊಸ ಚಿತ್ರವನ್ನು ...ಸುತ್ತಿರುವುದು ಗಣಿ ಧಣಿ ಸಂತೋಷ್ ಲಾಡ್. ಕಳೆದ ಮೂರು ವರ್ಷಗಳಿಂದ ...ೋಷ್ ಲಾಡ್ "ಕನ್ನಡ ಚಿತ್ರರಂಗದಲ್ಲಿ ಒಟ್ಟಿಗೇ ಐದು ಸಿನಿಮಾಗಳನ್ನು ನಿರ್ಮಿಸುತ್ತೇನೆ. ಟಿ.ಎನ್.ಸೀತಾರಾಂ, ...ಹಳ್ಳಿ, ಶಿವಮಣಿ ಸೇರಿದಂತೆ ಐದು ಜನ ನಿರ್ದೇಶಕರಿಗೆ ಅದರ ಜವಾಬ್ದಾರಿ ವಹಿಸುತ್ತೇನೆ" ಎಂದು ...ೂರ ಬಾರಿಸುತ್ತಿದ್ದರು. ಆದರೆ ಯಾವ ಸಿನಿಮಾವೂ ಸೆಟ್ಟೇರದಿದ್ದ ಕಾರಣ ಯಾರೂ ಲಾಡ್ ಮಾತನ್ನು ...ಯಸ್ಸಾಗಿ ತೆಗೆದುಕೊಂಡಿರಲಿಲ್ಲ.

...ಒಂದು ವೇಳೆ ನಾಗ್ತಿ ಚಿತ್ರಕ್ಕೆ ಲಾಡ್ ಹಣ ಹೂಡುತ್ತಿರುವುದು ನಿಜವೇ ಆದಲ್ಲಿ ಅವಕಾಶವಿಲ್ಲದೆ ...ಲಿರುವ ನಿರ್ದೇಶಕರೆಲ್ಲಾ ಲಾಡ್ ಬಳಿ ದೌಡಾಯಿಸುವುದು ಗ್ಯಾರೆಂಟಿ.

ನೆಹರೂನ ಸಮ್ಮರ್ ಸಮಾಚಾರ!



ಕೆಲ ವರ್ಷಗಳ ಹಿಂದೆ ಅಲೆಕ್ಸ್ ಟಂಜಲ್‌ಮನ್ ಎಂಬಾತ 'ಇಂಡಿಯನ್ ಸಮ್ಮರ್' ಎಂಬ ಪುಸ್ತಕವನ್ನು ರಚಿಸಿದ್ದರು. 1947ರಲ್ಲಿ ಮೌಂಟ್‌ಬ್ಯಾಟನ್ ಮತ್ತು ಆತನ ಪತ್ನಿ ಎಡ್ವಿನಾ ಭಾರತಕ್ಕೆ ಆಗಮಿಸಿದ್ದರ ಸುತ್ತ ಮಾಹಿತಿ ನೀಡುವ ಪುಸ್ತಕ ಅದಾಗಿತ್ತು. ಅದರಲ್ಲಿ ಗಾಂಧಿ, ನೆಹರೂ ಸೇರಿದಂತೆ ಅಂದಿನ ಎಲ್ಲ ನಾಯಕರ ಪ್ರಸ್ತಾಪವಿತ್ತು. ಜವಹರಲಾಲ್ ನೆಹರೂ ಮೌಂಟ್‌ಬ್ಯಾಟನ್‌ನ ಹೆಂಡತಿ ಎಡ್ವಿನಾ ಪಕ್ಕ ನಿಂತು ನಗುತ್ತಿರುವ ಚಿತ್ರವನ್ನೇ ಆ ಪುಸ್ತಕದ ಹೊದಿಕೆಯನ್ನಾಗಿ ರೂಪಿಸಿದ್ದರು.

ಈಗ ಜೋರ್ರೈಟ್ ಎಂಬ ಹಾಲಿವುಡ್ ನಿರ್ದೇಶಕ ಅದೇ 'ಇಂಡಿಯನ್ ಸಮ್ಮರ್' ಪುಸ್ತಕವನ್ನು ಆಧರಿಸಿ ಸಿನಿಮಾ ಮಾಡಲು ಮುಂದಾಗಿದ್ದಾನೆ. ಇದಕ್ಕೆ ಭಾರತ ಸರ್ಕಾರದ ಅನುಮತಿ ...ರುಬೇಕಂತೆ. ಒಂದು ವೇಳೆ ಆ ಸಿನಿಮಾ ಮೂಡಿಬಂದಿದ್ದೇ ಆದಲ್ಲಿ ನೆಹರೂ ಮತ್ತು ಎಡ್ವಿನಾ ...ವಿನ ಪ್ರೇಮಕತೆ ಹೊರಹೊಮ್ಮುವುದರ ಬಗ್ಗೆ ಅನುಮಾನವಿಲ್ಲ.

...ಹೀಗಿರುವಾಗ ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರ್ಕಾರ ಈ ಸಿನಿಮಾ ನಿರ್ಮಾಣಕ್ಕೆ ಒಪ್ಪಿಗೆ ನೀಡಿ ತನ್ನ ... ಮೇಲೆ ತಾನೇ ಚಪ್ಪಡಿ ಎಳೆದುಕೊಳ್ಳುತ್ತದಾ ಎಂಬುದೇ ಸದ್ಯದ ಪ್ರಶ್ನೆ.

ತಿನ್ನು ಪ್ರೀತಿಸು ಪ್ರಾರ್ಥಿಸು

...ಹಾಲಿವುಡ್‌ನಲ್ಲಿ 'ಈಟ್, ಲವ್, ಪ್ರೇ' ಎಂಬ ...ವೊಂದು ಆರಂಭವಾಗಿದೆ. ಖ್ಯಾತ ನಟಿ ಜೂಲಿಯಾ ...ರ್ಟ್ಸ್ ಈ ಚಿತ್ರದ ಹೀರೋಯಿನ್.

...ಈ ಚಿತ್ರದ ಚಿತ್ರೀಕರಣ ಭಾರತದಲ್ಲೂ ...ಯುತ್ತಿದೆ. ದೆಹಲಿಗೆ ಸಮೀಪವಿರುವ ಪಟೌದಿ ...ಲ್ಲಿನ ಹರಿಮಂದಿರ ಸಂಸ್ಕೃತ ವಿದ್ಯಾಲಯದಲ್ಲಿ ... ಶೂಟಿಂಗ್ ನಡೆದಿದ್ದು ಇದಕ್ಕಾಗಿ ವಿಶೇಷವಾದ ...ಗಳನ್ನೂ ನಿರ್ಮಿಸಲಾಗಿದೆ.

...ಅಲ್ಲಿ ನಡೆಯುವ ವೇದಘೋಷಗಳ ದೃಶ್ಯದಲ್ಲಿ ನಟಿ ...ಯಾ 180 ಸಂಸ್ಕೃತ ಶ್ಲೋಕಗಳನ್ನು ...ಲಿದ್ದಾಳಂತೆ. ಈ ದೃಶ್ಯದಲ್ಲಿ ಆರು ಜನ ...ೀಯ ಸನ್ಯಾಸಿಗಳೂ ಪಾಲ್ಗೊಳ್ಳಲಿದ್ದಾರಂತೆ. ...ಮಂದಿರದ ಪ್ರಿನ್ಸಿಪಾಲ್ ಸ್ವಾಮಿ ಚರಣ್ ಶರ್ಮಾ ...ಾತನೂ ಆ ಆರು ಮಂದಿಯಲ್ಲಿ ಒಬ್ಬನಂತೆ. ...ಗಿ "ಮಾದಕ ನಟಿ ಜೂಲಿಯಾ ...ರ್ಟ್ಸ್‌ಳೊಂದಿಗೆ ಶೂಟಿಂಗ್‌ನಲ್ಲಿ ಪಾಲ್ಗೊಳ್ಳುವ ...ಯ ಪವಿತ್ರಾದಂತಿಲ್ಲ ನನ್ನ ದೇಹದಲ್ಲಿ ವಿನೋ ...ದಾ ಥ್ರಿಲ್ ಆಗುತ್ತಿದೆ" ಎಂದಿದ್ದಾನೆ ಆ ಮುದಿ ...

...ಬಹುಶಃ ಆ ಸನ್ಯಾಸಿ ಇನ್ನು ಮುಂದೆ ಪ್ರೇ ...ಮಾಡುವುದನ್ನು ಬಿಟ್ಟು ಬರೀ ಈಟು, ಲವ್‌ಗಳಲ್ಲೇ ...ತೊಡಗಬಹುದು.



ಸ್ಯಾಂಡಲ್‌ವುಡ್‌ಗೆ ನಾನಾ ಆಗಮನ

ಕೊನೆಗೂ ನಾನಾ ಪಾಟೇಕರ್ ಎಂಬ ಹಿಂದಿ ಚಿತ್ರರಂಗದ ಅದ್ಭುತ ನಟ ಮತ್ತು ತಿಕ್ಕಲು ಮನುಷ್ಯ ಕನ್ನಡ ಚಿತ್ರವೊಂದರಲ್ಲಿ ನಟಿಸುವುದು ಗ್ಯಾರೆಂಟಿಯಾಗಿದೆ. ಈ ಚಿತ್ರದ ಹೆಸರು 'ಯಕ್ಷ'. ಇದನ್ನು ಎಂ.ಎಸ್. ರಮೇಶ್ ನಿರ್ದೇಶಿಸಲಿದ್ದು ನಾಯಕನಟ ಯೋಗೀಶನ ಮುದ್ದಿನ ಅಪ್ಪ ಟಿ.ಪಿ. ಸಿದ್ದರಾಜು ನಿರ್ಮಿಸುತ್ತಿದ್ದಾರೆ.


ನಾನಾ ಪಾಟೇಕರ್ ತಮ್ಮ ಚಿತ್ರದಲ್ಲಿ ನಟಿಸುತ್ತಾರೆಂದು ಕಳೆದ ಎರಡು ವರ್ಷಗಳಿಂದ ಹತ್ತಾರು ನಿರ್ದೇಶಕರು ಹೇಳಿ ಪುಕ್ಕಟೆ ಪಬ್ಲಿಸಿಟಿ ಪಡೆಯುತ್ತಿದ್ದರು. ಕೊನೆಕೊನೆಗೆ ನಾನಾ ನಟಿಸುತ್ತಾರೆ ಎಂದು ಹೇಳುವುದೇ ಒಂದು ಫ್ಯಾಷನ್ ಆಗಿಯೂ ಬಿಟ್ಟಿತ್ತು. ಯಾಕೆಂದರೆ, ಕನಿಷ್ಠ ಒಂದು ಸುತ್ತಿನ ಪ್ರಚಾರ ನಾನಾ ಹೆಸರಿನಲ್ಲೇ ಉಚಿತವಾಗಿ ಸಿಗುತ್ತದಲ್ಲಾ ಎಂಬುದು ಅವರ ಲೆಕ್ಕಾಚಾರವಾಗಿತ್ತು.

ಆದರೆ ಈಗ ಕೊನೆಗೂ ಹಠ ಹಿಡಿದು ರಮೇಶ್ ಮತ್ತು ಸಿದ್ದರಾಜು ಜೋಡಿ ನಾನಾ ಅವರ ಕಾಲ್‌ಶೀಟ್ ಪಡೆಯುವುದರಲ್ಲಿ ಯಶಸ್ವಿಯಾಗಿದೆ. ನೋ ಡೌಟ್ ನಾನಾ ಭಾರತೀಯ ಚಿತ್ರಜಗತ್ತು ಕಂಡು ಅದ್ಭುತ ಪ್ರತಿಭೆಗಳಲ್ಲಿ ಒಬ್ಬರು. ಅವರು ಪ್ರತಿಭಾವಂತ ಎಂಬುದು ಎಷ್ಟು ನಿಜವೋ ಆತ ತಿಕ್ಕಲು ಎಂಬುದೂ ಅಷ್ಟೇ ನಿಜ ಕೂಡ. ಆದರೆ ನಾನಾ ನಟನೆ ಮತ್ತು ಡೈಲಾಗ್ ಡೆಲಿವರಿಯ ಶೈಲಿ ಮತ್ತು ಮ್ಯಾನರಿಸಂಗಳೆಲ್ಲವೂ ಆ ತಿಕ್ಕಲುತನವನ್ನು ಮರೆಮಾಚುವಷ್ಟು ನೈಜವಾಗಿರುತ್ತದೆ. ಈತ ನಟಿಸಿದ 'ಕ್ರಾಂತಿವೀರ್' ಚಿತ್ರವೊಂದೇ ಸಾಕು ಆತನಲ್ಲಡಗಿರುವ ಅಗಾಧ ಪ್ರತಿಭೆ ತೋರಿಸಲು.

ಇಂತಹ ನಟ ಕನ್ನಡ ಚಿತ್ರವೊಂದರಲ್ಲಿ ನಟಿಸುತ್ತಿರುವುದು ನಿಜಕ್ಕೂ ಸ್ವಾಗತಾರ್ಹವೇ. ಹಿಂದೊಮ್ಮೆ ಕಮಲ್ ಹಾಸನ್ ಕನ್ನಡ ಚಿತ್ರವೊಂದರಲ್ಲಿ ನಟಿಸುತ್ತಾರೆಂದಾಗ ಇದೇ ರೀತಿಯ ಉತ್ಸಾಹ ಕಂಡುಬಂದಿತ್ತು. 'ಸಿಪಾಯಿ' ಚಿತ್ರಕ್ಕೆ ರವಿಚಂದ್ರನ್ ತನ್ನ ಸ್ನೇಹಿತ ಚಿರಂಜೀವಿಯನ್ನು ಕರೆತಂದಾಗಲಂತೂ ಕನ್ನಡ ಚಿತ್ರರಂಗದ ಜನ ಪುಳಕಿತರಾಗಿದ್ದರು. ಆ ಚಿತ್ರದ ವ್ಯಾಪಾರ ಚಿರಂಜೀವಿಯ ಎಂಟ್ರಿಯಿಂದಾಗಿ ಹೊಸ ದಾಖಲೆ ಸೃಷ್ಟಿಸಿದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು. ಹಾಗೆಯೇ 'ಅಮೃತಧಾರೆ' ಚಿತ್ರದ ಒಂದೇ ಒಂದು ದೃಶ್ಯದಲ್ಲಿ ಅಮಿತಾಬ್ ಬಚ್ಚನ್ ಬಂದುಹೋದಾಗಲೂ ಗಾಂಧಿನಗರದವರು ಪುಳಕಿತರಾಗಿದ್ದರು. ಈಗ ನಾನಾ ಪಾಟೇಕರ್ ಬರುತ್ತಿದ್ದಾರೆ.




ಆದರೆ ಇಲ್ಲೊಂದು ವೈರುಧ್ಯವನ್ನು ನಾವು ಗಮನಿಸಬೇಕು. ನಾನಾ ಪಾಟೇಕರ್ ಕನ್ನಡಕ್ಕೆ ಬರುತ್ತಿರುವ ಈ ಸಂದರ್ಭದಲ್ಲೇ ಅಪ್ಪಟ ಕನ್ನಡಿಗನಾದ ಪ್ರಕಾಶ್ ರೈ ಹಿಂದಿ ಸಿನಿಮಾದಲ್ಲಿ ಮಿಂಚುತ್ತಿದ್ದಾರೆ. ಮೊನ್ನೆ ಅವರು ಸಲ್ಮಾನ್ ಖಾನ್‌ನೊಂದಿಗೆ ನಟಿಸಿರುವ 'ವಾಂಟೆಡ್ ಡೆಡ್ ಅಂಡ್ ಅಲೈವ್' ಚಿತ್ರ ಬಿಡುಗಡೆಗೊಂಡಿದ್ದು ಅದರಲ್ಲಿ ಪ್ರಕಾಶನ ನಟನೆಯನ್ನು ಜನ ಮತ್ತು ವಿಮರ್ಶಕರು ಮೆಚ್ಚಿದ್ದಾರೆ. ಅಷ್ಟೇ ಅಲ್ಲ, ಈಗ ಬಹುತೇಕ ನಿರ್ದೇಶಕರು ನಾನಾ ಪಾಟೇಕರ್‌ಗಾಗಿ ಕಾಯ್ದಿರಿಸಿದ್ದ ಪಾತ್ರಗಳನ್ನು ಪ್ರಕಾಶ್ ರೈಗೆ ನೀಡಲಾರಂಭಿಸಿದ್ದಾರೆ. ಅಲ್ಲಿಗೆ ಒಬ್ಬ ಹೊಸ ನಾನಾ ಪಾಟೇಕರ್‌ನನ್ನು ಹಿಂದಿಯ ನಿರ್ದೇಶಕರು ಪ್ರಕಾಶ್ ರೈಯಲ್ಲಿ ಕಂಡಿದ್ದಾರೆ. ಅಂದರೆ ಸಿಂಹದ ಗುಹೆಗೆ ಹೋಗಿ ಸಿಂಹಕ್ಕೇ ಸವಾಲು ಎಸೆಯುವಂತೆ ಪ್ರಕಾಶ್ ರೈ ಈಗ ಹಿಂದಿ ಚಿತ್ರರಂಗದಲ್ಲಿ ಮಿಂಚಲಾರಂಭಿಸಿದ್ದಾರೆ.



ಆದರೆ ನಮ್ಮವರಿಗೆ ಹಿತ್ತಲ ಗಿಡ ಮದ್ದಲ್ಲ, ಅದು ಪ್ರಕಾಶ್ ರೈ ಕೇಸಿನಲ್ಲಂತೂ ನೂರಕ್ಕೆ ನೂರು ಸತ್ಯ. ಈ ಪ್ರತಿಭಾವಂತ ಅಮಿತಾಬ್ ಬಚ್ಚನ್, ಮಮ್ಮುಟಿ, ರಜನಿಕಾಂತ್, ಕಮಲ್ ಹಾಸನ್, ಚಿರಂಜೀವಿ, ಮೋಹನ್‌ಲಾಲ್ ಮೊದಲಾದ ದಿಗ್ಗಜರ ಜೊತೆ ನಟಿಸಿದ್ದರೂ ಕನ್ನಡದಲ್ಲಿ ಆತನಿಗೆ ಅವಕಾಶ ಸಿಕ್ಕಿದ್ದು ಕೆಲವು ಚಿತ್ರಗಳಲ್ಲಿನ ಖಳನಾಯಕನ ಪಾತ್ರಗಳು ಮಾತ್ರ. ರೈಯ ಪ್ರತಿಭೆಯನ್ನು ಮನಸ್ಸಿನಲ್ಲಿಟ್ಟು ಯಾವ ನಿರ್ದೇಶಕನೂ ಒಂದು ಚೆನ್ನಾದ ಪಾತ್ರವನ್ನು ಹೆಣೆದದ್ದೇ ನಮ್ಮಲ್ಲಿಲ್ಲ. ರೈಗಾಗಿ ಕಾದುಕುಳಿತ ನಿರ್ದೇಶಕನೂ ನಮ್ಮ ನಡುವಿಲ್ಲ. ಆದರೆ ಅದೇ ನಾನಾಗಾಗಿ ಮುಂಬೈಗೆ ಹೋಗಿ ಅವಮಾನ ಮಾಡಿಸಿಕೊಂಡು ಬಂದಿರುವ ಕನ್ನಡದ ಎಷ್ಟೋ ನಿರ್ದೇಶಕರು ಗಾಂಧಿನಗರದಲ್ಲಿದ್ದಾರೆ.

ಕಾಕತಾಳೀಯವೆಂದರೆ, ಪ್ರಕಾಶ್ ರೈ ನಿರ್ದೇಶಕನಾಗಿ ಕನ್ನಡ ಚಿತ್ರರಂಗದಲ್ಲಿ ತನ್ನ ಅದೃಷ್ಟವನ್ನು ಪರೀಕ್ಷೆ ಮಾಡಲು ಹೊರಟಿರುವ ಈ ಸಂದರ್ಭದಲ್ಲೇ ನಾನಾ ಪಾಟೇಕರ್ ಕೂಡಾ ಕನ್ನಡಕ್ಕೆ ಖಳನಾಯಕನಾಗಿ ಆಗಮಿಸುತ್ತಿದ್ದಾರೆ. ಈಗ ನಾನಾ ಅವರ ವರ್ಚಸ್ಸು ಕಳೆಗುಂದಿದೆಯಲ್ಲದೆ, ಈಗ ಹಿಂದಿಯಲ್ಲೇ 'ನಾನಾ ಅಂದರೆ ಯಾರು?' ಎಂಬ ಜಿಗುಪ್ಸೆಯೂ ಪ್ರಾರಂಭವಾಗಿದೆ. ಆದರೂ ನಾನಾ ಪಾಟೇಕರ್ ಒಬ್ಬ ಪ್ರತಿಭಾವಂತ ಮತ್ತು ಸಹಜ ನಟ ಎಂಬ ಕಾರಣಕ್ಕಾಗಿ ಆತನಿಗೆ ಸ್ವಾಗತ ಹೇಳಬಹುದು.

● ಶೆಣೈ



ಸರ್ಕಾರದ ವಿರುದ್ಧ ಪಾಟೀಲ್ ಸೆಲ್ಯೂಟ್

ಸ್ವತಃ ಬಿ.ಸಿ. ಪಾಟೀಲರೇ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ!

ತಮ್ಮ ನಿರ್ದೇಶನದ 'ಸೆಲ್ಯೂಟ್' ಚಿತ್ರದಲ್ಲಿ ಪಾಟೀಲರು ತಮ್ಮ ಜೀವನದಲ್ಲಿ ನಡೆದ ಘಟನೆಗಳನ್ನೇ ಕಥಾವಸ್ತುವಾಗಿಸಿದ್ದಾರಂತೆ. ಪೊಲೀಸ್ ನೌಕರಿಯ ಅನುಭವಗಳು ನಂತರ ಅವರ ರಾಜಕೀಯ ಅನುಭವ... ಎಲ್ಲವನ್ನೂ ಒಟ್ಟು ಸೇರಿಸಿ 'ಸೆಲ್ಯೂಟ್' ಹೊಡೆದಿದ್ದಾರಂತೆ.

ಇನ್ನೊಂದು ಇಂಟರೆಸ್ಟಿಂಗ್ ವಿಚಾರವೆಂದರೆ, ಪಾಟೀಲರು ತಮ್ಮ ಚಿತ್ರದ ಮುಖ್ಯ ಖಳನಾಯಕನಿಗೆ ಜನಾರ್ದನ ರೆಡ್ಡಿ ಎಂದು ಹೆಸರಿಟ್ಟಿದ್ದರಂತೆ. ಆದರೆ ಸೆನ್ಸಾರ್‌ನವರು ಆ ಹೆಸರನ್ನು ತೆಗೆಯಲೇ ಬೇಕು ಎಂದು ಪಟ್ಟು ಹಿಡಿದರಂತೆ. ಮಾತ್ರವಲ್ಲ, ಆಡಳಿತಾರೂಢ ಬಿಜೆಪಿ ಪಕ್ಷ ಮತ್ತು ಅದರ ಮಂತ್ರಿಗಳ ಚರಿತ್ರೆಯನ್ನು ಬಿಚ್ಚಿಡುವ ಅನೇಕ ದೃಶ್ಯಗಳನ್ನು ಚಿತ್ರದಿಂದ ತೆಗೆಯಬೇಕು ಎಂದೂ ತಾಕೀತು ಮಾಡಿದರಂತೆ.

ಅಂದರೆ, ಬಳ್ಳಾರಿಯಲ್ಲಿ ರೆಡ್ಡಿಗಳ ಸರ್ವಾಧಿಕಾರದ ಆಡಳಿತವನ್ನು ಪಾಟೀಲರು ತನ್ನ ಚಿತ್ರದಲ್ಲಿ ಪರೋಕ್ಷವಾಗಿ ಚಿತ್ರಿಸಿ ರಾಜಕೀಯ ಮಾಡಿದ್ದಾರೆಂದಾಯಿತು. ಬಹುಶಃ ಇದೇ ಕಾರಣಕ್ಕೆ ಮೊನ್ನೆಯ ಐದು ಅಸೆಂಬ್ಲಿ ಕ್ಷೇತ್ರಗಳ ಉಪಚುನಾವಣೆ ಸಂದರ್ಭದಲ್ಲಿ ಚುನಾವಣಾ ಮಂಡಳಿ ಈ ಚಿತ್ರದ ಬಿಡುಗಡೆಗೆ ಆಕ್ಷೇಪವನ್ನು ವ್ಯಕ್ತಪಡಿಸಿ ಇದು ಬಿಡುಗಡೆಯಾಗದಂತೆ ತಡೆಹಿಡಿದಿತ್ತು.

'ದೇವನಹಳ್ಳಿ' ಎಂಬ ಚಿತ್ರದಲ್ಲಿ "ದೇವೇಗೌಡರು ಈ ರಾಜ್ಯದಲ್ಲಿ ಹುಟ್ಟಬಾರದು" ಎಂಬ ಹಾಡನ್ನು ಹಾಕಿ ನಿರ್ದೇಶಕ ಪಲ್ಲಕ್ಕಿ ರಾಧಾಕೃಷ್ಣ ಸಾಕಷ್ಟು ಪ್ರಚಾರ ಪಡೆದಿದ್ದರು. ಅದರ ಬಗ್ಗೆ ಪಲ್ಲಕ್ಕಿ ಅವರನ್ನು ಕೇಳಿದರೆ ಅವರು ಹಾಡಿನ ಸಾಲುಗಳನ್ನು ಸಮರ್ಥಿಸಿಕೊಂಡಿದ್ದರು. ಕೊನೆಗೆ ಎಲ್ಲರಿಗೂ ಗೊತ್ತಾಯಿತು ಪಲ್ಲಕ್ಕಿಗೆ ಬಳ್ಳಾರಿ ಗಣಿ ಧಣಿ ಶ್ರೀರಾಮುಲುನ ಶ್ರೀರಕ್ಷೆ ಇದ್ದುದರಿಂದ ಅವರು ಹೀಗೆ ಬರೆದಿದ್ದರು ಎಂಬುದು.

ಈಗ ಪಾಟೀಲರು ಸ್ವತಃ ಶಾಸಕರಾಗಿರುವುದರಿಂದ ಮತ್ತು ಈ ಚಿತ್ರವನ್ನು ಅವರೇ ನಿರ್ಮಿಸಿ, ನಿರ್ದೇಶಿಸಿ, ನಟಿಸಿರುವುದರಿಂದ ಮುಂದಿನವಾರ ಬಿಡುಗಡೆಯಾಗುವ 'ಸೆಲ್ಯೂಟ್' ರಾಜಕೀಯ ವಲಯದಲ್ಲಿ ಬಿರುಗಾಳಿಯನ್ನು ಎಬ್ಬಿಸಬಹುದು. ●

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 07-10-2009 RNI No. KARKAN2005/

ಜಯಮಾಲಾ ಮುಂದೆ ತಾರಾ ವರ್ಚಸ್ಸು



ಯಡಿಯೂರಪ್ಪನವರ ದರ್ಬಾರಿನಲ್ಲಿ ಚಿತ್ರರಂಗದವರಿಗೆ ನಿರೀಕ್ಷಿಸಿದಕ್ಕಿಂತಲೂ ಹೆಚ್ಚು ಲಾಭವಾಗಿದೆ. ಸಿನಿಮಾ ಅಕಾಡೆಮಿ, ಸಬ್ಸಿಡಿ ಚಿತ್ರಗಳನ್ನು 20ರಿಂದ 50ಕ್ಕೆ ಏರಿಸಿದ್ದು, ಅಮೃತ ಭವನ ನಿರ್ಮಾಣ, ಗೂಂಡಾ ಆಕ್ಟ್ ಕಾಯ್ದೆ ಜಾರಿ... ಇಂತಹ ಅನೇಕ ಯೋಜನೆಗಳನ್ನು ಜಾರಿಗೆ ತಂದು ಸಿನಿಮಾದವರ ಪ್ರೀತಿಗೆ ಪಾತ್ರರಾಗಿದ್ದಾರೆ.

ಆದರೂ ಯದ್ದಿಗೆ ಸಿನಿಮಾದವರಿಗಾಗಿ ಇನ್ನೂ ಏನಾದರೂ ಮಾಡಬೇಕು ಎಂಬ ಹಂಬಲವಂತೆ. ಆದ್ದರಿಂದ ಜನವರಿಯಲ್ಲಿ ಖಾಲಿಯಾಗಲಿರುವ ಸಾಹಿತಿ ಮತ್ತು ನಾಟಕಕಾರ ಚಂದ್ರಶೇಖರ ಕಂಬಾರ ಅವರ ವಿಧಾನಪರಿಷತ್ ಸ್ಥಾನಕ್ಕೆ ಯಾರಾದರೂ ಸಿನಿಮಾದವರನ್ನು ಆಯ್ಕೆ ಮಾಡಬೇಕು ಎಂದು ನಿರ್ಧರಿಸಿದ್ದಾರಂತೆ.

ಅದರಂತೆ ಸಿನಿಮಾ ಕ್ಷೇತ್ರದಲ್ಲಿ ಪಾರ್ವತಮ್ಮನವರ ಸಹೋದರ ಚಿನ್ನೇಗೌಡ, ಛೇಂಬರ್ ಉಪಾಧ್ಯಕ್ಷ ಸಾರಾ ಗೋವಿಂದು, ಛೇಂಬರ್ ಅಧ್ಯಕ್ಷೆ ಜಯಮಾಲಾ, ಈಗಾಗಲೇ ಬಿಜೆಪಿಯ ಪ್ರಮುಖ ವಕ್ತಾರಳಾಗಿರುವ ತಾರಾ, ನಿರ್ಮಾಪಕ ಸಂಘದ ಮಾಜಿ ಅಧ್ಯಕ್ಷ ಬಸಂತ್ ಕುಮಾರ್ ಪಾಟೀಲ್, ಚಿರಯೌವ್ವನೆ ಬಿ. ಸರೋಜಾದೇವಿ, ಭಾರತಿ ವಿಷ್ಣುವರ್ಧನ್, ರಾಷ್ಟ್ರಪ್ರಶಸ್ತಿ ವಿಜೇತೆ ಉಮಾಶ್ರೀ ಹಾಗೂ ಇನ್ನೂ ಅನೇಕರ ಹೆಸರುಗಳು ಚಾಲ್ತಿಯಲ್ಲಿವೆ. ಆಶ್ಚರ್ಯವೆಂದರೆ, ಇತ್ತೀಚೆಗಷ್ಟೇ ಮುಖ್ಯಮಂತ್ರಿಯವರನ್ನು ಖಾಸಗಿ ಚಾನೆಲ್ ಒಂದರಲ್ಲಿ ಸಂದರ್ಶನ ಮಾಡಿದ ಯುವ ನಾಯಕಿ ರಮ್ಯಾ ಹೆಸರು ಕೂಡಾ ಈ ಪಟ್ಟಿಯಲ್ಲಿದೆಯಂತೆ. ಆದರೆ ಸದ್ಯಕ್ಕೆ ತಾರಾ ಮತ್ತು ಜಯಮಾಲಾ ಅವರ ಹೆಸರುಗಳು ಮಾತ್ರ ಪಕ್ಷದಲ್ಲಿ ಗಂಭೀರವಾಗಿ ಚರ್ಚೆಯಾಗುತ್ತಿದೆಯಂತೆ. ಇವರಿಬ್ಬರಲ್ಲಿ ಯಾರನ್ನು ಶಾಸಕಿಯಾಗಿ ಆಯ್ಕೆ ಮಾಡಿದರೆ ಪಕ್ಷದ ವರ್ಚಸ್ಸಿಗೆ ಲಾಭವಾಗಬಹುದು ಎಂಬ ಬಗ್ಗೆ ಲೆಕ್ಕಾಚಾರ ನಡೆಯುತ್ತಿದೆ. ಈ ಮಧ್ಯೆ ಶ್ರುತಿಯನ್ನು ರಾಜ್ಯ ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾಗಿ ಮಾಡಿದ ನಂತರ ಆಕೆ ವರ್ತಿಸಿದ ರೀತಿಯಿಂದ ಪಕ್ಷಕ್ಕೆ ತೊಂದರೆಯಾಗಿದ್ದನ್ನು ನಾಯಕರು ಇನ್ನೂ ಮರೆತಿಲ್ಲ.



ಅದೇನೇ ಇರಲಿ, ಉಮಾಶ್ರೀ ನಂತರ ಚಿತ್ರರಂಗದವರನ್ನು ಯಾವ ಸರಕಾರವೂ ವಿಧಾನ ಪರಿಷತ್ತಿಗೆ ಆಯ್ಕೆ ಮಾಡಿಲ್ಲ. ಕನಿಷ್ಠ ಈ ವರ್ಷವಾದರೂ ಅಂತಹ ಗೌರವಕ್ಕೆ ಚಿತ್ರರಂಗದವರು ಪಾತ್ರರಾಗುತ್ತಿದ್ದಾರೆ ಎಂಬುದೇ ಸಂತೋಷದ ವಿಷಯ.

ಕೊಬ್ಬಿದ ಹುಡುಗನೂ ಜಂಭದ ಹುಡುಗಿಯೂ



ಸುದೀಪ್ ಮತ್ತು ರಮ್ಯಾ ಕಿತ್ತಾಡಿಕೊಂಡಿದ್ದು ಈಗಾಗಲೇ ಮಾಧ್ಯಮದಲ್ಲಿ ವಿಸ್ತೃತವಾಗಿ ಚರ್ಚೆಯಾಗಿದೆ. ಇಲ್ಲಿ ರಮ್ಯಾ ಮಾಡಿದ್ದು ಸರಿಯೋ ಅಥವಾ ಸುದೀಪ್ ಮಾಡಿದ್ದು ಸರಿಯೋ ಎಂಬ ಪ್ರಶ್ನೆ ಉದ್ಭವವಾಗುವುದೇ ಇಲ್ಲ, ಅದರ ಬದಲಿಗೆ "ಸುದೀಪ್‌ಗೆ ಕೊಬ್ಬಿತ್ತು; ರಮ್ಯಾಳಿಗೆ ಜಂಭವಿತ್ತು; ಇಬ್ಬರಿಗೂ ಆಗಬೇಕಿದ್ದು ಆಯಿತು'' ಎಂದು ಉದ್ಯಮದವರು ಆನಂದಪಡುತ್ತಿದ್ದಾರೆ.

ನಿಜ, ಇವರಿಬ್ಬರೂ ಕಚ್ಚಾಡಿಕೊಂಡಿದ್ದು ಇದೇ ಮೊದಲ ಬಾರಿಯಲ್ಲ, ಹಾಗೆ ನೋಡಿದರೆ, ಇದೊಂದು ರಾಜ್ಯಮಟ್ಟದ ಸುದ್ದಿಯಾಗುವಷ್ಟು ದೊಡ್ಡ ವಿಷಯವೂ ಅಲ್ಲ, ಬಹುತೇಕ ಎಲ್ಲ ಸಿನಿಮಾಗಳಲ್ಲಿ ನೃತ್ಯ ನಿರ್ದೇಶಕರಿಗೂ ಕಲಾವಿದರಿಗೂ ಜಟಾಪಟಿ ನಡೆಯುತ್ತಲೇ ಇರುತ್ತದೆ. ಯಾಕೆಂದರೆ ನೃತ್ಯ ನಿರ್ದೇಶಕ ಹಾಕಿಕೊಟ್ಟ ಕ್ಲಿಷ್ಟಕರ ಹೆಜ್ಜೆಗಳನ್ನು ಕಲಾವಿದರು ಹಾಕಲು ಪ್ರಯಾಸ ಪಡುತ್ತಾರೆ. ಆ ಹೆಜ್ಜೆ ಹಾಕುವ ತನಕ ಕೊರಿಯೋಗ್ರಾಫರ್‌ಗಳು ತಮ್ಮ ಪಟ್ಟನ್ನು ಬಿಡುವುದಿಲ್ಲ. ಅಂಥ ಸಂದರ್ಭದಲ್ಲಿ ಸಣ್ಣದೊಂದು ಕ್ಲಾಷ್ ನಡೆಯುತ್ತದೆ. ಆನಂತರ ಎಲ್ಲರೂ ಅದನ್ನು ಮರೆತುಬಿಡುತ್ತಾರೆ.

ಅದೇರೀತಿ ನಿರ್ದೇಶಕನಿಗೂ ನಾಯಕಿಗೂ ಅನೇಕ ಸಂದರ್ಭಗಳಲ್ಲಿ ಮನಸ್ತಾಪ ಉಂಟಾಗುವುದು ಸಹಜ. ಉದ್ಧಾಹರಣೆಗೆ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರಗಳಲ್ಲಿ ಇವೆಲ್ಲವೂ ತುಂಬಾ ಮಾಮೂಲಿಯಾಗಿತ್ತು. ಅವರು ಅದೆಷ್ಟೋ ನಾಯಕನಾಯಕಿಯರಿಗೆ ಸೆಟ್ಟಿನಲ್ಲಿ ಕೆನ್ನೆಗೆ ಹೊಡೆದ ಉದಾಹರಣೆಗಳೂ ಬೇಕಾದಷ್ಟಿವೆ. ಅಂತಹ ಸಣ್ಣಪುಟ್ಟ ಮನಸ್ತಾಪಗಳನ್ನು ಚಿತ್ರ ತೆರೆಕಂಡನಂತರ ಎಲ್ಲರೂ ಮರೆತು ಒಂದೇ ಕುಟುಂಬದ ಸದಸ್ಯರಂತೆ ಇರುತ್ತಿದ್ದಾರೆ.

ಆದರೆ ಯಾವಾಗ ನಿರ್ದೇಶಕ ಒಬ್ಬ ನಾಯಕನಟನೂ ಆಗುತ್ತಾನೋ ಆಗ ಸಮಸ್ಯೆಗಳು ಇನ್ನಷ್ಟು ಜಟಿಲಗೊಳ್ಳುತ್ತವೆ. ಸುದೀಪ್ ಮತ್ತು ರಮ್ಯಾ ವಿಷಯದಲ್ಲಿ ನಡೆದದ್ದೂ ಅದೇ. ಸುದೀಪ್ ಸ್ಥಾನದಲ್ಲಿ ಒಬ್ಬ ನಿರ್ದೇಶಕ ಇದ್ದಿದ್ದಲ್ಲಿ ಬಹುಶಃ ರಮ್ಯಾಳ ಟೆಂಪರ್‌ಮೆಂಟು ಇಷ್ಟು ಎತ್ತರಕ್ಕೆ ಏರುತ್ತಿರಲಿಲ್ಲವೋ ಏನೋ? ಸುದೀಪ್ ಹೇಳಿ ಕೇಳಿ ಈಗ ಹಿಂದಿಯಲ್ಲಿ ನಟಿಸಿರುವ ಖ್ಯಾತಿ ಹೊಂದಿದ್ದಾರೆ. ಜೊತೆಗೆ ಸದ್ಯದಲ್ಲೇ ರಾಂ ಗೋಪಾಲ್ ವರ್ಮಾ ನಿರ್ಮಾಣ ಸಂಸ್ಥೆಯ ಚಿತ್ರವೊಂದನ್ನು ನಿರ್ದೇಶಿಸುವ ಆಫರ್ ಬೇರೆ ಇರುವ ಸಂತಸದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ಸುದೀಪ್ ಸ್ವಲ್ಪ ಹೆಚ್ಚು ಕಟ್ಟುನಿಟ್ಟಿನ ವ್ಯಕ್ತಿ ಥರ ಪೋಸ್ ಕೊಟ್ಟಿರಬಹುದು. ಅದನ್ನು ನೋಡಿ ರಮ್ಯಾ "ಈತ ನಮ್ ಜೊತೆ ಬೆಳೆದ ನಾಯಕ ತಾನೇ'' ಎಂದು ಸಲುಗೆ ಪಡೆದಿರಬಹುದು. ಇವೆಲ್ಲವೂ ಇಬ್ಬರ ನಡುವಿನ ಕೆಮಿಸ್ಟ್ರಿ ಚೆನ್ನಾಗಿದ್ದಾಗ ಸಹಜವಾಗಿ ನಡೆದುಹೋಗುತ್ತದೆ. ಆದರೆ ಇವರಿಬ್ಬರ ನಡುವೆ ಚಿಕ್ಕ ಮನಸ್ತಾಪವಿದ್ದರೂ ಸಾಕು ಇಂತಹ ಸಣ್ಣಪುಟ್ಟ ಘಟನೆಗಳಿಗೆ ರೆಕ್ಕೆಪುಕ್ಕ ಸೇರಿ ಬೃಹದಾಕಾರದ ಸುದ್ದಿಯಾಗುತ್ತದೆ.

ವೈಯಕ್ತಿಕವಾಗಿ ಹೇಳುವುದಾದರೆ, ಸುದೀಪ್ ಮತ್ತು ರಮ್ಯಾ ಇಬ್ಬರೂ ಬಹಳ ಸ್ವಾಭಿಮಾನದ ಕಲಾವಿದರು. ಸುದೀಪ್ ಈ ಹಿಂದೆ ಅನೇಕ ನಿರ್ದೇಶಕರೊಂದಿಗೆ ಜಗಳವಾಡಿ ಕುಖ್ಯಾತಿ ಹೊಂದಿದ್ದಾರೆ. ರಮ್ಯಾಳಂತೂ ಜಗಳಗಂಟಿಯೆಂದೇ ಖ್ಯಾತಿಗಳಿಸುವಷ್ಟು ಬೇರೆ ನಿರ್ದೇಶಕರೊಂದಿಗೆ ಕಿತ್ತಾಡಿಕೊಂಡಿದ್ದಾಳೆ. ಅಷ್ಟೇ ಏಕೆ ಸ್ವತಃ ಸುದೀಪ್ ಮತ್ತು ರಮ್ಯಾ ಯೋಗರಾಜ ಭಟ್ ನಿರ್ದೇಶನದ 'ರಂಗ ಎಸ್ಸೆಸ್ಸೆಲ್ಸಿ' ಚಿತ್ರದಲ್ಲಿ ನಟಿಸಿದ ನಂತರ ಬಹಳ ಸಮಯ ಒಬ್ಬರನ್ನೊಬ್ಬರು ಮಾತನಾಡಿಸುತ್ತಲೇ ಇರಲಿಲ್ಲ. "ಸುದೀಪ್‌ಗೆ ಹೀರೋಯಿ[...] ತಬ್ಬಿಕೊಳ್ಳಲೂ ಬರೊಲ್ಲ'' ಎಂದು ಆಗ ರಮ್ಯಾ ಲೇವಡಿ ಮಾಡಿ[...] ಇಬ್ಬರೂ ಜಗಳಕೋರರಾದ್ದರಿಂದ ಅವರಿಬ್ಬರನ್ನು ಸೇರಿಸುವ ದುಸ್ಸಾಹ[...] ಬೇಡ ಎಂದು ನಿರ್ದೇಶಕರು ಈ ಜೋಡಿಯ ಆಸೆಯನ್ನು ಕೈಬಿಟ್ಟಿ[...]

ಆದರೆ ಹೊಸ ನಿರ್ದೇಶಕ ಮಹೇಶ್ 'ಮುಸ್ಸಂಜೆ ಮ[...] ಚಿತ್ರದಲ್ಲಿ ಸುದೀಪ್ ರಮ್ಯಾರನ್ನು ಒಟ್ಟು ಸೇರಿಸುವ ಧೈರ್ಯ ಮಾಡಿ[...] ಚಿತ್ರ ಸೂಪರ್ ಹಿಟ್ ಆಯಿತು. ಅದಾದನಂತರ ಆ ಜೋಡಿ [...] ಮೂರು ಚಿತ್ರಗಳಲ್ಲಿ ನಟಿಸುತ್ತಿದೆ. ಇಂತಹ ಸಂದರ್ಭದಲ್ಲಿ ಈ ಜ[...] ನಡೆದು ಈಗ ಇತ್ಯರ್ಥಗೊಂಡಿದೆ.

ಆದರೂ ಒಂದು ಮಾತು ಕೇಳಿ. ನೀವು ಖಾಸಗಿಯಾಗಿ ರಮ[...] ಬಗ್ಗೆ ಸುದೀಪ್‌ಅನ್ನು ಪ್ರಶ್ನಿಸಿ. ಆತ ಹೇಳುತ್ತಾನೆ "ರಮ್ಯಾ[...] ಪರ್ಯಾಯವಾಗಿ ಮತ್ತೊಬ್ಬ ನಟಿಯನ್ನು ಕನ್ನಡದಲ್ಲಿ ಕಲ್ಪಿಸಿಕೊಳ್ಳ[...] ಸಾಧ್ಯವಾಗುತ್ತಿಲ್ಲ.'' ಎಂದು. ಹಾಗೆಯೇ ರಮ್ಯಾಳ ಬಳಿ ಸುದೀ[...] ಬಗ್ಗೆ ಪ್ರಶ್ನಿಸಿ. ಆಕೆ ಅರ್ಧ ಕನ್ನಡ, ಅರ್ಧ ಇಂಗ್ಲಿಷ್‌ನಲ್ಲಿ [...] ಉಲಿಯುತ್ತಾಳೆ ಗೊತ್ತಾ? "ಐನೋ ಸುದೀಪ್ ಇಸ್ ವೆರಿ ಟ್ಯಾಲೆಂಟೆ[...] ಸಿನಿಮಾ ಅಂದ್ರೆ ಸುದೀಪ್‌ಗೆ ಬರೀ ಕೆಲಸವಲ್ಲ, ಪ್ಯಾಶನ್. ಆತ ನ[...] ಮಾತ್ರವಲ್ಲ ಸಿನಿಮಾದ ಎಲ್ಲ ವಿಭಾಗಗಳಲ್ಲೂ ಒಳ್ಳೆಯ ಜ[...] ಹೊಂದಿದ್ದಾನೆ'' ಎನ್ನುತ್ತಾಳೆ.

ಈಗ ನೀವೇ ಹೇಳಿ ಈ ಕೊಬ್ಬಿದ ಹುಡುಗ ಮತ್ತು ಜಂ[...] ಹುಡುಗಿಯ ವಿವಾದ ಅಗತ್ಯವಿತ್ತಾ? ಜಸ್ಟ್ ಒಂದು ಮಾತನ್ನ[...] ನಾವು ಅವರಿಬ್ಬರಿಗೆ ಹೇಳಬಹುದು. ನಿಮ್ಮ ಅಹಂ ಮತ್ತು [...] ಪ್ರತಿಷ್ಠೆ ಬದಿಗಿಟ್ಟು ಒಂದೊಂದೇ ಮೆಟ್ಟಲೇರುತ್ತಾ ಯಶಸ್ಸನ್ನು ಕಾ[...]

● ಶೆ[...]

ನಕಲು ಮನಸಾರೆ?



'ಗಾಳಿಪಟ' ಚಿತ್ರವನ್ನು ಬಿಡುಗಡೆಗೆ ಎರಡು ದಿನ ಮೊದಲೇ ಪತ್ರಕರ್ತರಿಗೆ ತೋರಿಸುವ ಧೈರ್ಯ ಮಾಡಿದ್ದ ನಿರ್ದೇಶಕ ಯೋಗರಾಜ ಭಟ್ ಈ ಬಾರಿ ಗಾಂಧಿನಗರದ ಮಾಮೂಲಿ ಸ್ಟೈಲಿಗೆ ಶರಣಾಗಿದ್ದಾರೆ. ಯಾಕೆಂದರೆ ಕಳೆದ ಬಾರಿ ದಿನಪತ್ರಿಕೆಯೊಂದು ಚಿತ್ರ ಬಿಡುಗಡೆಯ ಮುನ್ನವೇ ಮುಖಪುಟದಲ್ಲೇ 'ಗಾಳಿಪಟ'ವನ್ನು ವಿಮರ್ಶಿಸಿ ಆ ಸಿನಿಮಾವನ್ನು ಚಿಂದಿಚಿತ್ರಾನ್ನ ಮಾಡಿತ್ತು. ಆ ಕಹಿ ಅನುಭವ ಭಟ್ಟರನ್ನು ಈಗ ಮೆದುವಾಗಿಸಿದೆ. ಹೀಗಾಗಿ ಅವರ ನಿರ್ದೇಶನದ 'ಮನಸಾರೆ' ಚಿತ್ರದ ಪೂರ್ವಭಾವಿ ಪ್ರದರ್ಶನವನ್ನು ಪತ್ರಕರ್ತರಿಗೆ ವಿಶೇಷವಾಗಿ ಮೊದಲೇ ತೋರಿಸುವ ಬದಲು ಬಿಡುಗಡೆಯ ದಿನದಂದೇ ಥಿಯೇಟರಿನಲ್ಲೇ ತೋರಿಸುತ್ತಿದ್ದಾರೆ. ಅಂದರೆ, ಈ ಪತ್ರಿಕೆ ನಿಮ್ಮ ಕೈ ಸೇರುವ ಶುಕ್ರವಾರದಂದು ನಾವು 'ಮನಸಾರೆ' ನೋಡಲಿದ್ದೇವೆ.


ಆದರೂ ಯೋಗರಾಜ್ ಭಟ್‌ಗೆ ಹಲವು ಪತ್ರಕರ್ತರ ಬಗ್ಗೆ ಅದೇನು ಪ್ರೀತಿಯೋ ಏನೋ? ಕೆಲವು ಸಿನಿಮಾ ಪತ್ರಕರ್ತರಿಗೆ ಮಾತ್ರ ಅವರು ಮುಂಗಡವಾಗಿ 'ಮನಸಾರೆ'ಯನ್ನು ತೋರಿಸಿದ ಸುದ್ದಿಯೂ ಕೇಳಿಬಂದಿದೆ. ಆದರೆ ಸೋಜಿಗದ ಸಂಗತಿ ಯಾವುದೆಂದರೆ ಈಗ ಅದೇ ಪತ್ರಕರ್ತರು 'ಮನಸಾರೆ' ಹುಚ್ಚಾಸ್ಪತ್ರೆಯಿಂದ ಬಂದ ಹುಚ್ಚನ ಕಥೆ ಎಂದು ಲೇವಡಿ ಮಾಡುತ್ತಿದ್ದಾರೆ. ಓರ್ವ ಪತ್ರಕರ್ತ ಹೇಳುವ ಪ್ರಕಾರ ಇದು ಹಿಂದಿಯಲ್ಲಿ ಬಂದುಹೋದ 'ಕ್ಯೂಂ ಕಿ' ಚಿತ್ರದ ನಕಲಂತೆ. ಒಟ್ಟಾರೆಯಾಗಿ 'ಮನಸಾರೆ' ಅಸಲೋ, ನಕಲೋ ಎಂದು ಸದ್ಯದಲ್ಲೇ ನಿಮಗೂ ಗೊತ್ತಾಗಲಿದೆ.



ಆದರೆ ಒಂದು ಮಾತಂತೂ ನಿಜ. ಈ ಚಿತ್ರ ಯೋಗರಾಜ ಭಟ್ಟರ ಪಾಲಿಗೆ ಬಹಳ ಮುಖ್ಯವಾಗುತ್ತದೆ. ಚಿತ್ರ ಗೆದ್ದರೆ ದಿಗಂತನಂತಹ ಚಾಲೊಲೇಟ್ ಹೀರೋನನ್ನು ಸ್ಟಾರ್ ಮಾಡಿದ ಕೀರ್ತಿಗೆ ಒಳಗಾಗುತ್ತಾರೆ. ಇಲ್ಲದಿದ್ದರೆ, ಅವರೇ ದಿಗಂತನಂತಾಗುತ್ತಾರೆ. ಈ ವರ್ಷ ನಿರೀಕ್ಷಿಸಿದ ದೊಡ್ಡ ದೊಡ್ಡ ಚಿತ್ರಗಳೆಲ್ಲಾ ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ್ದರಿಂದ ಈ ಚಿತ್ರದ ಬಗ್ಗೆ ಗಾಂಧಿನಗರದ ಜನರಿಗೆ ವಿಶೇಷವಾದ ಕುತೂಹಲ ಇದ್ದೇ ಇದೆ.

ಬಾಡಿಗೆಗೂ ಸಾಕಾಗ್ಲಿಲ್ಲ!





ಎಸ್. ನಾರಾಯಣ್ ಮತ್ತು 'ಮುಸ್ಸಂಜೆ ಗೆಳ[...] ಖ್ಯಾತಿಯ ಶ್ರೀನಿವಾಸ್ ಈಗ ಒಂದೇ ದೋಣಿಯ [...] ಪ್ರಯಾಣಿಕರಾಗಿದ್ದಾರೆ. ಅದೇನೆಂದರೆ, ಇವರಿಬ್ಬರೂ ತ[...] ನಿರ್ಮಾಣ ಮತ್ತು ನಿರ್ದೇಶನದ ಚಿತ್ರದ ಪ್ರಿಂಟ್‌ಗಳ[...] ವಾಪಸ್ ಪಡೆಯಲು ಥಿಯೇಟರಿನವರಿಗೇ ಕಾಸು ಕೊ[...] ಬಂದಿದ್ದಾರೆ. ಅದರರ್ಥ ಆ ಚಿತ್ರಗಳ ಕಲೆಕ್ಷನ್ ಥಿಯೇಟ[...] ಬಾಡಿಗೆಗೂ ಸಾಕಾಗಲಿಲ್ಲ ಎಂದು.

ನಾರಾಯಣ್ ನಿರ್ದೇಶನದ 'ಚೆಲುವಿನ ಚಿಲಿಪಿಲಿ'ಯ[...] ಅವರ ಮುದ್ದಿನ ಮಗ ಪಂಕಜ್ ಹೀರೋ ಆಗಿ ನಟಿಸಿ[...] 'ಮುಸ್ಸಂಜೆಯ ಗೆಳತಿ' ಚಿತ್ರದಲ್ಲಿ ಶ್ರೀನಿವಾಸ್‌ನೇ ಹೀರೋ[...] ಆತನ ಮುದ್ದಿನ ಮಗಳು ಶಾಲಿನಿಯೇ ನಾಯ[...] ಇವರಿಬ್ಬರಿಗೂ ತಮ್ಮ ಮಕ್ಕಳ ಮೇಲಿನ ವ್ಯಾಮೋಹಕ್ಕ[...] ಕೋಟಿಕೋಟಿ ರೂಪಾಯಿ ಕಳೆದುಕೊಂಡಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44